ಶ್ರೀ ಟಿ. ಮರಿಯಪ್ಪನವರು.—ನಮ್ಮ ಗಮನಕ್ಕೆ ಬಂದಿಲ್ಲ. ಎಲ್ಲಿಗೆ ಕಳುಹಿಸಿಲ್ಲವೆಂದು ತಿಳಿಸಿದರೆ ಕೂಡಲೇ ಸರಿಪಡಿಸುತ್ತೇವೆ.

ಶ್ರೀ ಕೆ. ವಿ. ಶಂಕರ ಗೌಡರು.—ಮೈಸೂರು ಡಿಸ್ಟ್ರಿಕ್ಟಿಗೆ 3,000 ಗಾಡಿ ಪಟ್ಟೆಗಳನ್ನು ಕಳುಹಿಸಿಕೊಟ್ಟು ಬೇರೆ ಡಿಸ್ಟ್ರಿಕ್ಟುಗಳಿಗೆ 800 ಪಟ್ಟೆಗಳನ್ನು ಮಾತ್ರ ಕಳುಹಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಮರಿಯಪ್ಪನವರು.—ಹಾಗೆ ವ್ಯತ್ಯಾಸ ಮಾಡಿರುವುದೇನೂ ಕಂಡು ಬಂದಿಲ್ಲ. ಇದಕ್ಕಾಗಿಯೇ ಭದ್ರಾವತಿ ಕಾರ್ಖಾನೆಯವರು ಒಂದು ಸರಿಯಾದ ಪಟ್ಟಿ ಮಾಡಿಕೊಂಡು ಪ್ರತಿಯೊಂದು ಕಡೆಗೂ ಪ್ಲಾನ್ ಪ್ರಕಾರ ಕಳುಹಿಸುತ್ತಿದ್ದಾರೆ. ಪ್ರಾಯಶಃ ಇನ್ನು 15-20 ದಿವಸಗಳಲ್ಲಿ ಎಲ್ಲಾ ಕಡೆಗೂ ತಲುಪುತ್ತದೆ.

ಶ್ರೀ ಕೆ. ವಿ. ಶಂಕರ ಗೌಡರು.—ದರದ ವಿಷಯದಲ್ಲಿ ಅವರಿಗೆ ಸರಿಯಾಗಿ ತಿಳಿಸಿಲ್ಲವೆಂಬುದು ಗೊತ್ತೇ?

ಶ್ರೀ ಟಿ. ಮರಿಯಪ್ಪನವರು.—ಹಿಂದಿನ ದರದ ಪ್ರಕಾರವೇ ಸರಬರಾಯಿ ಮಾಡಬೇಕೆಂದು ತಿಳಿಸಿದ್ದೇವೆ.

ಶ್ರೀ ಕೆ. ವಿ. ಶಂಕರ ಗೌಡರು.—ಈಗ ಸರಿಯಾಗಿ ಸರಬರಾಯಿಯಾಗದೆ ಇರುವುದರಿಂದ ರೈತರ ವ್ಯವಸಾಯಕ್ಕೆ ತೊಂದರೆಯಾಗುವುದಿಲ್ಲವೇ?

ಶ್ರೀ ಟಿ. ಮರಿಯಪ್ಪನವರು.—ಹೀಗೆ ತೊಂದರೆಯಾಗಿರುವ ಅಂಶವನ್ನು ತಿಳಿಸಿ ಇಂಡಿಯಾ ಸರ್ಕಾರದವರಿಗೆ 30-40 ಕಾಗದ ಪತ್ರಗಳನ್ನು ಬರೆದು ಕಳುಹಿಸಿದ್ದೇವೆ.

Sir, may I suggest one thing? The Chair may be pleased to take up a similar question, Question No. 138 also along with this.

SOME HON'BLE MEMBERS.—No time.

ಶ್ರೀ ಬಿ. ಎನ್. ಬೋರಣ್ಣಗೌಡರು (ಹಾಸನ ಜಿಲ್ಲೆ).—(f) ಪ್ರಶ್ನೆಗೆ ಉತ್ತರದಲ್ಲಿ ಒಂದೇ ಒಂದು ಕೇಸಿನಲ್ಲಿ ಹಾಗೆ ಹಣ ದುರುಪಯೋಗ ಆಗಿರುವುದೆಂದು ಹೇಳಿದ್ದೀರಿ. ಇನ್ನಾವುದೂ ಅಂಥಾದ್ದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಟಿ. ಮರಿಯಪ್ಪನವರು.—ಇನ್ನಾವುದೂ ಬಂದಿಲ್ಲ.

ಶ್ರೀ ಬಿ. ಎನ್. ಬೋರಣ್ಣಗೌಡರು.—ತಾಲ್ಲೂಕು ಡೆವಲಪ್ ಕಮಿಟಿ ಚೇರ್ಮನ್ನರು ಈ ಸೊಸೈಟಿಯಿಂದ ದುಡ್ಡು ತೆಗೆದುಕೊಂಡು ಹೋಗಿ ಎರಡು ಮೂರು ತಿಂಗಳಿನಿಂದ ತಮ್ಮಲ್ಲೇ ಇಟ್ಟುಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಮರಿಯಪ್ಪನವರು.—ಚಿಕ್ಕನಾಯಕನಹಳ್ಳಿಯಲ್ಲಿ ಹಾಗಾಗಿರುವುದು ನಮ್ಮ ಗಮನಕ್ಕೆ ಬಂದಿದೆ. ಹಾಗೆ ಮಾಡಿದ್ದರೆ ಅದು ತಪ್ಪು.

ಶ್ರೀ ಬಿ. ಎನ್. ಬೋರಣ್ಣಗೌಡರು.—ಈರೀತಿ ಅವರು ಮಾಡಿದ್ದರೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಟಿ. ಮರಿಯಪ್ಪನವರು.—ಕಾನೂನು ಪ್ರಕಾರ, ಹಾಗೆ ಮಾಡುವುದು ಹಣ ದುರುಪಯೋಗಪಡಿಸಿದಂತೆ ಆಗುತ್ತದೆ. ಅಂಥ ಸಂದರ್ಭಕ್ಕೆ ಸೂಕ್ತ ಕಾರ್ಯಕ್ರಮ ಕೈಕೊಳ್ಳುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಈ ಸೊಸೈಟಿಗಳು ಲಾಭದಲ್ಲಿ ಕೆಲಸ ಮಾಡುತ್ತಿವೆಯೇ ಅಥವಾ ನಷ್ಟದಲ್ಲಿ ಕೆಲಸ ಮಾಡುತ್ತಿವೆಯೋ?

ಶ್ರೀ ಟಿ. ಮರಿಯಪ್ಪನವರು.—ಪ್ರಾಯಶಃ ಎಲ್ಲಾ ಸೊಸೈಟಿಗಳೂ ಲಾಭದಲ್ಲೇ ಕೆಲಸ ಮಾಡುತ್ತಿವೆಯೆಂದು ಹೇಳಬಹುದು.

ಶ್ರೀ ಎಸ್. ರಂಗರಾಮಯ್ಯನವರು.—ಹಾಕಿರುವ ಬಂಡವಾಳದಲ್ಲಿ ಸುಮಾರು ಶೇಕಡ ಎಷ್ಟು ಲಾಭ ಬರುತ್ತಿದೆ?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಂ. ಸಿ. ವೆಂಕಟೇಶನ್‌ರವರು (ಮಂಡ್ಯ-ವಿಮ್ಮ ಪಂಗಡ).—ಈ ತಾಲ್ಲೂಕು ಸೊಸೈಟಿಗಳು ತಮ್ಮ ಅಕ್ಕಪಕ್ಕದ ಪ್ರದೇಶಗಳಲ್ಲಿ ತಯಾರಾಗತಕ್ಕ ಸಾಮಾನುಗಳನ್ನು ಕೊಂಡುಕೊಂಡು ಅವುಗಳನ್ನು ಮಾರಾಟ ಮಾಡುವುದಕ್ಕೆ ಸರಿಯಾದ ಮಾರ್ಕೆಟ್‌ಗಳನ್ನು ಕಂಡು ಹಿಡಿಯುವುದಕ್ಕೆ ಅವಕಾಶ ಮಾಡಿದ್ದೀರಾ?

ಶ್ರೀ ಟಿ. ಮರಿಯಪ್ಪನವರು.—ಕಚ್ಚಾ ಮಾಲುಗಳನ್ನು ದಾಸ್ತಾನು ಮಾಡಿ ಜನರಿಗೆ ಕೊಡಬೇಕು ಮತ್ತು ರೈತರು ಬೆಳೆದ ಪದಾರ್ಥಗಳನ್ನು ಶೇಖರಿಸಿ ಅವುಗಳಿಗೆ ಸರಿಯಾದ ಮಾರ್ಕೆಟ್ ದೊರಕಿಸಿ ಕೊಡಬೇಕೆಂಬ ದೇ ಈ ಸೊಸೈಟಿಗಳನ್ನು ಏರ್ಪಡಿಸಿರುವುದರ ಉದ್ದೇಶ.

ಶ್ರೀ ಎಂ. ಸಿ. ವೆಂಕಟೇಶನ್‌ರವರು.—ಹಳ್ಳಿಗಾಡಿನ ಜನರಿಗೆ ಬೇಕಾದ ಪದಾರ್ಥಗಳನ್ನು ತರಿಸಿಕೊಡುವ ವಿಷಯ ಕೇಳಲಿಲ್ಲ. ಹಳ್ಳಿಗಾಡಿನಲ್ಲಿ ತಯಾರಾಗುವ ಸಿದ್ಧ ವಸ್ತುಗಳನ್ನು ಮಾರುವುದಕ್ಕೆ ತಕ್ಕ ಮಾರ್ಕೆಟ್ ಕಂಡು ಹಿಡಿಯುವಂತೆ ಗೊತ್ತು ಮಾಡಿದ್ದೀರಾ?

ಶ್ರೀ ಟಿ. ಮರಿಯಪ್ಪನವರು.—ತಾಲ್ಲೂಕು ಸೊಸೈಟಿಗಳ ಪ್ರಥಮ ಕರ್ತವ್ಯವೇ ಅದು. ಆಯಾ ಕ್ಷೇತ್ರದಲ್ಲಿ ಉತ್ಪತ್ತಿಯಾಗತಕ್ಕ ಸಾಮಾನುಗಳಿಗೆ ಒಂದು ಮಾರ್ಕೆಟ್ ಒದಗಿಸಿ ಕೊಡುವುದು ಅಲ್ಲಿರತಕ್ಕ ಮೇಧಾವಿಗಳ ಪ್ರಥಮ ಕರ್ತವ್ಯ.

Mr. SPEAKER.—Question Hour is over.

THE BUDGET FOR 1950-51.

Second Stage—Voting on Demands for Grants.

Mr. SPEAKER (Sri V. Venkatappa).—Voting on Demands for Grants for 1950-51 will be taken up now. The following are the cut motions selected for discussion :—

Cut Motion Nos.—149, 150, 151, 152, 176, 154, 156, 158, 160, 167, 169, 173, 175, 180, 181, 184, 185, 189, 192, 193, 194, 196, 198, 204, 206, 208, 213, 214, 220, 221, 225, 226.

The Hon'ble Minister for Education may move Demand No. 20.

Sri. G. A. ACHARYA (Bangalore District—General.)—In view of the large number of cut motions selected for discussion the time limit may kindly

be revised. There minutes may be enough.

Mr. SPEAKER.—Hon'ble Member himself may adhere to it.

Mushir-ul-Mulk J. MAHOMED IMAM (Chitaldrug *cum* Tumkur—Muslim).—We cannot deal with all the cut motions for want of time. The Chair was pleased to announce to this House that necessary steps would be taken to constitute a committee to revise the Rules and Standing Orders.

Mr. SPEAKER.—That will be done.

Janab J. MAHOMED IMAM.—I request the Chair to appoint a committee to take all these into consideration.

Mr. SPEAKER.—Yes.

Demand No. 20—26. Education.

Sri T. SIDDALINGAIYA (Minister for Education and Public Health).—Mr. Speaker, Sir, on the recommendation of His Highness the Maharaja, I beg to move:

"That a sum not exceeding Rs. 2,83,06,000 be granted to the Government to defray the charges which will come in course of payment during the year ending 31st day of March 1951, in respect of 'Education'."

Mr. SPEAKER.—Motion moved:

"That a sum not exceeding Rs. 2,83,06,000 be granted to the Government to defray the charges which will come in course of payment during the year ending 31st day of March 1951, in respect of 'Education'."

Sri M. Madiah may move cut motion No. 149.

Promoting the educational interests of Depressed Class Students.

Sri M. MADIAH (Mysore District—Depressed Class).—Sir, I beg to move:

"That the demand under the head '26. Education—1 Mysore University' for Rs. 24,50,000 be reduced by Re. 1 (to urge upon the Government to promote with special care the educational interests of the students belonging to the weaker sections of the people, and in particular, of the Scheduled Castes (Depressed Classes) by creating hostel facilities, by increasing the rate and the amout of scholarships and by giving such other necessary help in the University institutions in the State.)

ಸ್ವಾಮಿ, ನಾನು ಈಗಾಗಲೇ, ಕೆಲವು ಸಂದರ್ಭಗಳಲ್ಲಿ ಸಮಾಜದಲ್ಲಿ ಹಿಂದುಳಿದಿರತಕ್ಕ ಪಂಗಡಗಳ ಹಿತ ಸಾಧನೆಯ ವಿಚಾರದಲ್ಲಿ ಸಂಕ್ಷೇಪವಾಗಿ ಹೇಳಿದ್ದೇನೆ.

ಅಧ್ಯಕ್ಷರು.—ಈಗಲೂ ಸಂಕ್ಷೇಪವಾಗಿ ಹೇಳಿದರೆ ಉತ್ತಮ.

ಶ್ರೀ ಎಂ. ಮಾದಯ್ಯನವರು.—ತಾವು ಹೇಳಿದ ಹಾಗೆ ಆದಷ್ಟು ಸೂಕ್ಷ್ಮವಾಗಿ ಹೇಳುವುದಕ್ಕೆ ಪ್ರಯತ್ನ ಪಡುತ್ತೇನೆ.

ಸ್ವಾಮಿ, ಈಗಿನ ಹೊಸ ವಾತಾವರಣದಲ್ಲಿ ಸಮಾಜದಲ್ಲಿ ಹಿಂದಿರುವ ಈ ಜನರಿಗೆ ಅದರಲ್ಲೂ ವಿಶ್ವವಿದ್ಯಾನಿಲಯಗಳಲ್ಲಿ ಓದತಕ್ಕವರ ವಿಚಾರದಲ್ಲಿ ಹೆಚ್ಚಿನ ಅವಕಾಶವನ್ನು ಸರ್ಕಾರದವರು ಕಲ್ಪಿಸಿಕೊಡುವುದು ಅತ್ಯಗತ್ಯವೆಂದು ನಾನು ಭಾವಿಸುತ್ತೇನೆ. ನಮ್ಮ ಮಾನ್ಯ ಮಿತ್ರರು weaker sections ಎಂದೇನೂ ಹೇಳಿದ್ದಾರೋ ....

ಒಬ್ಬ ಸದಸ್ಯರು.—"Weaker Sections" ಎಂದರೆ ಅಬಲೆಯರು ಎಂದು ಅರ್ಥವಾಗುತ್ತದೆ.

ಶ್ರೀ ಎಂ. ಮಾದಯ್ಯನವರು.—ನಮ್ಮ ಭಾರತ ರಾಜ್ಯಾಂಗದ 46ನೆಯ ಸೆಕ್ಷನ್‌ನಲ್ಲಿ ಈ ರೀತಿ ಹೇಳಿದೆ.

"46. The State shall promote with special care the educational and economic interests of the weaker sections of the people, and in particular, of the Scheduled Castes and the Scheduled Tribes, and shall protect them from social injustice and all forms of exploitation."

Further on, article 340 states as follows:

"The President may by order appoint a Commission consisting of such persons as he thinks fit to investigate the conditions of socially and educationally backward classes within the territory of India and the difficulties under which they labour and to make recommendations as to the steps that should be taken by the Union or any State to remove such difficulties and to improve their condition and as to the grants that should be made for the purpose ...." etc , etc.

Sri H. SIDDAVEERAPPA (Chitaldrug District - General).—Mr. Speaker, it appears as though the Hon'ble Member has taken the very wordings from the Constitution of India for his cut motion.

Sri M. MADIAH.—The idea of the policy which is to be pursued is there in the cut motion, not all the wordings.

Sri L. SIDDAPPA (Shimoga District—General).—There is nothing absolutely objectionable even if the Hon'ble Member takes the wordings of the Constitution for his cut motion.

ಶ್ರೀ ಎಂ. ಮಾದಯ್ಯನವರು.—ಸ್ವಾಮಿ, ಪ್ರಾಥಮಿಕ ವಿದ್ಯಾಭ್ಯಾಸ, ಮಿಡ್ಲ್ ಸ್ಕೂಲು ಮತ್ತು, ಹೈಸ್ಕೂಲು, ಕಾಲೇಜು ವಿದ್ಯಾಭ್ಯಾಸಗಳಿಗಾಗಿ ಸಾಕಷ್ಟು ಮಕ್ಕಳು ಬರುತ್ತಾರೆ. ಆದರೆ ವಿಶ್ವವಿದ್ಯಾನಿಲಯಗಳಲ್ಲಿ ಸಾಕಾದಷ್ಟು ಪ್ರೋತ್ಸಾಹವನ್ನು ಒಡವರ ಮಕ್ಕಳಿಗೆ ಕೊಡದೇ ಹೋದರೆ ಸರ್ಕಾರ ಏನು ಖರ್ಚು ಮಾಡಿದರೂ ಅವೆಲ್ಲವೂ ವ್ಯರ್ಥವಾಗುತ್ತದೆ, ಎಂಬುದನ್ನು ಮೊದಲು ಗಮನಿಸಬೇಕು. ಈಗ ಏನಿದ್ದರೂ ಅನುಕೂಲಸ್ಥರಿಗೆ ಹಾಸ್ಟಲುಗಳ ವಸತಿ, ಕಾಲೇಜುಗಳಲ್ಲಿ ಓದಲು ಸೌಕರ್ಯ ಇದೆಯೇ ಹೊರತು, ಬಡ

ಬೋರೇಗೌಡನ ಮಕ್ಕಳಿಗೆ ಸಾಕಷ್ಟು ಅನುಕೂಲವಿಲ್ಲ. ಕೆಲವು ವರ್ಷಗಳಿಂದ ಹೈಸ್ಕೂಲು, ಕಾಲೇಜುಗಳಲ್ಲಿ ಕೊಡುತ್ತಿರುವ ವಿದ್ಯಾರ್ಥಿ ವೇತನ ಹಿಂದುಳಿದ ಪಂಗಡದವರಿಗೆ ಮತ್ತು ನಿಮ್ಮ ಪಂಗಡದವರಿಗೆ ಏನೇನೂ ಸಾಲದು. ಅವರ ವಿದ್ಯೆಗಾಗಿ ತಂದೆ ತಾಯಿಗಳು ಎಷ್ಟೋ ಕಷ್ಟ ಪಡುತ್ತಿದ್ದಾರೆ. ಅದನ್ನು ನೋಡಿದರೆ ನಿಜವಾಗಿಯೂ ಸಂಕಟವಾಗುತ್ತದೆ. ಆದ್ದರಿಂದ ಬಡವರಲ್ಲಿ ಎಷ್ಟು ಜನ ವಿದ್ಯಾಭ್ಯಾಸ ಮಾಡುತ್ತಿದ್ದಾರೆಂಬುದಕ್ಕೆ ಅಂಕಿ ಅಂಶಗಳನ್ನು ತೆಗದುಕೊಂಡು ಅವರಿಗೆ ಸರಿಯಾದ ಸಹಾಯ ನೀಡಬೇಕು. ಹಳ್ಳಿಗಳಿಂದ ಬೆಂಗಳೂರು ಮೈಸೂರುಗಳಿಗೆ ಬಂದರೆ ಹಾಸ್ಟೆಲ್‌ಗಳಲ್ಲಿ ಮತ್ತು ಕಾಲೇಜುಗಳಲ್ಲಿ ಸೀಟು ಸಿಕ್ಕುವುದಿಲ್ಲ ; ಬೇರೆ ಅನುಕೂಲಗಳಿಲ್ಲ. ಅನುಕೂಲಸ್ಥರಿಗಾದರೆ ವಿದ್ಯಾರ್ಥಿ ನಿಲಯಗಳಲ್ಲಿರಲು ಶಕ್ತಿಯಿದೆ. ಬಡವರಿಗೆ ಹಣವಿಲ್ಲದೆ ವಿದ್ಯಾರ್ಥಿ ನಿಲಯಗಳಲ್ಲಿರಲು ಅವಕಾಶವಿಲ್ಲವಾಗಿದೆ. ಆದ್ದರಿಂದ ಬಡವರ ಮಕ್ಕಳು ವಿದ್ಯೆ ಇಲ್ಲದೆ ಬಡವರಾಗಿಯೇ ಹಳ್ಳಿಗಳಲ್ಲಿ ಉಳಿಯುತ್ತಾರೆ. ಅವರು ಇತರರ ಮಟ್ಟಕ್ಕೆ ಬರಬೇಕಾದರೆ, ಉನ್ನತ ಸ್ಥಿತಿಗೆ ಏರಬೇಕಾದರೆ, ವಿದ್ಯಾರ್ಥಿವೇತನ ಹೆಚ್ಚಾಗಿ ಕೊಟ್ಟು ಪ್ರೋತ್ಸಾಹ ಹೆಚ್ಚಿಸಬೇಕು. ಈಗೇನೋ ಮಾನ್ಯ ಮಂತ್ರಿಗಳು ಸರ್ಕಾರದವರು ಕೆಲವು ಗ್ರ್ಯಾಂಟುಗಳನ್ನು ಕೊಟ್ಟಿದ್ದಾರೆ ಎಂದು ಹೇಳಬಹುದು. ನಿಮ್ಮ ವರ್ಗದವರಿಗೆ ವಿದ್ಯಾರ್ಥಿವೇತನಗಳನ್ನು ಕೊಟ್ಟಿದ್ದಾರೆ. ಆದರೆ ಅದು ಸಾಲದು. ನಿಮ್ಮ ವರ್ಗಕ್ಕೆ ಸೇರದೆ ಇರುವ ಇತರ ಹಿಂದುಳಿದ ಪಂಗಡದವರು ಹೈಸ್ಕೂಲಿನವರೆಗೆ ಬಂದರೆ ಮುಂದೆ ಹೆಚ್ಚಾಗಿ ಫೀಜು ಕೊಡಬೇಕಾಗುತ್ತದೆ. ಅದಕ್ಕೆ ಅನುಕೂಲವಿಲ್ಲದೆ ಅಲ್ಲಿಗೇ ಅನೇಕರು ವಿದ್ಯಾಭ್ಯಾಸವನ್ನು ನಿಲ್ಲಿಸಿ ಬಿಡುತ್ತಾರೆ. ಕೆಲವರು ಗುಮಾಸ್ತೆಗಳಾಗುತ್ತಾರೆ. ಸಂಪೂರ್ಣ ವಿದ್ಯಾವಂತರಾಗದಿದ್ದರೆ ಲೋಕಾನುಭವವು ಸರಿಯಾಗಿ ಗೊತ್ತಾಗುವುದಿಲ್ಲ. ಈಗ ಏನೋ ಒಂದು ನ್ಯೂನತೆಯಿದೆ. ಅದನ್ನು ಸರಿಪಡಿಸಬೇಕಾದರೆ ಹಳ್ಳಿಗಳಿಗೆ ಹತ್ತಿರವಾಗಿರುವ ಕಡೆಗಳಲ್ಲೆಲ್ಲಾ ಕಾಲೇಜುಗಳನ್ನು ಸ್ಥಾಪಿಸಬೇಕು. ಅಲ್ಲಿಗೆ ಬರುವವರಿಗೆ ಸಾಕಷ್ಟು ಪ್ರೋತ್ಸಾಹ ಕೊಡಬೇಕು. ಕಳೆದ ಸಾರಿ ಬಡ್ಜೆಟ್ ಅಧಿವೇಶನದಲ್ಲೂ ನಿಮ್ಮ ವರ್ಗದವರಿಗೆ ಕೊಡುವ ವಿದ್ಯಾರ್ಥಿವೇತನ ಸಾಲದು ಎಂದು ಹೇಳಿದ್ದೆ, ತಿಂಗಳಿಗೆ 15 ರೂಪಾಯಿಗಳನ್ನು ಡಿಗ್ರಿ ಕ್ಲಾಸುಗಳಲ್ಲಿ ಕೊಡುತ್ತಾರೆ. ಇಂಟರ್ ಮೀಡಿಯಟ್ ವಗೈರೆ ಇತರ ತರಗತಿಗಳಲ್ಲಿ ಹತ್ತು ರೂಪಾಯಿ ಕೊಡುತ್ತಾರೆ. ಮೈಸೂರು ಬೆಂಗಳೂರುಗಳಿಗೆ ಬಂದು ಬಟ್ಟೆ, ಬರೆ, ಪುಸ್ತಕ ಮುಂತಾದುವೆಲ್ಲವನ್ನೂ ಹೊಂದಿಸಿಕೊಂಡು ವ್ಯಾಸಂಗ ಮಾಡುವುದಕ್ಕೆ ಈಗಿನ ಉತ್ತೇಜನ ಸಾಲದು. ಇದಕ್ಕೆ ಉತ್ತೇಜನ ಕೊಡುವಂತೆ ಯಾವ ರೀತಿ ಮಾಡಬೇಕು ಎಂಬುದನ್ನು ಭಾರತ ರಾಜ್ಯಾಂಗದ ವಿಧಿಗಳಲ್ಲಿ ವಿಧಾಯಕವಾಗಿರುವ ಪ್ರಕಾರ ತೀವ್ರವಾಗಿ ಆಲೋಚನೆ ಮಾಡಬೇಕು. ಸುಮ್ಮನೆ ಎಲ್ಲವನ್ನೂ ಮಾಡುತ್ತಿದ್ದೇನೆ. ಎಂದು ಉತ್ತರ ಕೊಟ್ಟರೆ ಸಾಲುವುದಿಲ್ಲ. ನಿರ್ದಿಷ್ಟ ಕಾರ್ಯಕ್ರಮ ಹಾಕಬೇಕು. ಯಾವ ರೀತಿ ಮಾಡಿದರೆ ಸಾಧ್ಯವೆಂಬುದನ್ನು ಕಂಡುಹಿಡಿಯಬೇಕು. ಸಾರ್ವಜನಿಕರ ಅಭಿಪ್ರಾಯ ನಡೆದು ಒಂದು ಸಣ್ಣ ಸಮಿತಿಯ ಮೂಲಕ ಒಂದು ಯೋಜನೆಯನ್ನು ತಯಾರು ಮಾಡಿಸಿ, ಯಾವ ರೀತಿ ಮಾಡಿದರೆ ಬಡವರೂ ಇತರರ ಮಟ್ಟಕ್ಕೆ ಬರುತ್ತಾರೆ ಎಂಬುದನ್ನು ಪರಿಶೀಲಿಸಬೇಕು. ತೀವ್ರವಾಗಿ ಈ ಕಾರ್ಯವನ್ನು ಮಾಡುತ್ತಾರೆಂದು ನಂಬಿ ಈ ಖೋತಾ ಸೂಚನೆಯನ್ನು ಸಭೆಯ ಮುಂದೆ ಇಡುತ್ತೇನೆ.

Mr. SPEAKER.—Cut motion moved :

"That the demand under the head '26, Education' for Rs. 24,50,000 be reduced by Re. 1."

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಈ ಸಂದರ್ಭದಲ್ಲಿ ವಿದ್ಯಾರ್ಥಿವೇತನ ಕೊಡುವ ಪದ್ಧತಿಯನ್ನು ಪುನರ್ವಿಮರ್ಶೆ ಮಾಡುವುದು ಅವಶ್ಯಕ ಎಂದು ಹೇಳುವುದಕ್ಕೆ ನಾನು ನಿಂತಿದ್ದೇನೆ.

ಅಧ್ಯಕ್ಷರು.—ಪುನರ್ವಿಮರ್ಶೆ

ಶ್ರೀ ಎ. ಭೀಮಪ್ಪನಾಯಕರು.—ಹೇಳುತ್ತೇನೆ. ಹಿಂದೆ ಒಂದು ಜಾತಿಯು ವಿದ್ಯಾಭ್ಯಾಸದಲ್ಲಿ ಮುಂದೆ ಬಂದಿದೆ. ಆರ್ಥಿಕದೃಷ್ಟಿಯಿಂದ ನೋಡದೆ, ವಿದ್ಯಾಭ್ಯಾಸದ ದೃಷ್ಟಿಯಿಂದ ಮುಂದಿದೆಯೆಂದು ಹೇಳುವುದು ಸರಿಯಲ್ಲ. ಇದರಲ್ಲಿ ಲೆಕ್ಕ ತೆಗೆದುಕೊಂಡರೆ ಬ್ರಾಹ್ಮಣರು ವಿದ್ಯಾಭ್ಯಾಸದಲ್ಲಿ ಮುಂದೆ ಇದ್ದಾರೆ. ಆದ್ದರಿಂದ ಅವರು ವಿದ್ಯಾರ್ಥಿ ವೇತನಕ್ಕೆ ಅರ್ಹರಲ್ಲವೆಂದು ಹೇಳಿದರೆ ಅವರ ಹಾಗೆಯೇ ಮುಂದುವರಿದಿರುವ ಮೊದಲಿಯಾರರೂ, ಕ್ರಿಶ್ಚಿಯನ್ನರೂ ಅರ್ಹರಲ್ಲವೆಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು.—ಸಾಮಾನ್ಯವಾಗಿ ವಿದ್ಯಾರ್ಥಿವೇತನವನ್ನು ಯಾವ ತತ್ವದ ಮೇಲೆ ಕೊಡಬೇಕೆಂದು ಚರ್ಚೆ ಮಾಡುವುದಕ್ಕೆ ಪ್ರಾರಂಭಮಾಡಿದ್ದೀರಿ. ಆದರೆ Weaker Sectionsಗೆ ವಿದ್ಯಾರ್ಥಿವೇತನದ ಬಗ್ಗೆ ಹೆಚ್ಚು ಸೌಲಭ್ಯ ಕೊಡಬೇಕೆಂಬ ವಿಷಯವನ್ನು ಈ ಸೂಚನೆಯಲ್ಲಿ ತಿಳಿಸಲಾಗಿದೆ. ಆದ್ದರಿಂದ ಆ ವಿಷಯವನ್ನು ಮಾತ್ರ ಪ್ರಸ್ತಾಪಮಾಡಬೇಕೇ ಹೊರತು ಸಾಮಾನ್ಯವಾಗಿ ವಿದ್ಯಾರ್ಥಿವೇತನ ಯಾರಿಗೆ ಹೇಗೆ ಕೊಡಬೇಕು, ಆ ಬಗ್ಗೆ ಯಾವ ನೀತಿಯನ್ನು ಅನುಸರಿಸಬೇಕು ಎಂಬ ವಿಚಾರ ಪ್ರಸ್ತಾಪಿಸಬಾರದು.

ಶ್ರೀ ಎ. ಭೀಮಪ್ಪನಾಯಕರು.—'Weaker sections' ಎಂಬುದನ್ನು defineಮಾಡುವುದಕ್ಕೆ ನಾನು ಹಾಗೆ ಹೇಳಿದೆನೇ ಹೊರತು ಮತ್ತೆ ಬೇರೆ ಅಲ್ಲ. Weaker Sections ಎಂದರೆ economical ಅಥವಾ educational ಅಥವಾ social disabilitiesನಿಂದ weaker ಎಂದು ತಿಳಿದುಕೊಳ್ಳಬೇಕು. Weaker ಎಂದಾಗ ಬಹುಶಃ ಬಡತನದ ದೆಸೆಯಿಂದ ಎಂಬುದನ್ನು ಒಪ್ಪಬೇಕು. ಯಾರೂ ಬ್ರಾಹ್ಮಣರಿಗೆ ಅನುಕೂಲತೆ ಕೊಡುವುದಕ್ಕೆ ಅವಕಾಶವಿಲ್ಲವೆಂದು ಅವರನ್ನು ಸಮಾಜದಿಂದ ತೆಗೆದುಹಾಕಿಲ್ಲ ; ಅವರನ್ನು weaker ಎಂದು ಭಾವಿಸಿಲ್ಲ. ಬಡತನದಿಂದ ಇರುವವರು ಬ್ರಾಹ್ಮಣರಲ್ಲಿಲ್ಲವೆ ? ಅದನ್ನು ಬಿಟ್ಟು ಹಿಂದುಳಿದ ಪಂಗಡ ಎಂದು ಹೇಳಿ ಐಶ್ವರ್ಯವಂತರನ್ನೂ weaker sectionಗೆ ಸೇರಿಸುವುದು ಆರ್ಥಿಕ ದೃಷ್ಟಿಯಿಂದ ಸರಿಯಲ್ಲ. ಹಾಗೆ ಮಾಡಿದರೆ ಬೇಕಾದಷ್ಟು ಅನುಕೂಲಸ್ಥರನ್ನೂ weaker sectionಗೆ ತೆಗೆದುಕೊಳ್ಳಬೇಕಾಗುತ್ತದೆ.

Mr. SPEAKER.—Has the term 'weaker sections of the people' not been defined in the Constitution ?

ಶ್ರೀ ಎ. ಭೀಮಪ್ಪನಾಯಕರು.—ಇಲ್ಲ. ಹಿಂದುಳಿದ ಪಂಗಡ, ನಿಮ್ಮ ಪಂಗಡ ಎಂದು ಮಾಡಿದ್ದಾರೆ. ವೀಕರ್ ಸೆಕ್ಷನ್ ಅಂದರೆ ಯಾರು ಬಡತನದಿಂದ ಇದ್ದಾರೋ ಅವರು ಹೊರತು ಬೇರೆಯವರು ಬರುವುದಕ್ಕೆ ಸಾಧ್ಯವಿಲ್ಲ. ಆರ್ಥಿಕ ದೃಷ್ಟಿಯಿಂದ ವೀಕರ್ ಎಂದು ಅರ್ಥ ಮಾಡುತ್ತೇನೆ. ಅವರಿಗೆ ವಿದ್ಯಾರ್ಥಿ ವೇತನ ವಗೈರೆ ಬಂದರೆ ಬಹುಶಃ ಒಳ್ಳೆಯದು. ಮುಂದೆ ವಿದ್ಯಾಭ್ಯಾಸ ಕಡಮೆಯಾಗುವುದಿಲ್ಲ. ಕೋಮುವಾರು ಭಾವನೆ

ವಗೈರೆ ಬಂದರೆ ಲೆಕ್ಕ ತೆಗೆದುಕೊಳ್ಳಬೇಕಾಗುತ್ತದೆ. ವಿಶ್ವವಿದ್ಯಾನಿಲಯಗಳಲ್ಲಿ ಈಗ ಕೊಡುತ್ತಿರುವ ವಿದ್ಯಾರ್ಥಿವೇತನ ವಿಧಾನದಿಂದ ಅನುಕೂಲಸ್ಥರ ಮಕ್ಕಳಿಗೇ ಅನುಕೂಲ, ಅವರೇ ಮುಂದೆ ಬರುತ್ತಾರೆ, ಅನೇಕರಿಗೆ ಸ್ಥಳ ಸಿಕ್ಕುವುದಿಲ್ಲ ಎಂದು ಹೇಳಿದರು. ಆ ದೃಷ್ಟಿಯಿಂದ ಜಾತಿ ಕೋಮುಗಳಿಗೆ ಬಡತನವಿದ್ದರೆ ವಿದ್ಯಾರ್ಥಿವೇತನ, ವಿದ್ಯಾರ್ಥಿನಿಲಯಗಳ ಅನುಕೂಲ ಕೊಡಬೇಕು. ಆದಿಕರ್ಣಾಟಕರು, ಆದಿದ್ರಾವಿಡರು, ಮುಂತಾದ ಹರಿಜನರಿಗೆ ಬಹಳ ತೊಂದರೆಯಿದೆಯೆಂದು ಶ್ರೀ ಎಂ. ಮಾದಯ್ಯನವರು ಹೇಳಿದರು. ಹಾಗೆ ಆಗಬೇಕೆಂದರೆ ಮನೆ ಬಾಡಿಗೆಗೆ ಬೇಕೆಂದರೆ ಸಿಕ್ಕುತ್ತಿಲ್ಲ. ಒಂದು ವಿದ್ಯಾರ್ಥಿನಿಲಯವನ್ನಿಡಬೇಕೆಂದರೆ ವರ್ಷಗಟ್ಟಲೆ ಕಟ್ಟಡ ಸಿಕ್ಕದೆ ಕಷ್ಟವಾಗಿದೆ. ಇದನ್ನು ಸರಿಪಡಿಸುವುದಕ್ಕೆ ಪ್ರತಿಯೊಂದು ಜಿಲ್ಲೆಯಲ್ಲೂ ಹರಿಜನರ ವಿದ್ಯಾರ್ಥಿನಿಲಯಗಳನ್ನು ಸರ್ಕಾರದವರು ತಮ್ಮ ಸ್ವಂತ ಖರ್ಚಿನಿಂದ ಕಟ್ಟಿಸಿದ ಹೊರತು ವಿದ್ಯಾರ್ಥಿನಿಲಯಗಳನ್ನು ಸರಿಯಾದ ಸ್ಥಳಗಳಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ.

ಗ್ರಾಂಟು ವಗೈರೆ ಕೊಡುವಾಗ ವಿದ್ಯಾರ್ಥಿನಿಲಯಗಳಿಗೆ, ಅವುಗಳಲ್ಲಿರುವ ವಿದ್ಯಾರ್ಥಿಗಳ ಆರ್ಥಿಕ ಸ್ಥಿತಿ, ಎಂದರೆ, ಅವರಿಗೆ ಬಡತನವಿದೆಯೆ ಅಥವಾ ಐಶ್ವರ್ಯವಂತರಾಗಿದ್ದಾರೆಯೆ ಎಂಬುದನ್ನು ನೋಡುತ್ತಿಲ್ಲ. ಹಿಂದಿನ ಸರ್ಕಾರದವರು Backward Class ಎಂದು ಮಾಡಿದ್ದಾರೆ. ಅದರಂತೆಯೇ ಮುಂದುವರಿಸಿಕೊಂಡು ಹೋಗುವುದು ಸರಿಯಲ್ಲ. ಬ್ರಾಹ್ಮಣರಲ್ಲಿಯೂ ಬಡವರಿದ್ದಾರೆ, ಬೇರೆ ಪಂಗಡಗಳಲ್ಲಿಯೂ ಇದ್ದಾರೆ. ಹಾಗೆಯೇ ಎಲ್ಲರಲ್ಲೂ ಐಶ್ವರ್ಯವಂತರೂ ಇದ್ದಾರೆ. ಆದುದರಿಂದ ನಿಜವಾಗಿಯೂ ಬಡವರಾಗಿರುವವರಿಗೆ, ಅವರು ಯಾವ ಪಂಗಡಕ್ಕೇ ಸೇರಿರಲಿ, ಅವರಿಗೆ ಈ ಸಹಾಯ ಸಲ್ಲಬೇಕೆಂಬ ದೃಷ್ಟಿಯಿಂದ ನಾನು ಇದನ್ನು ಅನುಮೋದಿಸುತ್ತೇನೆ.

ಶ್ರೀ ಟಿ ಸಿದ್ದಲಿಂಗಯ್ಯನವರು (ವಿದ್ಯಾ ಮತ್ತು ಜನಾರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ಈ ಖೋತಾ ಸೂಚನೆಯಲ್ಲಡಗಿರುವ ಉತ್ತಮವಾದ ತತ್ವವನ್ನೂ ಮತ್ತು ವಿಶಾಲದೃಷ್ಟಿಯನ್ನೂ ಸರ್ಕಾರದವರು ಸಂತೋಷದಿಂದ ಒಪ್ಪಿಕೊಳ್ಳಬಹುದಾಗಿದೆ. 'backward class' ಎಂಬುದನ್ನು ಬಿಟ್ಟು ಬಡತನವನ್ನು ಆಧಾರವಾಗಿಟ್ಟುಕೊಂಡು ಅದರ ಮೇಲೆ ಸಹಾಯಮಾಡಬೇಕೆಂದು ಕೇಳಿರುವುದನ್ನು ಪ್ರಶಂಸೆಮಾಡಬೇಕಾಗಿದೆ. ಶ್ರೀಮಾನ್ ಮಾದಯ್ಯನವರೂ ಮತ್ತು ಶ್ರೀಮಾನ್ ಭೀಮಪ್ಪನಾಯಕರೂ ಬಹಳ ಚೆನ್ನಾಗಿ ಸ್ವಾರ್ಥರಹಿತವಾದ ದೃಷ್ಟಿಯಿಂದ ಹೇಳಿದ್ದಾರೆ. ಇದನ್ನು ಸರ್ಕಾರದವರು ಯಾವ ರೀತಿ ಕಾರ್ಯಗತಮಾಡಬೇಕೆಂಬುದನ್ನು ಪರಿಶೀಲನೆ ಮಾಡುತ್ತಾರೆ. ಈಗಾಗಲೇ ಕೆಲವು ಖೋತಾ ಸೂಚನೆಗಳ ವಿಚಾರವಾಗಿ ಮಾತನಾಡುವ ಸಂದರ್ಭದಲ್ಲಿ ಸರ್ಕಾರದವರ ನೀತಿ ಏನಿದೆ, ತತ್ವ ಏನಿದೆ ಎಂಬುದನ್ನು ತಿಳಿಸಿದ್ದಾರೆ ನಾನು ಹೆಚ್ಚು ವಿವರಿಸಬೇಕಾಗಿಲ್ಲ. ಸುಮಾರು 35 ವರ್ಷಗಳಿಂದ backward class ಎಂದು ಮಾಡಿ ಅವರಿಗೆ ಬೇಕಾದ ಅನುಕೂಲಗಳನ್ನು ಮಾಡಿಕೊಡುತ್ತಿದ್ದಾರೆ. ಅದರಲ್ಲಿಯೂ Depressed Classes ಎಂದು ಮಾಡಿ ಈ ಪಂಗಡಗಳವರಿಗೆ ವಿಶೇಷ ರಿಯಾಯಿತಿಗಳನ್ನು ಕೊಡುತ್ತಿದ್ದಾರೆ. ಇವರಿಗೆ ಸ್ಕೂಲು ಕಾಲೇಜುಗಳಲ್ಲಿ ಫೀಜಿಲ್ಲ. ವಿದ್ಯಾರ್ಥಿ ವೇತನಗಳನ್ನು ಕೊಡುವುದು, ಉಚಿತ ಆಹಾರ, ಸ್ಥಳವಸತಿ ಮುಂತಾದವುಗಳನ್ನು ಸರ್ಕಾರದವರು ಕಲ್ಪಿಸುತ್ತ ಬಂದಿದ್ದಾರೆ. 1950-51 ನೆಯ ಸಾಲಿನಲ್ಲಿ ನಿಮ್ಮ ವರ್ಗದ ವಿದ್ಯಾರ್ಥಿಗಳ ವೇತನಕ್ಕೆ 50 ಸಾವಿರ ರೂಪಾಯಿ ಒದಗಿಸಲಾಗಿದೆ. ಹಿಂದುಳಿದ ಪಂಗಡದವರಿಗೆ, ಎಂದರೆ backward class ನವರಿಗೆ ಒಂದೂವರೆ ಲಕ್ಷ ರೂಪಾಯಿ ಒದಗಿಸಲಾಗಿದೆ. ವಿಶ್ವವಿದ್ಯಾನಿಲಯ ಹಾಸ್ಟೆಲಿಗೆ 10 ಸಾವಿರ ರೂಪಾಯಿ, ಸಾರ್ವತ್ರಿಕ ಚುನಾವಣೆಯಲ್ಲಿ ನಿಮ್ಮ ಪಂಗಡದವರ ವೇತನ ಮುಂತಾದವುಗಳಿಗೆ 70,500 ರೂಪಾಯಿ ಒದಗಿಸಲಾಗಿದೆ, ಯುದ್ಧಾನಂತರ ಪುನರ್ರಚನೆಯ ಸಂಬಂಧವಾಗಿ ಇವರಿಗೆ ಹೊಸ ಹಾಸ್ಟೆಲುಗಳನ್ನೇರ್ಪಡಿಸಲು 1 ಲಕ್ಷ 25 ಸಾವಿರ ರೂಪಾಯಿ ಒದಗಿಸಿದೆ.

ಅಧ್ಯಕ್ಷರು.—ವಿಶ್ವವಿದ್ಯಾನಿಲಯದ ವಿಚಾರ ಮಾತ್ರ ಹೇಳಿದರೆ ಸಾಕು.

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈಗ ಎರಡು ಯೂನಿವರ್ಸಿಟಿ ಕಾಲೇಜು ಹಾಸ್ಟೆಲುಗಳಿವೆ. ಬೆಂಗಳೂರಿನಲ್ಲಿ ಒಂದೂ, ಮೈಸೂರಿನಲ್ಲಿ ಒಂದೂ ಇದೆ. ಒಟ್ಟಿನಲ್ಲಿ ಈ ಖೋತಾ ಸೂಚನೆಯಲ್ಲಿರುವ ತತ್ವವನ್ನು ನಾನು ಸರ್ಕಾರದ ಪರವಾಗಿ ಒಪ್ಪಿಕೊಂಡು, 'promote with special care the educational interests of the students belonging to the weaker sections of the people' ಎಂದು ಅವರು ಕೇಳಿರುವಂತೆ ಸಹಾಯ ಮಾಡುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.

ಶ್ರೀ ಎಂ. ಮಾದಯ್ಯನವರು.—ವೇತನಗಳನ್ನು ಹೆಚ್ಚುಮಾಡುವ ವಿಚಾರ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈ ವಿಚಾರದಲ್ಲಿ ಸರ್ಕಾರಕ್ಕೆ ಅರಿಕೆ ಬಂದಿದೆ. ನಿಮ್ಮ ವರ್ಗದ ವಿದ್ಯಾರ್ಥಿಗಳಿಗೆ ಇಂಟರ್‌ಮೀಡಿಯೇಟ್ ಮತ್ತು ಡಿಪ್ಲೋಮಾ ತರಗತಿಯಲ್ಲಿರುವವರಿಗೆ ಹತ್ತು ರೂಪಾಯಿನಿಂದ ಹದಿನೈದು ರೂಪಾಯಿ ಮಾಡಬೇಕೆಂದೂ ಡಿಗ್ರಿ ತರಗತಿಗಳಲ್ಲಿರುವವರಿಗೆ 15ರಿಂದ 20 ರೂಪಾಯಿ ಮಾಡಬೇಕೆಂದೂ ಕೇಳಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಮಾದಯ್ಯನವರು.—ಮಂತ್ರಿಗಳಿತ್ತ ಭರವಸೆಯಮೇಲೆ ಸೂಚನೆಯನ್ನು ವಾಪಸ್ಸು ತೆಗೆದುಕೊಳ್ಳಲು ಸಭೆಯ ಅನುಮತಿ ಬೇಡುತ್ತೇನೆ.

The cut motion was, by the leave of the Assembly, withdrawn.

Mr. SPEAKER.—Next cut motion, No. 150, Sri. M. Govinda Reddy.

Abolition of Urdu Schools.

Sri M. GOVINDA REDDY (Chitaldrug District—General).—Mr. Speaker, Sir, I beg to move :—

"That the demand under the head. '26 Education' for Rs. 2.83,06,000 be reduced by Rs 100 (to bring to the notice of the Government that there is no need to continue Urdu Schools)',

Sir, before stating my reasons for moving this motion, I would like to make it clear that I am prompted only

by public interest in bringing this cut motion. In view of the events that are happening elsewhere, and for the reason that the schools belong only to one particular community, I am likely to be misunderstood that these incidents have prompted me to bring this kind of a motion now. I have for long believed that these denominational institutions are a curse to the nation. They do not portend any good at all. There are only two reasons supporting these institutions. I am not going into the past as to how these schools came into being and what are the reasons. That is not my purpose. But two reasons could be adduced as justifying the existence of these schools. One is that the people whose mother-tongue is different must be encouraged in their mother-tongue at public expense. Well Sir, that is a view which was encouraged in the past for other circumstances, for reasons other than what were given out. If the State should now concede this principle that every citizen who speaks a mother-tongue which is different from the language of the masses, should also be encouraged at State expense to educate his children in that mother-tongue, then the State should have problems of a monstrous nature. For instance my mother-tongue is Telugu. and there are about 50,000 people in Chitaldrug District belonging to my community who speak Telugu. There are about one lakh of people of other communities whose mother-tongue is Telugu. If that principle is recognised, then it means for two lakhs of people in my district alone Telugu schools, must be established. And in the Kolar Distric, tSir, the majority of the population is Telugu-speaking. In Bangalore District many of the taluks are Telugu speaking. There are people, Christians who speak English and there are people who speak Maharashtra and there are people whose mother tongue is Tamil. If we are to concede this principle then where will be the State? If the Urdu Speaking population are to be encouraged to have educational institutions for their children exclusively, then it means that Christians should have educational institutions exclusively meant for them in English and so also other people whose mother-tongue is different from the language of the country. Well, it is a problem which the State cannot handle easily, and therefore this reason cannot hold good.

Then there is the other reason that the people who enjoyed these special schools, had a culture different from the generality of the people here and therefore they should be allowed to enjoy that privilege. It is not a good ground and if that should be conceded, there will be insurmountable difficulties for the State. For instance there are the Christians whose culture is certainly different from that of other communities. There are Jains having a different culture. There are Lingayets who say they have a different culture from that of the Hindus and I remember some years ago that the All-India Veerasaiva Conference appointed a committee under the chairmanship of the Hon'ble D. H. Chandrasekharaiya—he was not Hon'ble then—to go on a delegation that the Hindu Law did not apply to Veerasaivas.

Sri D. H. CHANDRASEKHARAIYA (Chitaldrug District—General).—That was not the opinion I expressed and it is quoting me wrongly, Sir.

Mr. SPEAKER.—He only said that you were appointed Chairman.

Sri M GOVINDA REDDY.—I only meant that he was then not a member of the Government.

Sri H. SIDDAVEERAPPA (Chitaldrug District—General)—They say 'Hindus' includes all these communities.

Sri M. GOVINDA REDDY.—If this principle is conceded then you can easily understand that it becomes a very big problem to handle. So it is not in the interests of the State also to encourage people who enjoy a different culture to have separate educational institutions at State expense. Well, Sir, from what I have said there is no support for these two reasons.

Now taking the condition of the present Urdu schools. we have to examine whether they are functioning efficiently even supposing all these grounds hold good and they are to be maintained at State expense.

Urdu schools are, it is a known fact, not efficient institutions. They have not get the efficiency of other schools for the reason that their teachers belong to one particular community, their Inspectors belong to one particular community. People of other communities cannot go and inspect these schools. I have taken interest in these schoole and I know that their efficiency is low and particularly in the women's section. There are overaged women who attend the school. They attend for a few hours in the day. I do not mean to say that women who are overaged should not enjoy educational facilities. My point is to show that these institutions are not efficiently functioning. There is another reason. We will be able to save about Rs. 10 lakhs by abolishing these institutions and still provide for Urdu education in general institutions. But it is not money alone that prompts me to urge this motion before the House. It is a fact that these institutions are teaching exclusiveness and separatism. That is the point. I have many instances to give; but it is not desirable to refer to them. I will give only one instance which is indicative of that. I have apprised the Hon'ble Member, Sri D. H. Chandrasekharaiya of this when he was the Minister for Education, in his Hosadurga tour. In the scond Independence Anniversary, one Urdu school hoisted the Mulsim League flag. Mysore flag was not hoisted; Indian Dominion flag was not hoisted. I can give ten more instances of this nature to show that in Urdu schools purposely students are taught to believe that they are different from the generality of the masses here, that their homeland is Arabia and not India and that their culture is different from that of the others. At State expense they are taught this differentiation; this exclusiveness and racial hatred. I do not know what justification there can be. Maintaining such institutions is also prohibited under the Indian Constitution. I am reading from the Indian Constitution, Article 28(1):

"No religious instruction shall be provided in any educational institution wholly maintained out of State funds."

These Urdu schools impart religious instruction also.

Well, Sir, there are provisions in the Constitution to encourage institutions which belong to people of different culture and a different language. But that is not wholly at State expense. If there is no prohibition for maintaining their own schools, there is no prohibition to teach in their own language. But it cannot be done under State expense alone. That is my point. For all these reasons I urge that it is not even in the interests of Muslims themselves to run these institutions as separate ones. It is not in their own interest to educate their people in this exclusive spirit. Therefore I urge this House to accept the cut motion and the Government to devote time and consider it. I concede one thing that since these schools have been existing from long past, it may not be possible for the Government to do away with them all at once. I know it should be a gradual process. Therefore I urge upon the Hon'ble Minister to consider the gradual process by which these schools can be abolished and Urdu sections be opened in general primary schools where there are Urdu speaking people to a considerable extent.

Mr. SPEAKER.—Cut motion moved:

'That the demand under the head '26. Education' for Rs. 2,83,06,000, be reduced by Rs. 100."

Sri G. A. ACHARYA (Bangalore District—General).—Sir, this exclusive mentality must go. I come from Goribidnur in Kolar District, where people who run private schools are faced with this problem of separate schools, especially Urdu schools. I give one example. I understand in Goribidnur, 70 per cent of the people talk Telugu. The parents come and ask the private institutions: "When a small community of 16 to 18 per cent Muslims can have their own Urdu schools and that too at State expenditure why is it you are not providing instruction in Telugu to our children?" I know in several Urdu schools, it is only when the Inspector, the Director of Public Instruction or the Deputy Director of Public Instruction comes

that these schools will be full; otherwise there will be hardly a few. Apart from this it is in the interests of the Muslims themselves that they should not cultivate this exclusiveness in young age when their brains are of plastic type; this exclusiveness is not in the interest of the State especially when we proclaim that it is a secular State. I personally feel that continuation of such schools in the State will harm us and will harm them also. In the larger interests of the country it is very essential that the Muslims themselves should be with us and we should be with them from our young age. Only from this angle I personally prefer that the State should not encourage this exclusive mentality because it is harmful. With these few words, I support the cut motion.

Janab MOHAMED VALIULLA (Kolar—Muslim).—Sir, my friend Sri M. Govinda Reddy has confused the issue. He is not able to make out a difference between religion and language. In the Constitution of India it is not said that education should not be given to children in their own language. It is the policy of the Government of India that education should be given to children in their own mother tongue. Under such circumstances I feel that the article of the Constitution referred to does not come in. He has gone beyond the issue. I hope he will realise the mistake and withdraw the cut motion. He said that the Muslim League flag was flown somewhere and that Urdu schools should be abolished. That analogy does not hold water. He has built up his case on a wrong foundation.

He said that he was not at all worried about the financial aspect. When once the necessity for the language is accepted, it is better to have the children taught in their own mother tongue. That is the universal principle applicable not only to India but all over the world. Otherwise their energy and intellectual powers will be wasted if the language is not mother tongue. After all it will be in the lower classes and not in high schools.

Sri M. GOVINDA REDDY.—I said that it should not be at State cost.

Janab MOHAMED VALIULLA.—Hon'ble Member is changing the ground again and again.

Sri M. GOVINDA REDDY.—No, no.

Janab MOHAMED VALIULLA.—A number of parents would like their children to be taught in mother tongue. Once it is accepted it is no good saying "you should not have it." It is wrong in principle to say that because others are not having it you should not have it. It is a "dog in the manger" policy. Secondly, under the Elementary Education Act there is a provision that a school should be started if there are a minimum number of students. The principle is that a school should be started if a particular number of students are available. Under such circumstances where is the question of additional cost?

AN HON'BLE MEMBER.—What about Urdu Middle Schools?

Janab MOHAMED VALIULLA.—They will not be started without sufficient number of students. From the financial point of view also it is not a burden. Under such circumstances I very strongly oppose the cut motion moved by the Hon'ble Member, Sri Govinda Reddy.

Sri T. SUBRAMANYA (Tumkur Distrtct—General).—Mr. Speaker, Sir, the Hon'ble Members of the Muslim community will kindly realise that they cannot have better friends than Congressmen in this country (Hear, hear), that a move like this on a cut motion on this subject coming from a Congressman must have a deeper meaning than those alleged by my Hon'ble friend Janab Valiulla. We see separatism in this country. We see Hindus and Muslims......(*A Voice: Is not Janab Valiulla himself a Congress man?*) Yes. We see Hindus and Muslims growing separately. If there is to be peace in the country, if both the communities have to live together in amity hereafter, from boyhood they must learn together, play together and act together (Hear, hear) and for this purpose, the Muslim friends will kindly consent to have all their educational

institutions amalgamated with our institutions, so that our boys might grow and develop together and for this purpose and for this purpose alone I feel that Urdu schools must be done away, with and that Urdu boys and girls must be taught in primary schools along with our boys and girls. My sons and daughters and their sons and daughters must together learn and play. With this object in view, I appeal to the House and to the Government to accept this cut motion. Nobody need mistake that we are against their language, because we ourselves are learning that language. I know many of my Muslim friends have learnt Kannada. I have been trying to learn Urdu. We are not against their precepts; we are not against their religion. Whenever they are prosecuted in their own birthplace, they have come and taken shelter here and it should not be for gotten that we belive in oneness of God and the All-Merciful monoism. I will say that we are not against religion. We do not mind their having their own religion. They are free to develop their religious conceptions as they like. But, for the safety of the country, to maintain peace and order within the country, to put an end to the present atmosphere in the country. I think it is necessary that boys of all communities must learn together in primary sections also. Therefore, I urge upon the Government the necessity to abolish all Urdu middle and primary schools, run only one school, not Urdu and Kannada schools separately, one primary school and one middle school so that all boys might learn there...... ..(*A Voice*: *In what language?*) in the language of their mother-toungue. Urdu boys will be taught in the primary section in Urdu. According to the Constitution, the boys must be taught in their mother tongue. Therefore, the Urdu boys will be taught in Urdu; Kannada boys will be taught in Kannada; Telugu boys will be taught in Telegu and Tamil boys will be taught in Tamil. That will be the case so far as primary sections are concerned. The moment they come to middle school, there must be one language and that is the regional language. With this observation, I urge that the cut motion may be accepted by this House.

Sri M. GOVINDA REDDY.—It is not obligatory under the Constitution to teach in the mother tongue alone.

Janab MAHMOOD SHARIFF (Mysore *cum* Mandya *cum* Hassan—Muslim).—Mr. Speaker, Sir, by means of this cut motion, the Hon'ble mover of this cut motion wants that in the present circumstances all the Urdu schools must be abolished. The scope of the cut motion is clear. What Sri Govinda Reddy wants is 'to bring to the notice of the Government that there is no need to continue Urdu schools. There is no ambiguity so far as the language of the cut motion is concerned. During the course of the general debate on the Budget, some other Hon'ble Members also wanted that in the peculiar circumstances of the case, all these Urdu schools might be abolished. The reasons that have actuated the Hon'ble Member, Sri Govinda Reddy, and those gentlemen who share his view in the matter of the abolition of the Urdu schools are that there is no use continuiug these Urdu schools; that there is no justification for one particular community to enjoy these schools and that in the present condition of our exchequer which is a depleted exchequer, there is no justification for continuing these Urdu schools. Several such arguments were advanced. I am grateful to my friend, Sri Subramanya for having appealed to the Muslim community to appreciate the present circumstances and to see that perfect amity and cordiality subsist between the different sections of the population. I do see eye to eye with him. I do own that now that India has become a free nation and after years of tribulation and trouble, it is very necessary for all sections of people, whether they belong to Muslim religion or Hindu religion, whether they belong to Sikh religion or other religions, should have a broad outlook on all matters. I am grateful to him and I assure him on behalf of the Muslim community also that they will respond to this appeal. But in moving this cut motion I am afraid that all aspects of the question

have not been taken into consideration. Such a drastic measure as is just now put forward may not be very practicable. So far as the Government of India are concerned, excepting for the fact that they have declared Hindi to be the national language and excepting for the fact that that they have enunciated certain broad principles in the matter, they have not yet gone into all the details, but stand committed to the policy of training children of particular communities in their mother tongue. This is an essential part of the provisions made in the Constitution itself. Such being the case, since Urdu is the language of an important community, *i.e.* the Muslim community, training should have to be given in that language. There cannot be any question therefore of abolition of these schools. When once the Constitution concedes the policy of training children in their mother tongue, then Urdu being the mother tongue of the Muslims, training in Urdu has to be kept up. (*A Voice: This is not exactly the case*). If it is not like that, I am subject to correction.

Sri H. SIDDAVEERAPPA (Chitaldrug District—General).—Please see articles 12 to 29. No where it is stated that education must be imparted in mother tongue.

Janab MAHMOOD SHARIFF.—Facts cannot be concealed. Whatever is there, that connot be set foot upon.

There is one other circumstance which I want to bring to the notice of all the Hon'bie Members of this House so far as this question is concerned, and that is the solution of language question in South Africa and Switzerland. Those gentlemen who are aware of the constitutions of these two countries know that in Switzerland there are several sections each speaking a different language. There was a hot controversy, as to what should be the principal language of Switzerland. Training was given in two or three languages without disturbing the principal language, *i.e.*, the Swiss language. They have so managed as to secure the goodwill and co-operation of all the persons there. Such being the case, I do not understand why a like procedure should not be followed here.

It was said that there was no efficiency in the teaching of this language. With due deference to the gentlemen holding this view, I have to say that I have gone to so many schools and examined the working of those institutions and I do say that excepting one or two schools which my learned friend might have gone and examined, almost all the schools were working very satisfactorily.

The learned mover made an allegation to the effect that certain girls' schools were not working at all and women teachers do not attend the school.

Sri M. GOVINDA REDDY.—I did not say such a thing at all.

Janab MAHMOOD SHARIFF.—He did make a remark that women did not attend the schools. It is not a generous sort of criticism that was levelled against these institutions. There are special Inspectors. The Inspectorate is there in order to inspect how these institutions are working.

Sri H. B. GUNDAPPA GOWDA.—What do you say about Urdu middle schools?

Janab MAHMOOD SHARIFF.—So far as these schools are concerned, since they have been started, they have to be managed as a matter of fact. What my Hon'ble friend. Sri Kadidal Manjappa said was, 'I am not against the continuation of these Urdu schools, but all the schools may be brought to one place. Let Kannada school be located side by side with the Urdu school.'

Sri Kadidal MANJAPPA.—Hon'ble Member has not understood me correctly. My suggestion was that the Muslim boys might study along with the Hindu boys and arrangements may be made to teach Urdu in the same school.

Janab MAHMOOD SHARIFF.—So far as this question is concerned, it is a very important question. It affects the culture of the community. Suddenly to bring about a drastic cut motion to this effect,' affects the community very adversely.

Mr. SPEAKER.—He said 'gradually'.

Janab MAHMOOD SHARIFF.—But to bring about this reform suddenly it affects the community.

Sri M. GOVINDA REDDY.—I beg to submit one point. There is an article in the Constitution regarding this matter which I would like to read with your permission.

Janab MOHAMED VALIULLA.—On a point of order, Sir. One member cannot speak twice.

Mr. SPEAKER.—As a matter of personal explanation, he says.

Sri M. GOVINDA REDDY.—I am clearing a misunderstanding felt.

Janab MOHAMED VALIULLA.—He has spoken once. Again if he wants to speak, it is not admissible.

Sri M. GOVINDA REDDY.—Under Cultural and Educational Rights these are the provisions :—

"29. (1) Any section of the citizens residing in the territory of India or any part thereof having a distinct language, script or culture of its own shall have the right to conserve the same.

(2) No citizen shall be denied admission into any educational institution maintained by the State or receiving aid out of State funds on grounds only of religion, race, caste, language or any of them.

30. (1) All minorities, whether based on religion or language, shall have the right to establish and administer educational institutions of their choice.

(2) The State shall not, in granting aid to educational institutions, discriminate against any educational institution on the ground that it is under the management of a minority, whether based on religion or language."

Janab MOHAMED VALIULLA.—Hon'ble Member has not made reference to the proper article. Article 13 reads as follows :

"All laws in force in the territory of India immediately before the commencement of this Constitution, in so far as they are inconsistent with the provisions of this Part, shall, to the extent of such inconsistency, be void.........."

"...... Law includes any Ordinance, Order, bye-law, rule regulation, notification, custom or usage having in the territory of India the force of law."

All the usages must be maintained. These schools cannot be taken away like that.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು (ಚಿತ್ರದುರ್ಗ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಈ ಖೋತಾ ನಿರ್ಣಯ ಬಂದಿರತಕ್ಕ ಸ್ವರೂಪವನ್ನು ನೋಡಿ ಕೆಲವರಿಗೆ ಭಯವಾದಹಾಗೆ ತೋರುತ್ತದೆ. ಈಗಿರತಕ್ಕ ಉರ್ದು ಸ್ಕೂಲುಗಳನ್ನು ವಜಾಮಾಡಬೇಕು ಎಂದು ಹೇಳಿರುವುದರಿಂದ ಉರ್ದು ಭಾಷೆ ಮತ್ತು ಉರ್ದು ಭಾಷೆಯಲ್ಲಿರತಕ್ಕ ಸಾಹಿತ್ಯ ಸಂಸ್ಕೃತಿಗೆ ಲೋಪ ಬರಬಹುದೆಂಬ ಶಂಕೆಯು ಕೆಲವರಿಗೆ ತೋರಬಹುದು. ಆದರೆ ಈ ಖೋತಾ ಸೂಚನೆಯನ್ನು ತಂದಿರತಕ್ಕವರ ಉದ್ದೇಶ ಹಾಗೇನೂ ಇರಲಾರದೆಂದು ನಾನು ಭಾವಿಸುತ್ತೇನೆ. ಎಲ್ಲಾ ಪಂಗಡಗಳ ವಿದ್ಯಾರ್ಥಿಗಳು ಒಂದುಕಡೆ ಸೇರಿ ಪರಸ್ಪರ ಸ್ನೇಹ ಸೌಹಾರ್ದದಿಂದ ಬೆಳೆಯುವುದಕ್ಕೂ, ಮತ್ತು ಪರಸ್ಪರ ಅನುಕರಣದಿಂದ ತಮ್ಮ ಗುಣಗಳನು ಸುಧಾರಿಸಿಕೊಳ್ಳುವುದಕ್ಕೂ ಅವಕಾಶವನ್ನು ಕಲ್ಪಿಸಿ, ನಮ್ಮ ದೇಶದಲ್ಲಿ ಪ್ರತ್ಯೇಕ ಮನೋಭಾವನೆ ಬೆಳೆಯುವಂತೆ ಮಾಡಬಾರದೆಂಬ ಸದುದ್ದೇಶದಿಂದ ಈ ವಿಷಯವನ್ನು ನಮ್ಮ ಸ್ನೇಹಿತರು ತಂದಿದ್ದಾರೆಂದು ಹೇಳಬಹುದಾಗಿದೆ. ಇದೇ ವಿಷಯ ಹಿಂದೆ ಅನೇಕಾವರ್ತಿ ಶಾಸನ ಸಭೆಗಳಲ್ಲಿ ಚರ್ಚೆಗೆ ಬಂದಿತ್ತು. ಇದನ್ನು ಕೂಲಂಕಷವಾಗಿ ಪರಿಶೀಲಿಸಿ ಸೂಕ್ತವಾದ ರೀತಿಯಲ್ಲಿ ವ್ಯವಸ್ಥೆ ಮಾಡುವುದಾಗಿ ಸರ್ಕಾರದವರು ಆಗಲೇ ಒಪ್ಪಿಕೊಂಡಿದ್ದಾರೆ. ನಮ್ಮ ದೇಶದಲ್ಲಿ ಅನೇಕ ಭಾಷೆಗಳಿರುವುದರಿಂದ ಪ್ರತ್ಯೇಕ ಮನೋಭಾವನೆ ಬೆಳೆಯುವುದಕ್ಕೆ ಕಾರಣವಾಗಿದೆ. ಇದರಿಂದ ಸಂಭವಿಸಿರುವ ತೊಂದರೆಗಳೂ ನಮಗೆ ಕಂಡುಬಂದಿವೆ. ಆದ್ದರಿಂದ ಈ ಭಾಷೆಗಳನ್ನು ಹೇಗೆ ಹೊಂದುಪಡಿಮಾಡಬೇಕೆಂಬುದೇ ಈಗಿರುವ ಮುಖ್ಯ ಪ್ರಶ್ನೆ. ಯಾವ ಭಾಷೆಯನ್ನು ಮುಖ್ಯವಾಗಿ ಮಾಡಿ ಇತರ ಭಾಷೆಗಳಿಗೂ ಸೂಕ್ತವಾದ ಅವಕಾಶವನ್ನು ಕೊಡಬೇಕೆಂಬುದನ್ನು ನಿರ್ಧರಿಸಬೇಕಾಗಿದೆ. ನಮ್ಮ ದೇಶದಲ್ಲಿರುವ ಹದಿನಾಲ್ಕು ಮುಖ್ಯ ಭಾಷೆಗಳಿಗೆ ನಮ್ಮ ರಾಜ್ಯಾಂಗವು ಅಂಗೀಕಾರವನ್ನಿತ್ತಿದೆ. ನಮ್ಮ ಮೈಸೂರು ಸಂಸ್ಥಾನಕ್ಕೆ ಅನ್ವಯಿಸುವ ಭಾಷೆಗಳನ್ನು ಗಮನಿಸಿದರೆ ನಮ್ಮಲ್ಲಿ ಶೇಕಡಾ 69ರಷ್ಟು ಜನರು ಕನ್ನಡ ಮಾತನಾಡುವವರೂ, ಶೇಕಡಾ 15ರಷ್ಟು ತೆಲುಗು ಮಾತನಾಡುವವರೂ, ಶೇಕಡಾ 5ರಷ್ಟು ಉರ್ದು ಮಾತನಾಡುವವರೂ, ಶೇಕಡಾ 5ರಷ್ಟು ತಮಿಳು ಮಾತನಾಡುವವರೂ, ಶೇಕಡಾ 5ರಷ್ಟು ಮಿಕ್ಕ ಭಾಷೆಗಳನ್ನಾಡುವವರೂ ಇದ್ದಾರೆ. ಆದ್ದರಿಂದ ಕನ್ನಡವು ಸಂಸ್ಥಾನದ ಭಾಷೆ ಎಂದು ಹೇಳುವುದರಲ್ಲಿ ಯಾವ ವಿಧವಾದ ಸಂಶಯವೂ ಇಲ್ಲ. ಕನ್ನಡವು ಶೇಕಡಾ 69ರಷ್ಟು ಜನರ ಮಾತೃಭಾಷೆಯಾಗಿರುವುದಲ್ಲದೆ ಶೇಕಡಾ 90ರಷ್ಟು ನಮ್ಮ ಜನರಿಗೆ ಈ ಭಾಷೆಯನ್ನು ಮಾತನಾಡುವ ವಾಡಿಕೆಯಿದೆ. ಆದ್ದರಿಂದ ಕನ್ನಡವನ್ನು ಪ್ರಾದೇಶಿಕ ಭಾಷೆಯೆಂದು (Regional language) ಕರೆಯುವುದು ನಿರ್ವಿವಾದವಾದ ವಿಷಯ. ಇದರ ಜೊತೆಗೆ ಇತರ ಭಾಷೆಗಳಿಗೂ ತಕ್ಕಷ್ಟು ಅವಕಾಶ ಮಾಡಿಕೊಡಬೇಕಾದುದು ಅವಶ್ಯಕ. ಸರ್ಕಾರದ ಉದ್ದೇಶವೂ ಇದೇ ಎಂದು ಭಾವಿಸಬಹುದಾಗಿದೆ. ಇತರ ಪ್ರದೇಶಗಳ ಪದ್ಧತಿಯನ್ನು ಗಮನಿಸಿದರೆ ಇದಕ್ಕೆ ಸಮರ್ಥನೆಯು ದೊರೆಯುತ್ತದೆ. ಇದಲ್ಲದೆ ನಮ್ಮ ದೇಶಕ್ಕೆ ಒಂದು ರಾಷ್ಟ್ರಭಾಷೆಯಿರಬೇಕೆಂದು ರಾಜ್ಯಾಂಗವೇ ತೀರ್ಮಾನಿಸಿರುತ್ತದೆ. ಇದರ ಮೇಲೆ ಅಂತರರಾಷ್ಟ್ರೀಯ ಭಾಷೆಯಾದ ಇಂಗ್ಲೀಷ್ ಭಾಷೆಗೂ ತಕ್ಕ ಸ್ಥಾನವಿರಬೇಕೆಂಬುದನ್ನೂ ಮರೆಯುವಂತಿಲ್ಲ. ಆದ್ದರಿಂದ ನಮ್ಮ ಸಂಸ್ಥಾನದಲ್ಲಿ ರೀಜಿಯೊನಲ್ ಭಾಷೆಯಾಗಿರುವ ಕನ್ನಡಕ್ಕೂ, ಅಂತರರಾಷ್ಟ್ರೀಯ ಭಾಷೆಯಾಗಿರುವ ಇಂಗ್ಲೀಷಿಗೂ, ರಾಷ್ಟ್ರೀಯ ಭಾಷೆಯಾಗಿರುವ ಹಿಂದಿಗೂ, ಇತರ ಎರಡು ಮೂರು ಸ್ಥಳೀಯ ಭಾಷೆಗಗಳಿಗೂ, ಯಾವ ರೀತಿಯಲ್ಲಿ ಅವಕಾಶ ಕಲ್ಪಿಸಿಕೊಡಬೇಕೆಂಬುದನ್ನು ನೀವು ಯೋಚನೆಮಾಡಬೇಕಾಗಿದೆ.

ಈಗ ಪ್ರೈಮರಿ ವಿದ್ಯಾಭ್ಯಾಸದ ದರ್ಜೆಯಲ್ಲಿ ಪ್ರತ್ಯೇಕವಾಗಿ ಕನ್ನಡ, ಉರ್ದು ಶಾಲೆಗಳೂ ಕೆಲವು ತಮಿಳು ಮತ್ತು ತೆಲುಗು ಶಾಲೆಗಳೂ ಇವೆ. ಹೀಗೆ ಬೇರೆ ಬೇರೆ ಶಾಲೆಗಳು ಇರುವುದಕ್ಕೆ ಬದಲಾಗಿ ಒಂದೇ ಸ್ಥಳದಲ್ಲಿ ಎಲ್ಲಾ ಭಾಷೆಗಳ ವಿದ್ಯಾರ್ಥಿಗಳೂ ಸೇರಿ ಅವರವರ ಭಾಷೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೂರೈಸುವುದಕ್ಕೆ ಅವಕಾಶವಾದರೆ ಪಾಠಶಾಲೆಗಳು ತೃಪ್ತಿಕರವಾಗಿಯೂ ಮತ್ತು ದಕ್ಷತೆಯಿಂದಲೂ ನಡೆಯುವುವೆಂಬುದನ್ನು ಮನಗಾಣಬಹುದು. ಆ ರೀತಿ ಏರ್ಪಾಡು ಮಾಡಲು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾದುದೂ ಅಗತ್ಯ.

ಅನಂತರ ಮಾಧ್ಯಮಿಕ ವಿದ್ಯಾಭ್ಯಾಸವನ್ನು ತೆಗೆದುಕೊಂಡರೆ ಉರ್ದು, ಕನ್ನಡ ಮತ್ತು ಒಂದೆರಡು ತೆಲುಗು, ತಮಿಳು ಸ್ಕೂಲುಗಳು ಬೇರೆ ಬೇರೆಯಾಗಿರುವುದು ಕಂಡುಬರುತ್ತದೆ. ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಮಾತೃಭಾಷೆಯೇ ಮಾಧ್ಯಮವಾಗಿರಲು ಅವಕಾಶವಿರಬೇಕೆಂದು ಒಪ್ಪುವುದರಲ್ಲಿ ಅಭ್ಯಂತರವಿಲ್ಲ. ಆದರೆ ಮಾಧ್ಯಮಿಕ ಶಾಲೆ ಮತ್ತು ಇದರ ಮೇಲಿನ ವಿದ್ಯಾಭ್ಯಾಸಕ್ಕೆ ಹೋಗುವುದಕ್ಕೆ ಮುಂಚೆ ವಿದ್ಯಾರ್ಥಿಗಳೆಲ್ಲರೂ ರೀಜನಲ್ ಭಾಷೆಯಲ್ಲಿ ತಕ್ಕ ಪರಿಚಯವನ್ನು ಹೊಂದಿರುವುದು ಅಗತ್ಯ. ಆದ್ದರಿಂದ ಮಾತೃಭಾಷೆಗಳಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳು ಪ್ರಾಥಮಿಕ ಅಭ್ಯಾಸದ ಮೂರು ಮತ್ತು ನಾಲ್ಕನೆಯ ತರಗತಿಗಳಲ್ಲಿ ಪ್ರಾದೇಶಿಕ ಭಾಷೆಯನ್ನು ಕಲಿತುಕೊಳ್ಳಲು ಏರ್ಪಡಿಸಬೇಕು. ಏಕೆಂದರೆ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳಿಗೆ ಹೋದಕೂಡಲೆ ಅಲ್ಲಿ ಎಲ್ಲಾ ಪಾಠ ಪ್ರವಚನಗಳೂ ರೀಜನಲ್ ಭಾಷೆಯಲ್ಲೇ ನಡೆಯಬೇಕಾದುದು ಅನಿವಾರ್ಯ. ಅಲ್ಲಿ ಇತರ ಭಾಷೆಗಳನ್ನು ಕೇವಲ ಐಚ್ಛಿಕವಾಗಿ ಮಾತ್ರ ಕಲಿಯಬಹುದಷ್ಟೆ. ಜೊತೆಗೆ ರಾಷ್ಟ್ರಭಾಷೆಯಾದ ಹಿಂದಿಯನ್ನು ಕಲಿಯಲು ಸಹಜವಾಗಿಯೇ ಏರ್ಪಾಡುಮಾಡಬೇಕಾಗಿದೆ. ಇನ್ನು ವಿಶ್ವವಿದ್ಯಾನಿಲಯದ ಅಭ್ಯಾಸಕ್ಕೆ ಹೋದರೆ ಅಲ್ಲಿ ಬೋಧಕ ಮತ್ತು ಪರೀಕ್ಷೆಯ ಭಾಷೆಗಳನ್ನು ನಿರ್ಧರಿಸಬೇಕಾಗಿದೆ. ಈ ವಿಷಯವು ಇಂಡಿಯಾದ ಹಲವು ಸರ್ಕಾರಗಳ ಮತ್ತು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ. ಹೀಗೆ ಬೇರೆ ಬೇರೆ ವಿದ್ಯಾಭ್ಯಾಸದ ಪಟ್ಟಿಗಳಲ್ಲಿ ಭಾಷೆಗಳಿಗೆ ಬಂದರೆ ಮಾತೃಭಾಷೆ, ಪ್ರಾದೇಶಿಕ ಭಾಷೆ, ರಾಷ್ಟ್ರೀಯ ಭಾಷೆ ಮತ್ತು ಅಂತರ ರಾಷ್ಟ್ರೀಯ ಭಾಷೆಗಳಿಗೆ ಯಾವ ವಿಧವಾದ ಅನಾನುಕೂಲವೂ ಆಗದಹಾಗೆ ಏರ್ಪಾಡುಮಾಡಬೇಕಾಗಿದೆ. ಈ ವಿಚಾರದಲ್ಲಿ ಜನಾಭಿಪ್ರಾಯವು ನಾನಾ ರೀತಿಯಲ್ಲಿ ಹೊರಬೀಳುತ್ತದೆ. ಇದನ್ನು ಸುಮ್ಮನೆ ಬಿಡುವುದಕ್ಕಾಗುವುದಿಲ್ಲ. ಆದ್ದರಿಂದ ಈ ವಿಚಾರದಲ್ಲಿ ನಿರ್ದಿಷ್ಟವಾದ ಭಾಷಾ ನೀತಿಯನ್ನು ಅನುಸರಿಸಿದರೆ ವ್ಯರ್ಥವಾದ ಭಿನ್ನಾಭಿಪ್ರಾಯಗಳಿಗೆ ಅವಕಾಶವು ತಪ್ಪಿಹೋಗುವುದು. ಯಾರಿಗೂ ಅನಾನುಕೂಲವಾಗದಂತೆ ವ್ಯವಸ್ಥೆ ಮಾಡಲು ಅವಕಾಶವಿದ್ದೇ ಇರುತ್ತೆ. ಇದರಿಂದ ನಮ್ಮ ಅಭಿವೃದ್ಧಿ ಕಾರ್ಯಗಳನ್ನು ಸುಗಮವಾಗಿ ನಡೆಸುವುದಕ್ಕೂ ಅವಕಾಶವಾಗುವುದರಲ್ಲಿ ಸಂದೇಹವಿಲ್ಲ.

ಈ ಮಧ್ಯೆ ಶ್ರೀಮಾನ್ ಗೋವಿಂದ ರೆಡ್ಡಿಯವರು ಒಂದು ವಿಚಾರ ಹೇಳಿದರು. ನಾನು ವೀರಶೈವರ ಒಂದು ಸಮ್ಮೇಳನಕ್ಕೆ ಅಧ್ಯಕ್ಷನಾಗಿ ವೀರಶೈವರ ಸಂಸ್ಕೃತಿಯ ಪ್ರತ್ಯೇಕತೆಯನ್ನು ಪ್ರತಿಪಾದಿಸಿದೆನೆಂದು ಅವರು ಹೇಳಿದರು. ಆದರೆ ಅಂಥಾ ಸಮ್ಮೇಳನ ಯಾವುದಕ್ಕೂ ಅಧ್ಯಕ್ಷನಾಗಿ ಇರಲಿಲ್ಲ. ಹಿಂದೂ ಕೋಡ್ ಸುಧಾರಣೆ ಸಂಬಂಧದಲ್ಲಿ ಸಾರ್ವಜನಿಕರ ಅಭಿಪ್ರಾಯವನ್ನು ತಿಳಿಸಲು ಕೇಳಿದಾಗ ಇಂಥಾ ಕಾನೂನಿಗೆ ಅನ್ವಯಿಸಿ ವೀರಶೈವರ ಸ್ಥಾನಮಾನ ಏನಿರಬೇಕೆಂಬ ವಿಷಯದಲ್ಲಿ ಕೆಲವು ಸಂಗತಿಗಳನ್ನು ಹೇಳಿರಬಹುದೇ ಹೊರತು ವೀರಶೈವರ ಪ್ರತ್ಯೇಕತೆಯನ್ನು ಸಾಧಿಸಲು ನಾನು ಯಾವಾಗಲೂ ಪ್ರಯತ್ನಿಸಿಲ್ಲ. ವೀರಶೈವರು ಹಿಂದೂ ಮತದಲ್ಲಿ ತಮ್ಮದೇ ಆದ ಆಚಾರ, ಧರ್ಮ ನೀತಿಗಳನ್ನು ಅನುಸರಿಸುತ್ತಿದ್ದರೆಂದ ಮಾತ್ರಕ್ಕೆ ಹಿಂದೂಗಳಿಂದ ಪ್ರತ್ಯೇಕವಾದವರೆಂದು ಹೇಳಿದಂತೆ ಅರ್ಥ ಮಾಡಿಕೊಳ್ಳಬಾರದು. ಇಂಥಾ ಅಭಿಪ್ರಾಯವನ್ನು ನಾನು ಯಾವಾಗಲೂ ವ್ಯಕ್ತಪಡಿಸಿರುವುದಿಲ್ಲ.

Sri L. SIDDAPPA.—May I know what the definite view of the Hon'ble Member is regarding the present cut motion till the Government evolve a system which he has envisaged in his remarks?

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಏಕಾಏಕಿ ಈಗಿರುವ ಉರ್ದು ಶಾಲೆಗಳನ್ನು ವಜಾಮಾಡಿದ್ದೇವೆಂದು ಆಜ್ಞೆ ಮಾಡುವುದಕ್ಕಾಗುವುದಿಲ್ಲ. ಮೊದಲು ನಮಗೆ ಅನ್ವಯಿಸುವ ಭಾಷೆಗಳನ್ನು ತೆಗೆದುಕೊಂಡು, ಯಾವ ಯಾವ ಮಟ್ಟದಲ್ಲಿ, ಯಾವ ಯಾವ ಭಾಷೆಗಳ ಮೂಲಕ ವಿದ್ಯಾಭ್ಯಾಸವು ನಡೆಯಬೇಕೆಂಬುದನ್ನು ತೀರ್ಮಾನಿಸಬೇಕು. ಇಂಥಾ ನಿರ್ದಿಷ್ಟವಾದ ಭಾಷಾ ನೀತಿಯನ್ನು ಕೈಗೊಳ್ಳಲು ತೀರ್ಮಾನಿಸಿದ ನಂತರ ಅದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಅನಿವಾರ್ಯವಾದ ಕಾರಣಗಳಿಂದ ಈ ಕಾರ್ಯಕ್ರಮವು ಪೂರ್ತಿಗೊಳ್ಳಬೇಕಾದರೆ ಸ್ವಲ್ಪ ಕಾಲವೂ ಹಿಡಿಯಬಹುದು. ಅಂತೂ ಈ ವಿಚಾರದಲ್ಲಿ ಯಾವುದಾದರೂ ಸ್ಪಷ್ಟವಾದ ತೀರ್ಮಾನಕ್ಕೆ ಬರುವುದು ಎಲ್ಲರಿಗೂ ಒಳ್ಳೆಯದು.

ಈ ಸೇವಾದಳದವರು ಯಾವ ಕಡೆ ಎಷ್ಟರ ಮಟ್ಟಿಗೆ ಕೆಲಸ ಮಾಡಿ ಪೋಲೀಸ್‌ನವರಿಗೂ ಮತ್ತು ಇತರ ಸರ್ಕಾರದ ಅಧಿಕಾರಿಗಳಿಗೂ ಸಹಕಾರ ಮತ್ತು ಬೆಂಬಲ ನೀಡಿದ್ದಾರೆಂಬುದನ್ನು ಕೆಲವು ಉದಾಹರಣೆಗಳ ಮೂಲಕ ತಮ್ಮ ಗಮನಕ್ಕೆ ತರುತ್ತೇನೆ. ನನಗೆ ಗೊತ್ತಿರುವ ಹಾಗೆ ನಮ್ಮ ದೊಡ್ಡಬಳ್ಳಾಪುರಕ್ಕೆ ಮೂರು ಮೈಲಿ ಹತ್ತಿರದಲ್ಲಿ ಕಸ್ತೂರು ಎಂಬ ಗ್ರಾಮ ಇದೆ. ಅಲ್ಲಿ ಒಬ್ಬ ಗೂಂಡಾ ಹುಟ್ಟಿಕೊಂಡು ವ್ಯವಸಾಯ ಮಾಡುವುದನ್ನು ಬಿಟ್ಟು, ಇತರ ಕಸುಬನ್ನು ಬಿಟ್ಟು ದುಡ್ಡು ಬೇಕಾದಾಗೆಲ್ಲಾ ಜನರನ್ನು ಹೆದರಿಸಿ ಒಂದೊಂದು ಸಾರಿಗೆ 500, 600, 800, 1,000 ರೂಪಾಯಿಗಳ ವರೆಗೂ ವಸೂಲು ಮಾಡಿಕೊಂಡಿದ್ದಾನೆ. ಇದನ್ನು ಆ ಹಳ್ಳಿಯವರು ಬಂದು ಹೇಳಿದಾಗ ನಮಗೆ ಬಹಳ ಆಶ್ಚರ್ಯವಾಯಿತು. ಅದು ದೊಡ್ಡಬಳ್ಳಾಪುರದ ಟೌನ್‌ಗೆ ಬಹಳ ಹತ್ತಿರದಲ್ಲಿದೆ. ಅಷ್ಟು ಹತ್ತಿರದ ಹಳ್ಳಿಯಲ್ಲೇ ಇಷ್ಟರ ಮಟ್ಟಿಗೆ ಪುಂಡಾಟಿಗೆ ನಡೆಯುತ್ತಿದೆಯಲ್ಲಾ ಎಂದು ಆಶ್ಚರ್ಯವಾಯಿತು. ಪೋಲೀಸ್‌ನವರಿಗೆ ದೂರು ಕೊಡಲಿಲ್ಲವೇ ಎಂದು ಕೇಳಿದಾಗ ಅವರು ಬಹಳ ವ್ಯಸನದಿಂದ ಪೋಲೀಸ್‌ನವರಿಂದ ಏನೇನೂ ಸಹಾಯ ದೊರಕಲಿಲ್ಲವೆಂದು ಹೇಳಿದರು. ಅಷ್ಟೇ ಅಲ್ಲದೆ ಸೇವಾದಳದವರು ಬಂದು ಸಹಾಯ್ಯ ಮಾಡಿದರೆ ಊರಿನಲ್ಲಿ ಉಳಿದುಕೊಂಡು ಇರುತ್ತೇವೆ, ಇಲ್ಲದೇ ಇದ್ದರೆ ಊರನ್ನು ಬಿಟ್ಟು ಹೋಗುತ್ತೇವೆ, ಅವನ ಹಾವಳಿಯನ್ನು ತಡೆಯುವುದಕ್ಕೆ ಅಸಾಧ್ಯವಾಗಿದೆ ಎಂದು ಹೇಳಿದರು. ರಾತ್ರೋ ರಾತ್ರಿ ಸೇವಾದಳದವರು ಅಲ್ಲಿಗೆ ಹೋಗಿ ಆ ಗೂಂಡಾನ ಮನೆಯಲ್ಲಿ ಗವಾಕ್ಷಿಯಿಂದ ಇಳಿದು ನೋಡಿದಾಗ ಎರಡು ಲೋಡ್ ಮಾಡಿದ ಬಂದೂಕಗಳನ್ನು ಇಟ್ಟುಕೊಂಡಿದ್ದ. ಆ ಮೇಲೆ ಅವನನ್ನು ಹಿಡಿದು ಪೋಲೀಸ್‌ನವರಿಗೆ ಕೊಟ್ಟಿದ್ದಾಯಿತು. ಆ ಗ್ರಾಮದಲ್ಲಿ ಈ ರೀತಿ ನಡೆದಿದೆ ಎಂಬ ವಿಷಯವನ್ನು ಹೇಳಬೇಕೆಂದಿದ್ದೆ, ಹೇಳಿದ್ದೇನೆ. ದೊಡ್ಡಬಳ್ಳಾಪುರದ ಟೌನ್‌ನಲ್ಲೂ ಎಷ್ಟೋ ಜನ ಪುಂಡರು ಹುಟ್ಟಿಕೊಂಡು ರೇಷನ್ ಕಾರ್ಡುಗಳನ್ನು ಬಲವಂತವಾಗಿ ಕಿತ್ತುಕೊಳ್ಳುವುದು, ಡಿಪೋಗಳಿಗೆ ಹೋಗಿ ಹೆಚ್ಚು ಧಾನ್ಯ ತೆಗೆದುಕೊಂಡು ನಾವು ಕಂಡಹಾಗೆ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುವುದು, ಈ ರೀತಿ ಎಲ್ಲಾ ಮಾಡುತ್ತಿದ್ದಾರೆ. ಅಷ್ಟೇ ಅಲ್ಲದೆ ದಾರಿಯಲ್ಲಿ ಹೋಗುತ್ತಿದ್ದವರು ದುರ್ಬಲರು ಎಂದು ಕಂಡು ಬಂದರೆ ಜೇಬಿನಲ್ಲಿರುವ ದುಡ್ಡನ್ನು ಕಿತ್ತುಕೊಂಡು ಸಾಯಂಕಾಲ ಕುಡಿಯುವುದಕ್ಕೆ ಹೋಗುತ್ತಾ ಇದ್ದಾರೆ. ನಮ್ಮ ಟೌನ್‌ನಲ್ಲಿ ಇಷ್ಟರ ಮಟ್ಟಿಗೆ ನಡೆಯುತ್ತಾ ಇದ್ದರೂ ಅದು ನಮ್ಮ ಪೋಲೀಸ್‌ನವರ ಗಮನಕ್ಕೆ ಬಂದಿಲ್ಲ. ಈ ಗೂಂಡಾಗಳ ಗೂಂಡಾವರ್ತನೆಗೆ ಸಿಕ್ಕಿದವರು, ಪೋಲೀಸ್‌ನವರಿಗೆ ತಿಳಿಸುವುದಕ್ಕೆ ಧೈರ್ಯವಿಲ್ಲ. ಏಕೆಂದರೆ, ಆ ರೀತಿ ದೂರು ಕೊಟ್ಟಿದ್ದೇವೆ ಎಂದು ತಿಳಿದಾಕ್ಷಣ ನಮ್ಮ ಮನೆ ಮೇಲೆ ಧಾಳಿ ಮಾಡಿ, ಪ್ರಾಣಾಪಾಯಕ್ಕೆ ಒಳಗಾಗುವ ಪರಿಸ್ಥಿತಿಗಳು ತಲೆದೋರಬಹುದು ಎಂದು ಹೇಳಿದ್ದರಿಂದ ಸೇವಾದಳದ ಹುಡುಗರು ಒಂದು ವ್ಯವಸ್ಥೆ ಮಾಡಿಕೊಂಡು ಯಾರ್ಯಾರ ಮನೆಗಳ ಮೇಲೆ ಧಾಳಿ ಮಾಡಬೇಕೆಂದು ನಿಶ್ಚಯ ಮಾಡಿಕೊಂಡಿದ್ದರೋ ಅವರ ಮನೆಗಳ ಹತ್ತಿರ ನಾಲ್ಕೈದು ಜನ ಕಾದುಕೊಂಡಿದ್ದು ಆ ಗೂಂಡಾಗಳನ್ನು ಹೆದರಿಸಿ ಅಡಗಿಸಿದರು.

ಅಧ್ಯಕ್ಷರು.—ಈ ವಿಷಯಕ್ಕೆ ಸಂಬಂಧಪಟ್ಟ ವಿಚಾರವನ್ನು ಹೇಳಿ.

ಶ್ರೀ ಎಸ್. ಆರ್. ಗುರುಲಿಂಗಯ್ಯನವರು.—ಈರೀತಿ ಎಷ್ಟೋ ಆಗುತ್ತಾ ಇವೆ ಎಂಬುದನ್ನು ಸಭೆಯವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕೆ. ಪುಟ್ಟಸ್ವಾಮಿಯವರು.—ಅವರು ಪೋಲಿಸ್ ರಕ್ಷಣೆಯ ವಿಚಾರ ಹೇಳುತ್ತಾ ಇರುವ ಹಾಗೆ ಇದೆ.

ಶ್ರೀ ಎಸ್. ಆರ್. ಗುರುಲಿಂಗಯ್ಯನವರು.—ಆರೀತಿ ಏನೂ ಇಲ್ಲ. ಈ ಎರಡು ಉದಾಹರಣೆಗಳನ್ನು ಮಾತ್ರ ಕೊಟ್ಟು ನಮ್ಮ ಯುವಕರಲ್ಲಿ ಒಂದು ಸ್ಫೂರ್ತಿ, ಆದರ್ಶವನ್ನು ಅವರ ಮುಂದಿಟ್ಟರೆ ಅವರು ಎಷ್ಟರ ಮಟ್ಟಿಗೆ ಚೆನ್ನಾಗಿ ಕೆಲಸ ಮಾಡುತ್ತಾರೆ ಎಂಬುದನ್ನು ಸಭೆಯವರ ಗಮನಕ್ಕೆ ತಂದಿದ್ದೇನೆ. ಅವರು ಇತರ ಕಡೆಗಳಲ್ಲಿ ಯಾವ ರೀತಿ ಏನೇನು ಕೆಲಸ ಮಾಡುತ್ತಿದ್ದಾರೆಂಬುದನ್ನು ಹೇಳಿ ಮುಗಿಸುತ್ತೇನೆ.

ಅಧ್ಯಕ್ಷರು.—ಆ ತರಹ ಹೇಳುವುದು ಅನಾವಶ್ಯಕ.

ಶ್ರೀ ಎಸ್. ಆರ್. ಗುರುಲಿಂಗಯ್ಯನವರು.—ಸೇವಾದಳ ಮತ್ತು ಇತರ ಕಾರ್ಯಕ್ರಮಗಳಿಗಾಗಿ ಈ ವರ್ಷದ ಬಡ್ಜೆಟ್‌ನಲ್ಲಿ ಏನೇನೂ ಒದಗಿಸಿಲ್ಲ ಎಂದು ಹೇಳಿದರೂ ಉತ್ಪ್ರೇಕ್ಷೆಯಾಗುವುದಿಲ್ಲ. ಆದ್ದರಿಂದ ನಾನು ಒತ್ತಿ ಒತ್ತಿ ಹೇಳುವುದೇನೆಂದರೆ, ಸರ್ಕಾರದವರು ಸೇವಾದಳದವರು ಏನೇನು ಕೆಲಸಕಾರ್ಯಗಳನ್ನು ಮಾಡಿದ್ದಾರೆಂಬ ವರದಿಯನ್ನು ತರಿಸಿಕೊಂಡು ಅವರಿಗೆ ಸೂಕ್ತ ರೀತಿಯಲ್ಲಿ ಸಹಾಯ ಮಾಡುವುದರಿಂದ ದೇಶದ ಏಳಿಗೆ ಆಗುತ್ತದೆ, ದೇಶೋನ್ನತಿಯ ಸಾಧನೆಯಾಗುತ್ತದೆಂದು ಕಂಡು ಬಂದರೆ ಒಂದು ಲಕ್ಷವಲ್ಲ ಇನ್ನೂ ಹೆಚ್ಚಿಗೆ ಆದರೂ ಕೊಟ್ಟು ಉತ್ತೇಜನ ಕೊಡಬೇಕೆಂದು ಹೇಳಿ ಈ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ.

Mr. SPEAKER.—Cut motion moved:

"That the demand under the head '26. Education' for Rs. 2,83,06,000 be reduced by Re. 1.'

Janab J. MAHOMED IMAM.—I want clarification on two points, whether it is a party organisation or a non-party organisation; whether it is a communal or non-communal organisation.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಆ ವಿಷಯ ನಾನು ಹೇಳುತ್ತೇನೆ. ಹಿಂದೆ ಕಾಂಗ್ರೆಸ್ ಸೇವಾದಳ ಎಂಬ ಒಂದು ಸಂಸ್ಥೆ ಕೆಲಸ ಮಾಡುತ್ತಾ ಇತ್ತು. ಆ ಸಂದರ್ಭದಲ್ಲಿ ಅದು ಕಾಂಗ್ರೆಸ್ ಪರವಾಗಿದ್ದು ಕೆಲಸ ಮಾಡುತ್ತಿತ್ತು. ಆ ರೀತಿ ಯಾವುದಾದರೂ ಒಂದು ಪಾರ್ಟಿಗೆ ಸೇರಿರತಕ್ಕದ್ದು ಸರಿಯಲ್ಲ. ಆ ರೀತಿ ಒಂದು ಪಾರ್ಟಿಗೆ ಅಫಿಲಿಯೇಟ್ ಆಗಿರಬಾರದು. ಹಾಗಿದ್ದರೆ ಸೇವಾ ಮನೋಭಾವಕ್ಕೂ ಕೂಡ ಅಡ್ಡಿ ಆತಂಕ ಬರಬಹುದಾದ ಸಂದರ್ಭ ಒದಗಬಹುದು, ರೂಲ್ಸ್, ರೆಗ್ಯುಲೇಷನ್‌ಗೆ ವಿರೋಧವಾಗಬಹುದೆಂಬ ಭಾವನೆಯಿಂದ ಇತ್ತೀಚೆಗೆ ಅಖಿಲ ಮೈಸೂರು ಸೇವಾ ಮನೋಭಾವವನ್ನುಳ್ಳ ಜನಗಳ ಒಂದು ಸಭೆ ಸೇರಿ ಅದನ್ನು ಬದಲಾವಣೆ ಮಾಡಿದರು. ಇದರ ಧ್ಯೇಯೋದ್ದೇಶಗಳು ಇಷ್ಟು: ದೇಶದ ಹಿತರಕ್ಷಣೆಗೆ ದೇಶದ ಯುವಕರ ನೈತಿಕ ಮಟ್ಟವನ್ನು ಮೇಲೆ ಏರಿಸುವುದಕ್ಕೆ, ದೇಶದಲ್ಲಿ ಸೇವಾ ಮನೋಭಾವ ಮೂಡುವುದಕ್ಕೆ ಒಂದು ಶಿಸ್ತನ್ನು ಯುವಕರಲ್ಲಿ ಅಳವಡಿಸಿ ಶಿಸ್ತಿನ ಜೀವನವನ್ನು ನಡೆಸುವುದಕ್ಕೆ ಸಾಧಕವಾಗಲೆಂಬ ಸದುದ್ದೇಶದಿಂದ ಈ ಸಂಘವನ್ನು ಪ್ರಾರಂಭಮಾಡಿದೆ. ಮಹಾತ್ಮಾ ಗಾಂಧೀಜಿಯವರ ಅಹಿಂಸೆ ಮತ್ತು ರಚನಾತ್ಮಕ ಕಾರ್ಯಕ್ರಮವನ್ನು ಈ ಸಂಘದ ಮೂಲೋದ್ದೇಶವನ್ನಾಗಿ ಇಟ್ಟುಕೊಳ್ಳಲಾಗಿದೆ. ಶ್ರೀಮಾನ್ ಗುರುರವರು ರಾಷ್ಟ್ರೋದ್ಧಾರ ಕಾರ್ಯ ಎಂಬುದಾಗಿ ಏನು ಹೇಳಿದ್ದಾರೋ ಅದೆಲ್ಲಾ ಇದರಲ್ಲಿ ಅಡಕವಾಗಿದೆ. ಈ ರೀತಿ ಮಕ್ಕಳ ವಿದ್ಯಾಭ್ಯಾಸದ ಮಟ್ಟವನ್ನು ಮೇಲೆ ಏರಿಸಿ ಅವರ ಜೀವನದಲ್ಲಿ ಒಂದು ಹೊಸ ಹುರುಪು ಮೂಡುವಂತೆ ಮಾಡಿ, ಜನತಾಸೇವೆಯನ್ನೇ ಒಂದು ಮುಖ್ಯೋದ್ದೇಶವನ್ನಾಗಿಟ್ಟುಕೊಂಡು ಕೆಲಸ ಕಾರ್ಯಗಳನ್ನು ಮಾಡಲು ಪ್ರಯತ್ನಪಟ್ಟಿದ್ದಾರೆ. ಕಾಂಗ್ರೆಸ್ ಸೇವಾದಳ ಎನ್ನುವುದು ಒಂದು ಸಂಸ್ಥೆಗೆ ಸೇರಿದ್ದು ಎಂಬ ಭಾವನೆ ಇರಬಾರದು ಎಂಬ ಸದುದ್ದೇಶದಿಂದ ಭಾರತದ ಸೇವಾದಳ ಎಂಬ ಹೆಸರಿನಲ್ಲಿ ಇದು ಇದೆ. ಇದು ಯಾವ ಪಾರ್ಟಿಗೂ ಅಫಿಲಿಯೇಟ್ ಆಗಿಲ್ಲ; ಜಾತಿ,ಕುಲ, ಗೋತ್ರಗಳ ಭಾವನೆ ಇಲ್ಲ. ಇಂಡಿಯಾ ದೇಶವು ಹೇಗೆ ಒಂದು ಸೆಕ್ಯೂಲರ್ ಸ್ಟೇಟ್ ಆಗಿದೆಯೋ ಅದೇ ರೀತಿ ಇದೂ ಒಂದು ಸೆಕ್ಯುಲರ್ ಆರ್ಗನೈಜೇಷನ್ ಆಗಿ ಕೆಲಸ ಮಾಡಬೇಕು. ಇದರ ಮುಖ್ಯೋದ್ದೇಶ ಅಹಿಂಸೆ, ರಚನಾತ್ಮಕ ಕಾರ್ಯ, ಭಾರತದ ಉದ್ಧಾರ. ಈ ದೃಷ್ಟಿಯಿಂದ ಇದನ್ನು ಪ್ರಾರಂಭ ಮಾಡಿದ್ದೇವೆ. ಜನಾಬ್ ಇಮಾಂರವರಿಗೆ ಗೊತ್ತಿರಬಹುದು. ಚಿತ್ರದುರ್ಗದಲ್ಲಿ ಸಿರಿಗೆರೆ ಮಠ ಅಂತ ಇದೆ. ಅಲ್ಲಿ ಸ್ವಾಮಿಗಳವರು ಇಂಥಾ ಒಂದು ದಳವನ್ನು ವಿದ್ಯಾರ್ಥಿಗಳಿಂದ ಸ್ಥಾಪಿಸಿ ಬಲಾತ್ಕಾರವಾಗಿ ಈ ವಿಧವಾದ ತರಬೇಯತ್ತು ಕೊಡುತ್ತಾ ಇದ್ದಾರೆ. ಅದರ ಸುತ್ತ ಮುತ್ತಲೂ ಇರತಕ್ಕ ಹಳ್ಳಿಗಳಲ್ಲಿ ಗ್ರಾಮಾಭ್ಯುದಯ ಕಾರ್ಯವನ್ನು ಆ ವಿದ್ಯಾರ್ಥಿಗಳು ಮಾಡುತ್ತಾ ಇದ್ದಾರೆ. ವಿದ್ಯಾರ್ಥಿಗಳಿಗೆ ಬರೀ ಅಕ್ಷರಾಭ್ಯಾಸ ಮಾತ್ರವಲ್ಲದೆ ಇಂಥಾ ವಿದ್ಯಾಭ್ಯಾಸವೂ ಆಗಬೇಕು. ಅಕ್ಷರಾಭ್ಯಾಸಕ್ಕೂ ಈ ವಿದ್ಯಾಭ್ಯಾಸಕ್ಕೂ ಬಹಳ ವ್ಯತ್ಯಾಸವಿದೆ ಎಂಬುವನ್ನು ತಾವೆಲ್ಲರೂ ಗಮನಿಸಬೇಕು. ಈ ಬಾಲಕನು ಜಗತ್ತಿನಲ್ಲಿರತಕ್ಕ ಅನೇಕ ವಿಷಯಗಳನ್ನು ತಿಳಿದುಕೊಳ್ಳುವುದರ ಜೊತೆಗೆ ದೇಶೋದ್ಧಾರ ಕಾರ್ಯದಲ್ಲಿ ಹೇಗೆ ಸಹಕರಿಸಿಕೊಂಡು ಹೋಗಬೇಕು ಎಂಬುದನ್ನು ತಿಳಿದುಕೊಂಡು ವಿದ್ಯಾರ್ಥಿ ದೆಸೆಯಿಂದಲೇ ಆ ಮನೋಭಾವವನ್ನು ಬೆಳೆಸಿಕೊಳ್ಳುವಂತಾದರೆ ನಿಜವಾಗಿಯೂ ದೇಶಕ್ಕೆ ಬಹಳ ಉಪಕಾರವಾಗುತ್ತದೆ. ಆ ರೀತಿ ಮನೋಭಾವ ಬರಬೇಕಾದರೆ ಇಂಥಾ ಸಂಸ್ಥೆಗಳು ಬೆಳೆಯಬೇಕು. ಮೈಸೂರು ದೇಶದ ಪ್ರತಿಯೊಬ್ಬ ಯುವಕನೂ ಈ ರೀತಿ ತರಬಿಯತ್ತನ್ನು ಹೊಂದಿ ರಾಷ್ಟ್ರೀಯ ಮನೋಭಾವವನ್ನು ಬೆಳೆಸಿಕೊಂಡ ಹೊರತು ದೇಶೋದ್ಧಾರವಾಗುವುದಿಲ್ಲ ಎಂಬುದನ್ನು ಮನಗಾಣಬೇಕು. ಅಂಥ ಒಂದು ಶಿಸ್ತು, ಸಂಯಮ, ಸೇವಾ ಮನೋಭಾವ ಎಲ್ಲಕ್ಕಿಂತಲೂ ಹೆಚ್ಚಾಗಿ ರಾಷ್ಟ್ರೀಯಭಾವನೆಯನ್ನು ಮೂಡಿಸುವುದಕ್ಕೆ ಪ್ರತಿಯೊಂದು ಸ್ಥಳದಲ್ಲೂ, ಸ್ಕೂಲು, ಕಾಲೇಜು ಮುಂತಾದ ಎಲ್ಲಾ ಕಡೆಯೂ ಈ ಭಾವನೆ ಬೆಳೆಯಬೇಕು. ಅಷ್ಟೇ ಅಲ್ಲದೆ ಯುವಕರು ಯುವಕಿಯರಲ್ಲಿ ಒಂದು ಶಿಸ್ತಿನ ಮನೋಧರ್ಮ ಬೆಳೆದು ರಾಷ್ಟ್ರೀಯ ಭಾವನೆ ಮೂಡುವಂತೆ ಮಾಡುವುದರಿಂದ ಇದು ಎಲ್ಲಕ್ಕಿಂತಲೂ ಮಿಗಿಲಾದ ವಿದ್ಯಾಭ್ಯಾಸವಾಗುತ್ತದೆ. ನಾನು ಇವತ್ತು ಹೇಳಬೇಕೆಂದರೆ ಶಾಂತಿನಿಕೇತನದಲ್ಲಿ ಯಾವ ರೀತಿ ಒಂದು ಕಾರ್ಯ ನಡೆಯುತ್ತಿದೆಯೋ ಅದೇ ರೀತಿ ಸಿರಿಗೆರೆಯಲ್ಲಿ ನಡೆಯುತ್ತ ಇದೆ. ಅದನ್ನು ಉದಾಹರಣೆಯಾಗಿ ತೆಗೆದುಕೊಂಡು ಈ ದಿನ ಅಲ್ಲಿ ಹೋಗಿ ನೋಡಿದರೆ ಆ ಪ್ರದೇಶದ ಸುತ್ತ ಮುತ್ತಲೂ ಇರತಕ್ಕ 50 ಹಳ್ಳಿಗಳು ಹೊಸ ರೂಪವನ್ನು ತಾಳಿವೆ.

ಸುಮಾರು 50—60 ಹಳ್ಳಿಗಳವರಿಗೆ ನಾನಾ ರೀತಿಯ ಅನುಕೂಲಗಳಾಗುತ್ತಿವೆ. ಆ ಹಳ್ಳಿಗಳ ರೂಪವೇ ಈಗ ಬದಲಾಯಿಸಿ, ಅಲ್ಲಿಯವರೆಲ್ಲರೂ ಒಂದು ಸದ್ಭಾವನೆಯ ಮನಸ್ಸಿನಿಂದ ವರ್ತಿಸಲು ಇದರಿಂದ ಬಹಳ ಸಹಾಯಕವಾಗಿರುತ್ತದೆ. ಇಂಥಾ

ಸೇವಾಶ್ರಮಗಳಿಗೆ ಹತ್ತಾರು ಸಹಸ್ರ ರೂಪಾಯಿಗಳು ಖರ್ಚಾಗುತ್ತಿದ್ದರೂ, ಅದಕ್ಕೆ ಹಿಂದೆಗೆಯದೆ ಜನರು ಮುನ್ನುಗ್ಗುತ್ತಿದ್ದಾರೆ. ಈವರೆಗೆ ಸರ್ಕಾರದವರಿಂದ ಯಾವ ಖರ್ಚನ್ನೂ ಅಪೇಕ್ಷಿಸದಂತೆ ಆ ಹಳ್ಳಿಗಳ ಜನರೇ ಅದನ್ನು ನಡೆಸಿಕೊಂಡು ಬಂದು ಅಲ್ಲಿರುವ ಅನೇಕ ಹಳ್ಳಿಗಳ ಸ್ವರೂಪವನ್ನೇ ಬದಲಾಯಿಸುವಂತೆ ಮಾರ್ಪಾಡುಗಳನ್ನು ಮಾಡಿದ್ದಾರೆ. ಇಂಥಾದ್ದಕ್ಕೆ ಸಹಾಯ ಮಾಡತಕ್ಕದ್ದು ಮತ್ತು ಇಂಥಾ ಸಂಸ್ಥೆಗಳನ್ನು ಹೆಚ್ಚುಹೆಚ್ಚಾಗಿ ಬೆಳೆಸಿಕೊಂಡು ಬರತಕ್ಕದ್ದು ಸರ್ಕಾರದವರ ಒಂದು ಕರ್ತವ್ಯ. ಎಲ್ಲೆಲ್ಲಿ ಜನಗಳು ಮುಂದೆ ಬಂದು ಇಂಥಾ ಸೇವಾದಳಗಳನ್ನು ಮತ್ತು ಸೇವಾಶ್ರಮಗಳನ್ನು ಕಟ್ಟುಕೊಳ್ಳುತ್ತೇವೆ ಎಂದು ಕೇಳಿದರೆ ಅಂಥವರಿಗೆ ಸರ್ಕಾರದವರು ಎಲ್ಲಾ ಸಹಾಯಗಳನ್ನೂ ನೀಡುವುದು ಉತ್ತಮ. ಆದರೆ ತಾವೀಗ ಅನೇಕ ವಿದ್ಯಾಸಂಸ್ಥೆಗಳಿಗೆ ಮತ್ತು ಇತರ ಅನೇಕ ಸಂಸ್ಥೆಗಳಿಗೆ ಸರ್ಕಾರದಿಂದ ದ್ರವ್ಯ ಸಹಾಯ ನೀಡುತ್ತಿದ್ದೀರಿ. ಅದೇ ರೀತಿ ಈ ಸಂಸ್ಥೆಗಳಿಗೂ ಕೂಡ, ಅಷ್ಟು ಹೆಚ್ಚಿನ ಮೊಬಲಗನ್ನು ಕೊಡುವುದಕ್ಕಾಗದಿದ್ದರೆ, ಸ್ವಲ್ಪವನ್ನಾದರೂ ಕೊಡಬೇಕೆಂದು ಹೇಳುತ್ತೇನೆ, ಇಂಥಾ ಸೇವಾಗ್ರಾಮಗಳನ್ನು ಆಗಾಗ್ಯೆ ಸರ್ಕಾರದವರು ಬದಲಾವಣೆಗಳಿಗನುಸಾರವಾಗಿ ಯಾವತ್ತೂ ಹೆಚ್ಚು ಮಾಡಬೇಕೆಂದು ಮತ್ತು ಅವುಗಳಿಗೆ ಹೆಚ್ಚಿನ ಸಹಾಯವನ್ನು ನೀಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಸ್ವಾಮಿ, ಈ ಖೊತಾ ನಿರ್ಣಯವನ್ನು ಸಮರ್ಥಿಸುತ್ತ ದೇಶಕ್ಕೆ ಹೊಸದಾಗಿ ಸ್ವಾತಂತ್ರ್ಯತೆ ಬಂದಿರುವಾಗ, ಪ್ರಜಾ ಸರ್ಕಾರವು ಆಡಳಿತ ನಡೆಸುತ್ತಿರುವಾಗ, ಅಷ್ಟೇ ಅಲ್ಲದೆ ಸ್ವಾತಂತ್ರ್ಯದಿಂದ ಆಡಳಿತ ನಡೆಸುತ್ತಿರುವ ಇತರೇ ಸ್ವಾತಂತ್ರ್ಯ ದೇಶಗಳೊಡನೆ ನಾವೂ ಕೂಡ ಹೊಂದಿಕೊಂಡು, ಅವರೊಂದಿಗೆ ಬೆಳೆಯಬೇಕಾಗಿದ್ದರೆ, ಎಲ್ಲಕ್ಕಿಂತಲೂ ಹೆಚ್ಚಾಗಿ, ಈ ಬಗ್ಯೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾದ್ದು ಅಗತ್ಯವಾಗಿದೆ. ಈ ಸಂದರ್ಭದಲ್ಲಿ ನಾವು ಮುಖ್ಯವಾಗಿ ಮಾಡಬೇಕಾಗಿರುವುದು ಈಗಿನ ಯುವಕರಲ್ಲಿ ದೇಶವಾತ್ಸಲ್ಯಗಳಿಂದೊಡಗೂಡಿದ ಒಂದು ಮನೋಭಾವ ಎಲ್ಲರಲ್ಲಿಯೂ ಮೂಡುವಂತೆ, ಮತ್ತು ಅವರಲ್ಲಿ ಒಂದು ವಿಶೇಷ ಸಂಘಟನಾಶಕ್ತಿ ಬೆಳೆಯುವಂತೆ ಅವರ ಮನಸ್ಸನ್ನು ಪರಿವರ್ತನೆ ಮಾಡಲು ಈ ಸೇವಾದಳಗಳ ಅಗತ್ಯ ನಮಗೆ ವಿಶೇಷವಾಗಿ ಬೇಕಾಗಿದೆ. ಹೀಗೆ ಮಾಡುವುದರಿಂದ ದೇಶಕ್ಕೆ ಬಹಳ ಉಪಕಾರ ಮಾಡಿದಂತಾಗುತ್ತದೆ. ಇದು ಬಹಳ ಪ್ರಾಮುಖ್ಯವಾದ ವಿಚಾರ.

ಆದರೆ ಈಗ ನಮ್ಮಲ್ಲಿ ಇಂಥಾದ್ದು ನಾಲ್ಕೈದು ಸಂಸ್ಥೆಗಳಿವೆ. ಆ ಬಗ್ಯೆ ಕೆಲವಕ್ಕೆ ಸರ್ಕಾರದವರು ಹಣವನ್ನು ವಿಶೇಷವಾಗಿ ಖರ್ಚು ಮಾಡುತ್ತಿದ್ದಾರೆ. ಸುಮಾರು 40-50 ಸಾವಿರ ರೂಪಾಯಿಗಳು ಈ ಸ್ಕೌಟ್ ಸಂಸ್ಥೆಯ ಬಗ್ಯೆ ಸರ್ಕಾರಕ್ಕೆ ಖರ್ಚಾಗುತ್ತಿದೆ.

ಈ ಸ್ಕೌಟ್ ಚಳುವಳಿ ಮೊದಲು On my honour I will be loyal to the King Emperor ಎಂದು ಎಲ್ಲಾ ಸ್ಕೂಲುಗಳಲ್ಲಿಯೂ ನಡೆದುಕೊಂಡು ಬರುತ್ತಿತ್ತು. ಆದರೆ ಇತ್ತೀಚೆಗೆ ಇದರ ಚಲನವಲನಗಳು ಬದಲಾಯಿಸುತ್ತಿವೆ. ಇದರಂತೆಯೇ ಈಗ ಕೆಲವು ಹೊಸ ಸಂಸ್ಥೆಗಳೂ ಉದ್ಭವವಾಗಿವೆ. ಆದರೆ ಕಾಲಕ್ರಮಕ್ಕೆ ತಕ್ಕಂತೆ ಕೆಲ ಕೆಲವು ಬದಲಾವಣೆಗಳೂ ಆಗಿರುತ್ತವೆ. ಆದರೆ ಮೊದಲಿದ್ದಂತೆ ಈಗಲೂ ಆ ಖಾಕಿ ಉಡುಪನ್ನು ಮಾತ್ರ ತಪ್ಪದೆ ಧರಿಸುತ್ತಿದ್ದಾರೆ. ಇವರ ಮನೋಭಾವ ಮೊದಲು ಹಿಂದಿದ್ದ ಸರ್ಕಾರಕ್ಕನುಗುಣವಾಗಿ ಹೋಗುತ್ತಿತ್ತು. ಈಗ ಕಾಂಗ್ರೆಸ್ ಸರ್ಕಾರ ಬಂದಿದೆ. ಆದ್ದರಿಂದ ಈ ಸರ್ಕಾರದಂತೆ ಈಗ ನಡೆಯುತ್ತಿದೆ. ಮುಂದಕ್ಕೆ ಸ್ವಾಲಿನ್ ಸರ್ಕಾರ ಬಂದರೆ ಆ ಸರ್ಕಾರದ ಮನೋಭಾವಕ್ಕೆ ಹೊಂದಿಕೊಂಡು ಅದರಂತೆ ನಡೆಯಬಹುದು. ಆದರೆ ಹೀಗೆ ಮನೋಭಾವ ಬದಲಾದಂತೆ ಆ ಖಾಕಿ ಉಡುಪು ಮಾತ್ರ ಇನ್ನೂ ಬದಲಾಗಿಲ್ಲ. ಆ ಬಟ್ಟೆಯನ್ನು ಧರಿಸಿದರೆ ಅವರ ಮನೋಭಾವವೇ ಒಂದು ರೀತಿ ಆಗಿಬಿಡುತ್ತೆ. ಆದರೆ ಇದು ಸರಿಯಾದ್ದಲ್ಲ. ಇದನ್ನೆಲ್ಲ ತಡೆಗಟ್ಟಬೇಕಾಗಿದ್ದರೆ ನಾವು ವಿಧ್ಯಾರ್ಥಿಗಳಿಗೆ ಆದಿಯಲ್ಲೇ ಅವರಿಗೆ ಒಂದು ಸುವ್ಯವಸ್ಥಿತವಾದ ಶಿಕ್ಷಣ ಕೊಡಬೇಕು. ಆಗ ಈ ಸೇವಾದಳಗಳಲ್ಲಿ ಕೆಲಸ ಮಾಡಲು ಅವರಿಗೆ ಅನುಕೂಲವಾಗುತ್ತದೆ. ಇಂಥಾ ಶಿಕ್ಷಣದ ಜೊತೆಗೆ ಸಾಯಂಕಾಲದ ವೇಳೆಗಳಲ್ಲಿ ಅವರಿಗೆ ಡ್ರಿಲ್ ಇತ್ಯಾದಿ ಅಂಗಸಾಧನೆಯಾಗತಕ್ಕ ಆಟಪಾಟಗಳನ್ನಾಡಿಸಲು ಮುಖ್ಯ ಗಮನ ಕೊಡಬೇಕು.

ಆದರೆ ಇತ್ತೀಚೆಗೆ ಈ ಸೇವಾದಳದ ಮನೋಭಾವವನ್ನು ನಾನಾ ದಾರಿಗಳಲ್ಲಿ ಜನರು ಸೆಳೆಯುತ್ತಿದ್ದಾರೆ. ಕೆಲವರು ಆರ್. ಎಸ್. ಎಸ್. ಮನೋಭಾವ ಉಳ್ಳವರು, ಕೆಲವರು ಕಮ್ಯುನಿಸ್ಟ್ ಮನೋಭಾವ ಉಳ್ಳವರು, ಮತ್ತೆ ಕೆಲವರು ಸ್ಕೌಟ್ ಚಳುವಳಿಯ ಮನೋಭಾವವುಳ್ಳವರು. ಹೀಗೆ ಯುವಕರ ಮನೋಭಾವ ಚಂಚಲವಾಗಲು ಅವಕಾಶ ಕೊಡಬಾರದು.

ಆದರೆ ಈಗ ಸ್ಕೌಟುಗಳು ಧರಿಸುತ್ತಿರುವ ಖಾಕಿ ಬಟ್ಟೆಯಿಂದ ಅವರ ಮನೋಭಾವ ಯಾವ ಕಡೆ ಹೋಗುತ್ತಿದೆಯೆಂಬುದು ಕಂಡುಬರುವುದಿಲ್ಲ.

ಅಧ್ಯಕ್ಷರು.—ಆ ಸ್ಕೌಟ್ ಚಳುವಳಿಯನ್ನು ತೆಗೆಯಬೇಕೆಂದೇನೂ ಅವರು ಹೇಳಲಿಲ್ಲ. ಅದಕ್ಕೂ ಈ ಸಂದರ್ಭಕ್ಕೂ ಏನು ಸಂಬಂಧವಿದೆ ?

ಶ್ರೀ ಎಂ. ವಿ. ಕೃಷ್ಣಪ್ಪನವರು.—ಒಂದು ವಿಶಾಲವಾದ ಮನೋಭಾವನೆ ಹುಟ್ಟುವಂತೆಯೂ, ಯಾವ ಪಾರ್ಟಿ ಪಂಗಡಗಳ, ಅಥವ ಒಳಪಂಗಡಗಳ ಕಡೆಗೆ ತಮ್ಮ ಗಮನ ಹೋಗದಂತೆಯೂ ದೇಶದ ಹಿತರಕ್ಷಣೆಯ ದೃಷ್ಟಿಯಿಂದ ಆ ಯುವಕರೆಲ್ಲರಲ್ಲಿಯೂ ಒಂದು ಸೇವಾ ತತ್ಪರತೆಯ ಮನೋಭಾವ ಬೆಳೆದುಕೊಂಡು ಬರುವಂತೆ ಆ ಬಗ್ಯೆ ಸರ್ಕಾರದವರು ಎಲ್ಲಾ ಉತ್ತೇಜನ ಮತ್ತು ಸಹಾಯಗಳನ್ನು ನೀಡತಕ್ಕದ್ದು ಧರ್ಮ ಮತ್ತು ನ್ಯಾಯವಾದುದೆಂದು ನಾನು ಹೇಳುತ್ತೇನೆ. ಸರ್ಕಾರದವರೂ ಇದನ್ನು ವಿಶಾಲ ಮನೋಭಾವನೆಯಿಂದ ನೋಡಬೇಕಾದ್ದು ಅತ್ಯಗತ್ಯ.

***Janab J. MAHOMED IMAM.**—I heartily support the cut motion tabled by my friend. Till now I had my own misgiving about this organization. In fact, in the initial stage I was rather confused between two organizations which bear different names, *viz.*, Rajakeeya Seva Dal and Congress Seva Dal. In my own place there were two separate organizations and young men were trained separately. When I asked some Muslim young men to join the organisation, I was told that some of them did try to join the

organization but they were refused admission. With regard to the other organization called Congress Seva Dal, I think some were under the misapprehension because they were supposed to belong to one party.

Sri G. A. ACHARYA.—They need not belong to any party.

Janab J. MAHOMED IMAM.—They had no place in that organization. But whatever it may be, whatever may be the constitution, now that that anomaly has been removed by changing to Congress Seva Dal, I think it is going to be a useful organization. I am very glad to learn and I say that this organization is absolutely not communal and such organizations the country needs, not one or two but in good numbers in order to get rid of anti-social elements which are working underground. Some were under the impression that the Congress organization has been making every effort with a view to help them in future endeavours in election. That is the opinion of many and even now it is believed that the Congress Seva Dal as it is called now is nothing but an endeavour on the part of the Congress to strengthen themselves. I believe that this Congress Seva Dal is not affiliated to any organization or party, nor is it under any obligation to serve any party in time of need. It is perfectly an independent organization, which will be clear to all. Another view which prompted me to support this cut motion is that this Congress Seva Dal, as pointed out by Sri Bheemappa Naik, is really doing good work and I must appreciate the sincerity of the members in improving the villages, in improving the standard of life in villages, the village sanitation and so on. I am of opinion that this organization is of great help to the State and that Government may help this organization to the maximum extent possible.

Sri A. G. RAMACHANDRA RAO.—In the way my friends have spoken I agree with them. But I wish to draw the attention of the Government to this fact that nearly Rs. 2,83,00,000 is budgetted for Education for the coming year. May I point out that education does not merely mean making a person literate, nor does it mean improving the intellect only? Education means that the full potentialities of the individual should be drawn out. Unfortunately, in this country education has meant only making a person literate and making him an intellectual being. That has led to all sorts of abnormalities both in the individual as well as in the society.

I wish to impress upon the Government that this state of affairs should be remedied immediately. The personality of the individual consists on the one side the intellectual aspect and on the other side the moral and social aspects. Out of the Rs. 283 lakhs of the budgetted amount for Education, I am sure more than 99 per cent of it goes towards making him an intellectual being only. Therefore, the Government should at once realise their responsibilities by paying some attention to allotting greater amounts for the development of the other aspects of the individual.

The immediate need of the country is to make him an aesthetic and moral being. Men who have got a character, men who know how to behave in the society are in demand. In order to rectify the existing defects in education, there are several institutions already working. But each one of these institutions has one or two drawbacks. For instance, the R. S. S. goes in a communal manner and the Scout in an international manner. The Bharat Seva Dal and other similar institutions are coming up. They are focussing the attention of the nation to make the citizen more and more moral and a responsible social unit in the society. It is with this object, that the Bharat Seva Dal has been started and its object is to train the student as well as non-students on the line which Mahatma Gandhi, the Father of the Nation, taught us. I believe this has been sufficiently stressed by the other Hon'ble Members already, and I refrain from dilating on it.

I invite the Hon'ble Members to go to Siddaganga and see how Seva Dal Students have put up an actual structure there. It is a monument to their splendid work. A similar work has

been done in Kankanhalli also. The Bharat Seva Dal has an invitation now from the Rural Development Committee for putting up a road and they are going to undertake it. Therefore, such activities whether under Bharat Seva Dal or under other auspices, should be encouraged. This is what is being done in the Western countries also. There are many youth organizations in England and America and they are being fostered by their respective Governments and I urge the Government to follow in their footsteps. With these words I commend this cut motion to the Hon'ble Minister and the Government.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಗುರುರವರು ತಂದಿರುವ ಈ ಖೋತಾ ನಿರ್ಣಯದ ವಿಷಯದಲ್ಲಿ ನಮ್ಮ ಸರ್ಕಾರದವರು ಬಹಳ ಸಹಾನುಭೂತಿಯಿಂದ ಹಣವನ್ನೊದಗಿಸಬೇಕೆಂದು ಪ್ರಾರ್ಥಿಸುತ್ತೇನೆ. ಈಗ ಭಾರತದಲ್ಲಿ ಸೇವಾದಳ ಹಿಂದೆ ನಮ್ಮ ದೇಶ ಸ್ವಾತಂತ್ರಕ್ಕೆ ಹೋರಾಡತಕ್ಕ ಸಂದರ್ಭದಲ್ಲಿ ಬಹಳ ಪ್ರಾಮುಖ್ಯವಾದ ಪಾತ್ರವನ್ನು ವಹಿಸಿದೆ. ಡಾ॥ ಹಾರ್ಡಿಕರ್‌ರವರು ಇದಕ್ಕೆ ಬಹಳ ಮಟ್ಟಿನ ತ್ಯಾಗವನ್ನು ಮಾಡಿದ್ದಾರೆ. ಹೆಚ್ಚಿನ ಸೇವೆ ಸಲ್ಲಿಸಿದ್ದಾರೆ. ಈಗ ಸ್ವಾತಂತ್ರ್ಯ ಬಂದಿದೆ. ಸ್ವಾತಂತ್ರ್ಯ ಬಂದ ಮೇಲೆ ಈ ಸೇವಾದಳಕ್ಕೆ ಕೆಲಸ ಇನ್ನೂ ಹೆಚ್ಚಿಗೆಯಿದೆ ಯೆಂದು ಹೇಳಬೇಕಾಗಿದೆ. ನಿಜವಾಗಿ ಯೋಚನೆ ಮಾಡಿದರೆ, ಈ ಸೇವಾದಳದ ಕೆಲಸ ಈಗ ಪ್ರಾರಂಭವಾಗಿದೆಯೆಂದು ಹೇಳುತ್ತೇನೆ. ಏಕೆಂದರೆ ನಮ್ಮ ದೇಶವನ್ನು ಈಗತಾನೆ ಹೊಸದಾಗಿ ಕಟ್ಟಬೇಕಾಗಿದೆ. ದೇಶವನ್ನು ಕಟ್ಟಬೇಕಾದರೆ ನಾವು ಎಲ್ಲಾ ವಿಷಯಗಳನ್ನೂ ಯುದ್ಧಕಾಲದ ಪರಿಸ್ಥಿತಿಯಂತೆ ಪರಿಗಣಿಸುವುದು ಒಳ್ಳೆಯದು. ದೇಶವನ್ನು ಕಟ್ಟಬೇಕಾದರೆ ಒಂದು ಸೇವಾದಳ ಸೈನ್ಯ (National Militia) ಇರಬೇಕೆಂದು ಹೇಳಬೇಕಾಗಿಲ್ಲ. ನಮ್ಮ ಮಂತ್ರಿಗಳಾದ ಶ್ರೀಮಾನ್ ಸಿದ್ದಲಿಂಗಯ್ಯನವರು ಹಿಂದೆ ಕಾಂಗ್ರೆಸ್ಸಿನಲ್ಲಿ ಇದಕ್ಕಾಗಿ ಬಹಳವಾಗಿ ಸೇವೆ ಮಾಡಿದ್ದಾರೆ. ಸೇವಾದಳದಲ್ಲಿ ಸುಶಿಕ್ಷಿತರಾದವರನ್ನು ನಮ್ಮ ಸಂಸ್ಥಾನದ ವಿದ್ಯಾಶಾಲೆಗಳಲ್ಲಿ ಶಿಕ್ಷಕರಾಗಿ ತೆಗೆದುಕೊಂಡು ಎಲ್ಲಾ ವಿದ್ಯಾರ್ಥಿಗಳಲ್ಲಿಯೂ ಸರಿಯಾದ ಶಿಸ್ತು, ರಾಷ್ಟ್ರಾಭಿಮಾನ—ಇವುಗಳು ಬರುವಂತೆ ಶಿಕ್ಷಣ ಕೊಡಿಸುವುದು ಬಹಳ ಅಗತ್ಯ. ತಾವು ಅವಶ್ಯಕವಾಗಿ ಆರೀತಿ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಮಾನ್ಯ ವಿದ್ಯಾ ಸಚಿವರು ಇದಕ್ಕೆ ತೀವ್ರ ಗಮನ ಕೊಟ್ಟು ಪ್ರಾಥಮಿಕ, ಮಾಧ್ಯಮಿಕ ಮತ್ತು ಹೈಸ್ಕೂಲು ಶಾಲೆಗಳಲ್ಲಿ ಈ ಶಿಕ್ಷಿತರನ್ನು ನೇಮಿಸಿ ಆದಷ್ಟು ಬೇಗನೆ ಈ ಕಾರ್ಯಕ್ರಮ ಆಚರಣೆಗೆ ಬರುವಂತೆ ಮಾಡುತ್ತಾರೆಂದು ನಂಬಿದ್ದೇನೆ. ಸ್ಕೌಟು ಮತ್ತು ಡ್ರಿಲ್ ಮುಂತಾದ ಶಾರೀರಕ ಶಿಕ್ಷಣ ಕೊಡತಕ್ಕ ವ್ಯವಸ್ಥೆಗಳನ್ನು ಸರ್ಕಾರದವರು ಈಗಲೂ ಇಟ್ಟುಕೊಂಡಿದ್ದರೂ ಅವೇನೂ ಅಷ್ಟು ಚಟುವಟಿಕೆಯಿಂದ ಚೆನ್ನಾಗಿ ಕೆಲಸ ನಡೆಸುತ್ತಿಲ್ಲ ....

ಅಧ್ಯಕ್ಷರು.—ಅದರ ವಿಷಯ ಈಗ ಹೇಳಬೇಕಾಗಿಲ್ಲ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಅವುಗಳ ಶಿಕ್ಷಣ ಸರಿಯಾಗಿ ನಡೆಯುತ್ತಿಲ್ಲ, ಅವಕ್ಕೆ ಖರ್ಚು ಮಾಡುವ ಹಣ ಸುವ್ಯವಸ್ಥಿತವಾಗಿ ವ್ಯಯವಾಗುತ್ತಿಲ್ಲವೆಂದು ಹೇಳಬೇಕಾಗಿದೆ. ಆದ್ದರಿಂದ ಸೇವಾದಳ ಶಿಕ್ಷಣವನ್ನು ರೂಢಿಗೆ ತರುವುದಕ್ಕಾಗಿ ತಲಬಿನಮೇಲೆ ಸೇವಾದಳ ಸಂಸ್ಥೆಯಲ್ಲಿ ಶಿಕ್ಷಿತರನ್ನು ನೇಮಿಸಿ ವಿದ್ಯಾರ್ಥಿಗಳಿಗೆ ಸರಿಯಾದ ಶಿಕ್ಷಣಾ ವ್ಯವಸ್ಥೆಯನ್ನು ಏರ್ಪಡಿಸುವುದು ಅಗತ್ಯ. ವಿದ್ಯಾ ಮಂತ್ರಿಗಳು ಈ ಕೂಡಲೆ ಇದಕ್ಕೆ ಗಮನ ಕೊಡಬೇಕೆಂದು ಹೇಳುತ್ತೇನೆ. ಸೇವಾದಳಗಳು ಹಳ್ಳಿಗಳ ಕಡೆ ಎಷ್ಟೋ ಮಟ್ಟಿನ ಸಮಾಜಸೇವೆಯನ್ನು ಮಾಡುತ್ತಿವೆ. ಇದರ ವಿಷಯದಲ್ಲಿ ಬಾಕಿ ಸದಸ್ಯರು ಅನೇಕ ತಪಶೀಲುಗಳನ್ನು ಕೊಟ್ಟಿದ್ದಾರೆ. ಸರ್ಕಾರದವರಿಗೂ ಅದು ಗೊತ್ತಿದೆ. ಈಗ ಸ್ಕೂಲುಗಳಿಗೆ ಬೇಸಗೆ ರಜಾ ಬಂದಿದೆ. ಈ ರಜಾ ಕಳೆದ ತಕ್ಷಣ ಪಾಠಶಾಲೆಗಳು ಪ್ರಾರಂಭವಾದ ಮೇಲೆ ಈ ಸೇವಾದಳ ಶಿಕ್ಷಣಕ್ಕೆ ಏರ್ಪಾಡು ಮಾಡಬೇಕೆಂದು ಕೋರುತ್ತೇನೆ.

Srimati RATNAMMA ISAAC (Kolar District—General).—Sir, I wish to speak about the Girl Guides Association also on this cut motion.

Mr. SPEAKER.—No, you cannot speak on this.

Srimati RATNAMMA ISAAC.—It is said in the cut motion, Bharat Seva Dal and other character-building institutions. This Girl Guides Association is also a character building institution. In our Mysore State, the Government were giving a liberal grant all these years for the Girl Guides Association activities. The Girl Guides Association instils in the minds of the girls from the age of 5 till they are 16 or 17, all characteristics that are to be found in a good girl. It teaches healthy and clean habits; it teaches them loyalty, truth and service. From this Association all differences of caste, colour and creed have been abolished. They have common cooking; they teach how to have balanced diet, they teach them how to take care of their babies. It is instilled in their minds to be helpful at all times, and do a good turn everyday. In our homes there are little girls who can sing sweet songs taught by the Girl Guides Association to entertain us or put babies to sleep. Seven thousand and five hundred rupees were allotted last year. This year I do not see anything for Girl Guides. Many of us who have got girls at home know what this Girl Guides Association is doing for them. By means of this cut motion, I am only trying to ask the Government to continue this

grant to this important institution if they cannot increase it. Sri Krishnappa referred to the other similar organisation "Scouts" lightly. But it is also an institution which is doing as much good to boys as this is doing to the young girls in the State and deserves the support of the Government.

*Janab MAHOMED VALIULLA.—The spirit of the cut motion appeals to me and that is why I want to speak on this. It says character building—not of any particular group—and that point appealed to me and that is why I have risen to support this cut motion. The spirit should be there and it should not be given up under any circumstances, come what may. It is the character of the person which is important in life. That is the principle that is mentioned in it. If that is so and continues to be so, I support this cut motion.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಅಧ್ಯಕ್ಷರೇ, ಈ ಠರಾವನ್ನು ಅನುಮೋದಿಸುತ್ತಾ ಒಂದೆರಡು ವಿಷಯಗಳನ್ನು ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. ಹಳ್ಳಿಗಳಲ್ಲಿ, ಹಳ್ಳಿ ಜನಾಂಗದಲ್ಲಿ ಅಜ್ಞಾನ, ಅಂಧಕಾರ ಹೋಗಲಾಡಿಸುವ ಬಗ್ಗೆ ಅಥವಾ ಅವರ ಆರ್ಥಿಕ ಸ್ಥಿತಿ ಉತ್ತಮಪಡಿಸುವ ಬಗ್ಗೆ ವಿದ್ಯೆ ಬಹಳ ಅವಶ್ಯಕ. ಎಲ್ಲರೂ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ಎಂದು ಒಂದಾನೊಂದು ಕಾಲದಲ್ಲಿ ಎಲ್ಲರೂ ಹೇಳಿದ್ದುಂಟು. ಅದು ಮಾಡಿದ ತರುವಾಯ ಈಚೆಗೆ ಅಲ್ಪಸ್ವಲ್ಪ ವಿದ್ಯಾವಂತರಾಗಿ, so-called educated ಎನ್ನಿಸಿಕೊಂಡು ಎಸ್.ಎಸ್.ಎಲ್.ಸಿ. ವರೆಗೆ ಓದಿ ಮುಂದಕ್ಕೆ ವ್ಯಾಸಂಗ ಮಾಡಲು ರಹ ಇಲ್ಲದೆ ಹಳ್ಳಿಗೆ ವಾಪಸ್ಸಾದವರು ಇಂದು ಹಳ್ಳಿಗಳಲ್ಲಿ ಮಾಡುತ್ತಿರುವುದನ್ನು ನೋಡಿದರೆ, ಆ ಮಕ್ಕಳ ತಾಯಿ ತಂದೆಗಳಿಗೆ ಇನ್ನು ಮುಂದೆ ನಿಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಕಳುಹಿಸಬೇಡಿ, ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಡಿ ಎಂದು ಬುದ್ಧಿ ಹೇಳುವ ಪ್ರಮೇಯ ಬಂದಂತೆ ನನಗೆ ತೋರಿತು.

ಏಕೆಂದರೆ, ಅವರು ಓದಿಕೊಂಡು ಹೋಗಿ ಹಳ್ಳಿಗಳಲ್ಲಿ ಮಾಡುತ್ತಿರುವ ಅಮಾನುಷ ಕೃತ್ಯಗಳನ್ನು ನೋಡಿ ಈ ರೀತಿ ಹೇಳಬೇಕಾಯಿತು. ನನ್ನ ಅನುಭವಕ್ಕೆ ಬಂದಂತೆ ವಿದ್ಯಾವಂತರೆನ್ನಿಸಿಕೊಂಡ ಕೆಲವರು ಹಳ್ಳಿಗೆ ಹೋಗಿ ಪಾರ್ಟಿ ಕಟ್ಟುವುದು, ವ್ಯಾಜ್ಯ ಹೂಡುವುದು, ತಿಳಿವಳಿಕೆಯಿಲ್ಲದವರನ್ನು ಕೋರ್ಟು ಕಛೇರಿಗೆ ಎಳೆದುಕೊಂಡು ಹೋಗುವುದು—ಈ ಕಾರ್ಯಗಳಲ್ಲಿ ತೊಡಗುತ್ತಿದ್ದಾರೆ. ಜೀವನ ನಡೆಸಿಕೊಳ್ಳುವುದಕ್ಕೆ ಅವಕಾಶವಿಲ್ಲದೆ ಈ ಮಾರ್ಗಗಳನ್ನು ಹುಡುಕುವುದಕ್ಕೆ ಅವಕಾಶವಾಗಿದೆ. ಮಾನ್ಯ ಮಿತ್ರರೊಬ್ಬರು ಸಿರಿಗೆರೆ ವಿಚಾರವನ್ನು ವಿವರಿಸಿದರು. ನಾನು ಅಲ್ಲಿಗೆ ಹೋಗಿದ್ದಾಗ ಇಷ್ಟು ವಿದ್ಯಾರ್ಥಿಗಳಿಗೆ ಸೌಕರ್ಯಗಳನ್ನು ಒದಗಿಸಿ ಅವರನ್ನು ಓದಿಸಿ ದೇಶಕ್ಕೆ ಬಹಳ ಅನಾನುಕೂಲ ಮಾಡುತ್ತಿರುತ್ತೀರೆಂದು ಸ್ವಾಮಿಗಳಿಗೆ ಹೇಳಿದೆ. ನನ್ನ ಅನುಭವದಲ್ಲಿ ಹಳ್ಳಿಗಾಡಿನಿಂದ ವಿದ್ಯಾರ್ಥಿಗಳು ಬಂದು ವಿದ್ಯೆ ಕಲತು ಪುನಃ ಹಳ್ಳಿಗೆ ಹೋಗಿ ಮಾಡುತ್ತಿರುವ ಕೃತ್ಯ ನೋಡಿ ಹಳ್ಳಿಯ ನೆಮ್ಮದಿ ಜೀವನಕ್ಕೇ ಅವರು ಅಡ್ಡಿಬರುವರೆಂಬ ನನ್ನ ಮನಸ್ಸಿನ ಶಂಕೆಯನ್ನು ಅವರ ಮುಂದಿಟ್ಟು ಇದರಿಂದ ದೇಶಕ್ಕೆ ದೊಡ್ಡ ಹಾನಿಯನ್ನುಂಟುಮಾಡುತ್ತೀರಿ ಎಂದು ಹೇಳಿದೆ. ನಂತರ ಅವರು ನನಗೆ ಹೇಳಿದರು, ಇಲ್ಲಿ ಬರೀ ವಿದ್ಯಾಭ್ಯಾಸದ ಶಿಕ್ಷಣ ಮಾತ್ರ ಕೊಡುತ್ತಿಲ್ಲ, ವಿದ್ಯಾರ್ಥಿಗಳ ನಡತೆ, ರೀತಿನೀತಿ, ಗುಣ ಮುಂತಾದ ಎಲ್ಲವನ್ನೂ ಮಾರ್ಪಾಡು ಮಾಡಲು ಅವಕಾಶವಿದೆ ಎಂದು. ಸೇವಾದಳದ ಏರ್ಪಾಡು ಮಾಡಿ ಅವರು ವ್ಯಾಯಾಮ ಶಿಕ್ಷಣ ಸಹ ಪಡೆಯುವುದಲ್ಲದೆ ಜೀವನದಲ್ಲಿ ಶಿಸ್ತನ್ನೂ ಸಹ ಕಲಿಯಲು ಏರ್ಪಾಡು ಮಾಡಿರುವುದಾಗಿ ತಿಳಿಸಿದರು. ಇನ್ನೊಂದು ಸಲ ನನ್ನನ್ನು ಅವರು ಆಹ್ವಾನಿಸಿದ್ದರು. ಆಗ ಹೋಗಿ ನೋಡಿ ಬಹಳ ತೃಪ್ತಿಪಟ್ಟೆ. ಇಷ್ಟೇ ಅಲ್ಲದೆ ಅಲ್ಲಿ ವಿದ್ಯಾಭ್ಯಾಸ ಮಾಡಿದವರ ಪೈಕಿ ಒಬ್ಬೊಬ್ಬರು ಎಸ್. ಎಸ್. ಎಲ್. ಸಿ. ವರೆಗೆ ಓದಿ, ಫೇಲ್‌ಡೆಯಾಗಿ ಮುಂದೆ ಓದುವುದಕ್ಕೆ ಅವಕಾಶವಿಲ್ಲದೆ ಸ್ಕೂಲು ಉಪಾಧ್ಯಾಯರಾಗಿದ್ದಾರೆ. ಅವರು ಮಾಡುವ ಕೆಲಸ ನೋಡಿದರೆ ದೇಶಕ್ಕೆ ಎಷ್ಟು ಮಟ್ಟಿನ ಸೇವೆ ಸಲ್ಲುತ್ತಿದೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾದ್ದೇ ಇಲ್ಲ. ಅಷ್ಟು ತೃಪ್ತಿಕರವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ತರೀಕೆರೆ ತಾಲ್ಲೂಕು ನೇರಳೇ ಕೆರೆಯಲ್ಲಿ ಸಿರಿಗೆರೆ ಹೈಸ್ಕೂಲಿನಲ್ಲಿ ಅಭ್ಯಾಸ ಮಾಡಿ ತರಪೇತಾದ ಒಬ್ಬ ಉಪಾಧ್ಯಾಯರು ಬಂದಿದ್ದಾರೆ. ಆತನು ಮಾಡುವ ಕೆಲಸ, ದೇಶಸೇವೆ, ಆತನ ಅನುಭವ ಅಮೋಘವಾಗಿದೆ. ಜಾತಿ ಮತ ಬೇಧವಿಲ್ಲದೆ, ಗ್ರಾಮದಲ್ಲಿರುವ ಪ್ರತಿಯೊಬ್ಬ ಸಾಮಾನ್ಯ ಪ್ರಜೆಗೂ ಬೇಕಾದವರಾಗಿ ಗಂಡುಮಕ್ಕಳಿಗೂ, ಹೆಣ್ಣು ಮಕ್ಕಳಿಗೂ ಪಾಠ ಹೇಳಿ ಕೊಡುವುದೂ ಅಲ್ಲದೆ, ಜನರ ನೈತಿಕ ಮಟ್ಟವನ್ನು ಏರಿಸುವುದಕ್ಕೂ ಪ್ರಯತ್ನ ಮಾಡುತ್ತಿದ್ದಾರೆ. ಇನ್ನೂ ಚಿಕ್ಕ ಹುಡುಗನಾದರೂ ಅಷ್ಟು ಶಕ್ತಿ ಆತನಿಗೆ ಹೇಗೆ ಬಂದಿತೆಂದು ಆಶ್ಚರ್ಯವಾಯಿತು. ಇದರ ಮೇಲೆ ತರಪೇತಾದ ಶಿಕ್ಷಣವೂ ಇದೆ. ಇಂಥಾದ್ದಕ್ಕೆ ಸರ್ಕಾರದವರು ಹೆಚ್ಚು ಉತ್ತೇಜನ ಕೊಡುವುದು ಆವಶ್ಯಕ. ಶ್ರೀ ಗುರುಲಿಂಗಯ್ಯನವರು ತಂದಿರುವ ಠರಾವು ಬಹಳ ಸೂಕ್ತವಾಗಿದೆ ಮತ್ತು ಅದು ಸಕಾಲದಲ್ಲಿ ಬಂದಿದೆ. ಅವರು ಕೇಳಿರುವುದು ಕೇವಲ ಒಂದು ಲಕ್ಷ ರೂಪಾಯಿಗಳು ಮಾತ್ರ. ಆದರೆ ನಾನು ಇನ್ನೂ ಹೆಚ್ಚು ಮೊಬಲಗನ್ನು ಕೇಳಬೇಕಾಗಿದೆ. ಹೀಗೆ ಕೇಳುವುದೂ ಅಲ್ಲದೆ, ಪ್ರತಿಯೊಂದು ಹೈಸ್ಕೂಲಿರುವ ಕಡೆಯಲ್ಲಿ, ಗ್ರಾಮಗಳಲ್ಲೂ ಮತ್ತು ಪಟ್ಟಣಗಳಲ್ಲೂ ಕ್ರಮೇಣ ಸರಿಯಾದ ರೀತಿಯಲ್ಲಿ ಸೇವಾದಳಗಳನ್ನು ಏರ್ಪಾಡು ಮಾಡಬೇಕು ಎಂದು ಸೂಚನೆ ಕೊಟ್ಟು ಈ ನಿರ್ಣಯಕ್ಕೆ ಬೆಂಬಲ ಕೊಡುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು—(ತುಮಕೂರು ಜಿಲ್ಲೆ).—ಸ್ವಾಮಿ, ಈಗ ದೇಶದಲ್ಲಿ ಜನಗಳಲ್ಲಿ ಒಂದೇ ರಾಷ್ಟ್ರ ಮನೋಭಾವನೆ ಬರಬೇಕಾದ್ದು ಅತ್ಯಾವಶ್ಯಕವಾಗಿದೆ. ಅಲ್ಲದೆ ಎಲ್ಲರಲ್ಲೂ ಶಿಸ್ತು ಮತ್ತು ನೈತಿಕ ಮಟ್ಟ ಸಂಪೂರ್ಣವಾಗಿ ಉತ್ತಮಗೊಳ್ಳಬೇಕಾದ್ದು ಅಗತ್ಯ. ಇದಕ್ಕೆ ಇಂಥ ಸೇವಾದಳಗಳು ಬಹಳ ಸಹಾಯಕವಾಗಿವೆ. ಆ ಅಭಿಪ್ರಾಯದಿಂದ ಈಗ ತಂದಿರುವ ನಿರ್ಣಯವನ್ನು ಅನುಮೋದಿಸುತ್ತೇನೆ. ಆದರೆ ಸರ್ಕಾರದವರೇ ನೇರವಾಗಿ ಇದನ್ನು ಮಾಡಿದರೆ ಇಂಥ ಸಂಸ್ಥೆಗಳಿಗೆ ಒಂದು ಭಿನ್ನಭಾವನೆಯಿಲ್ಲದೆ ನಡೆಯುವುದಕ್ಕೆ ಸಹಕಾರಿಯಾಗುತ್ತದೆ ಎಂದು ಸೂಚಿಸುತ್ತೇನೆ. ಇಂಥ ಸೇವಾ ಸಂಸ್ಥೆಗಳ ಮೂಲಕ ಹೆಚ್ಚಿನ ಸಹಾಯವಾಗುವುದರಿಂದ ಇವುಗಳಿಗೆ ಹೆಚ್ಚು ಪ್ರೋ

ತ್ಸಾಹ ಕೊಡಬೇಕು ಎಂದು ಶ್ರೀ ಲಿಂಗಾರೆಡ್ಡಿಯವರು ಹೇಳಿರುವುದನ್ನು ಸಮರ್ಥಿಸುತ್ತೇನೆ. ನಮ್ಮ ಮಿತ್ರರು ಹೇಳಿದಂತೆ ಸಿರಿಗೆರೆಯಲ್ಲಿ ಎಲ್ಲಾ ಕೋಮಿನ ವಿದ್ಯಾರ್ಥಿಗಳೂ ಕೂಡ ಸುಮಾರು 500 ಜನರಿದ್ದರೂ ಒಂದೇ ಕಡೆ ಊಟ ತಿಂಡಿ ಮಾಡಿಕೊಂಡು ಅಣ್ಣ ತಮ್ಮಂದಿರಂತಿದ್ದಾರೆ. ಇಂಥ ಸೇವಾ ಸಂಸ್ಥೆಗಳು ಇಷ್ಟು ಸೌಕರ್ಯ ಕೊಡುವಾಗ ಅವುಗಳ ಸಂಚಾಲಕರಿಗೆ ನೇರವಾಗಿದ್ದರೆ ಎಲ್ಲರಿಗೂ ತೃಪ್ತಿಯಿರುತ್ತದೆ. ಕೆಲವು ಕಾಲ ಅವು ನಡೆಯಬಹುದು. ಕೆಲವು ವೇಳೆ ಉತ್ಸಾಹವಿಲ್ಲದವರು ಅದನ್ನು ನಿಲ್ಲಿಸಬಹುದು. ಈಗಿನ ಸಂದರ್ಭದಲ್ಲಿ ಇನ್ನೂ ನಮ್ಮ ದೇಶದಲ್ಲಿ ರಾಷ್ಟ್ರೀಯ ಮನೋಭಾವನೆ ಚೆನ್ನಾಗಿ ಬೇರೂರಿಲ್ಲದೇ ಇರುವ ಕಾಲದಲ್ಲಿ ಸರ್ಕಾರದವರು ಸರಿಯಾದ ಏರ್ಪಾಡು ಮಾಡಬೇಕು. ಹಾಗೆ ಮಾಡಿದರೆ ಶಿಸ್ತು ಸಾಕಷ್ಟು ಬೆಳೆದು ಕೋಮುವಾರು ಭಾವನೆಯು ಅಳಿಸಿ ಹೋಗಲು ಅವಕಾಶವಾಗುವುದು. ಇಂಥ ಸಂಸ್ಥೆಗಳು ಪ್ರತಿಯೊಂದು ಕಡೆಯೂ ನೇರವಾಗಿ ಸರ್ಕಾರಿ ಸ್ಕೂಲು ವಿದ್ಯಾರ್ಥಿಗಳಿಗೆಲ್ಲಾ ಕಡ್ಡಾಯ ಮಾಡುವುದು ಆವಶ್ಯಕ. ಅದು ಬಿಟ್ಟು ಬೇರೆ ಸಂಸ್ಥೆಯಾದರೆ ಅದರಲ್ಲಿ ರಾಜಕೀಯ ಪಕ್ಷಕ್ಕೆ ಸಂಬಂಧವಿದೆಯೋ ಏನೋ ಎಂಬ ಸಂಶಯ ಬರುತ್ತದೆ. ಕೋಮುವಾರು ಭಾವನೆಗೂ, ರಾಜಕೀಯ ಭಾವನೆಗೂ ಎಡೆ ಕೊಡದಿರುವಂಥ ವಿದ್ಯಾಸಂಸ್ಥೆಗಳು ಏರ್ಪಾಡಾದರೆ ಬಹಳ ಚೆನ್ನಾಗಿರುತ್ತದೆ.

Janab MOHAMED HANIEEF.—Mr. Speaker, I wholeheartedly support the cut motion. I invite the Government to kindly provide unds for these activities. In the country there is great need for social srvices and for educating the people of the State in such a manner as to make them believe that they are citi-zens of the State. They must under stand the value of citizenship. In order that this may be achieved within a short space of time, it is absolutely necessary that there should be non-official institutions like the one envisaged in the cut motion. It serves two purposes: one is it gives opportunity to students and non-students to meet together and act together. It also secures for the country an institution for education by propaganda. Therefore it is necessary that such institutions should come into existence to supplement the Government institutions. From that point of view, it is necessary that we should encourage such institutions.

Sri T. SIDDALINGAIYA.—Mr. Speaker, the Government are aware of the activities of Seva Dal. On behalf of the Government I must submit that every one of us is personally interested in the education of the youth. Government have wa tchedthe activities of the Seva Dal in the Mysore State. Government are particularly happy and congratulate the Seva Dal workers on the golden opinions that they have received from every part of the House. (Cries of Hear, hear). The youths are the hope of the nation. They must be trained in national character, in discipline, in civic sense, and as such to-day the necessity for Seva Dal organization is undisputed. As my Hon'ble friend Sri L. Siddappa pointed out, the mover could have even asked for a larger demand. We have already provided more than what is asked for in the cut motion. (*A Voice: How much?*) There is one item under Education—Boy Scouts Organisation and Institutions of character building nature, the grant for which is Rs. 40,960. Another item is under Rural Development Scheme. Page 59 of Part II of the Budget for 1950-51, for which the grant is Rs. 1,25,000. That is Seva Dal, publicity, propaganda and scout, social service, games and other items of expenditure. There has been more provision than has been asked for in the cut motion itself. And the Government will be watching the Seva Dal work and will be sympathetic in every way in the activities of the organisation. I may also submit in this connection that the Father of the Seva Dal, the great nationalist Dr. N. S. Hardikar is giving every support to this organisation in Mysore State by taking special interest in its development. In view of these facts, I think I need not ask my friend to withdraw his cut motion.

The cut motion was, by leave of the Assembly, withdrawn.

Mr. SPEAKER.—Next cut motion No. 152. Sri Subba Rao.

Introduction of Basic Education Scheme in Mysore.

Mr. K. SUBBA RAO (Bangalore District—General).—Mr. Speaker, Sir, I beg to move:

"That the demand under the head '26. Education' for Rs. 2,83,06,000 be reduced by Rs. 100 (to urge upon the Government the necessity for introducing the Basic Education Scheme as envisaged by Mahatma Gandhi.)"

ಸ್ವಾಮಿ, ಈ ವಿಷಯದಲ್ಲಿ ನನಗೆ ಸಭೆಯ ಪೂರ್ಣ ಬೆಂಬಲ ದೊರೆಯುತ್ತದೆಂಬ ಭರವಸೆಯಿಂದ ನನ್ನ ಭಾಷಣವನ್ನು ಪ್ರಾರಂಭಮಾಡುತ್ತೇನೆ. ಸಾಮಾನ್ಯವಾಗಿ ಎಲ್ಲ ವಿಚಾರಗಳಲ್ಲಿಯೂ ಈಗ ರಾಷ್ಟ್ರಪಿತನ ಹೆಸರನ್ನು ಮುಂದೆ ತರುವುದು ದಿನಚರಿಯ ಕಾರ್ಯವಾಗಿದೆ. ಈಗಿನ ವಿದ್ಯಾಭ್ಯಾಸ ಕ್ರಮದಲ್ಲಿ ಲೋಪವಿದೆ, ದೋಷವಿದೆ, ಇದನ್ನು ನಮ್ಮ ದೇಶದ ಪರಿಸ್ಥಿತಿಗೆ ಅಳವಡಿಸಿಕೊಂಡು ಇಲ್ಲಿಗೆ ಸರಿಯಾದ ಶಿಕ್ಷಣ ಪದ್ಧತಿಯನ್ನು ಏರ್ಪಾಡು ಮಾಡುವವರೆಗೆ ನಮ್ಮ ದೇಶ ಏಳಿಗೆಗೆ ಬರುವುದಿಲ್ಲವೆಂಬುದನ್ನು ಪೂರ್ಣವಾಗಿ ಮನಗಂಡು, ವಿದ್ಯಾಭ್ಯಾಸದ ಪದ್ಧತಿಗೆ ಹೊಸ ರೂಪವನ್ನು ಕೊಡಬೇಕೆಂದು ಹೇಳಿ, ಇದಕ್ಕಾಗಿ ಬಹಳವಾಗಿ ಶ್ರಮಿಸಿದವರಲ್ಲಿ ಎಲ್ಲಕ್ಕಿಂತ ಹೆಚ್ಚಿನವರೆಂದರೆ ನಮ್ಮ ರಾಷ್ಟ್ರಪಿತರು. ಅವರ ಸಹಾಯ ಮತ್ತು ಸಲಹೆಗಳನ್ನು ತೆಗೆದುಕೊಂಡು ಇದಕ್ಕೆ ಒಂದು ದೊಡ್ಡ ಸಮಿತಿಯನ್ನು ಏರ್ಪಾಡು ಮಾಡಿ ಅದರಲ್ಲಿ ವಿದ್ಯಾ ಪರಿಣತರೂ, ದೊಡ್ಡ ದೊಡ್ಡ ವಿದ್ವಾಂಸರೂ ಇದ್ದು ಈ ಶಿಕ್ಷಣ ಪದ್ಧತಿಯನ್ನು ಬಹಳ ಕೂಲಂಕಷವಾಗಿ ಚರ್ಚೆಮಾಡಿ ದೇಶದ ಮುಂದಿಟ್ಟಿದ್ದಾರೆ. ಇದು ಉತ್ಕೃಷ್ಟವಾದ ಪದ್ಧತಿಯೆಂದು ಹೇಳಿದರೆ ನಿರ್ವಿವಾದವಾದುದು, ತಪ್ಪಲ್ಲ ಎಂದು ನನ್ನ ಭಾವನೆ. ಮಕ್ಕಳ ಮನಸ್ಸು ಮೇಣದ ಹಾಗೆ. ಹೀಗಿರುವಾಗ ಅವರಿಗೆ ಈ ಕಾಲದಲ್ಲಿ ಒಳ್ಳೆಯ ಅಭಿಪ್ರಾಯಗಳನ್ನು ಬೋಧಿಸಿ, ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡುವುದರಿಂದ ಅವರು ಬೆಳೆದು ದೊಡ್ಡವರಾದ ಕಾಲದಲ್ಲಿ ಬಾಲ್ಯದಲ್ಲಿ ಅವರ ಮನಸ್ಸಿನಲ್ಲಿದ್ದ ಒಳ್ಳೆಯ ಅಭಿಪ್ರಾಯಗಳು ಬೇರೂರಿ ಚೆನ್ನಾಗಿ ಬೆಳೆಯುವುದಕ್ಕೆ ಕಾರಣವಾಗುತ್ತದೆಂಬುದು ನಿರ್ವಿವಾದವಾದ ವಿಷಯ. ನಮ್ಮ ಸರ್ಕಾರದವರೂ ಕೂಡ ಈ ಶಿಕ್ಷಣ ಪದ್ಧತಿಯ ಮೇಲೆ ಸ್ವಲ್ಪ ಅಭಿಮಾನವನ್ನಿಟ್ಟಿದ್ದರೆಂದು ಹೇಳುತ್ತೇನೆ.

ಅಧ್ಯಕ್ಷರು.—ಇಟ್ಟು ಕೊಂಡಿದ್ದರೋ, ಇಟ್ಟು ಕೊಂಡಿದ್ದಾರೆಯೋ ?

ಶ್ರೀ ಕೆ. ಸುಬ್ಬರಾಯರು.—ಇಟ್ಟುಕೊಂಡಿದ್ದಾರೆಂದು ಹೇಳಲು ನನಗೆ ಧೈರ್ಯವಿಲ್ಲ, ಆದ್ದರಿಂದ ಇಟ್ಟುಕೊಂಡಿದ್ದರೆಂದು ಹೇಳುತ್ತೇನೆ.

ಕೆಲವು ಜನರನ್ನು, ವಾರ್ಧಾ ಶಿಕ್ಷಣ ಕ್ರಮವನ್ನು ತಿಳಿದುಕೊಂಡು ಬರಲು ಕೆಲವು ಕಾಲ ಕಳುಹಿಸಿದ್ದರೆಂದು ನನಗೆ ಖಚಿತವಾಗಿ ತಿಳಿದುಬಂದಿದೆ. ಆದರೆ ಅಲ್ಲಿಂದ ಹಿಂದಕ್ಕೆ ಬಂದವರು ನಮ್ಮ ದೇಶದಲ್ಲಿ ಆ ಪದ್ಧತಿಯನ್ನು ಪ್ರಾರಂಭಮಾಡುವುದಕ್ಕೆ ಸರ್ಕಾರದವರಿಂದ ಏನೂ ಪ್ರಯತ್ನ ನಡೆದಿಲ್ಲವೆಂದು ಹೇಳಬಹುದು. ಕೆಲವು ಖಾಸಗಿ ಸಂಸ್ಥೆಗಳು ಪೂರ್ತಿಯಾಗಿ ವಾರ್ಧಾ ಶಿಕ್ಷಣ ಪದ್ಧತಿಯನ್ನು ಅಂಗೀಕಾರ ಮಾಡಿಲ್ಲವಾದರೂ ಅದನ್ನು ಅನುಕರಿಸಿಕೊಂಡು ಒಂದು ವಿಧವಾದ ಶಿಕ್ಷಣ ಪದ್ಧತಿಯನ್ನು ಆಚರಣೆಗೆ ತಂದು ಕೆಲಸ ಮಾಡುತ್ತಿವೆ. ಇಂತಹ ವಿದ್ಯಾಭ್ಯಾಸಕ್ರಮವನ್ನು ಅನೇಕ ವಿದ್ವಾಂಸರೂ ಮಹಾಜನರೂ ಹೊಗಳಿದ್ದಾರೆ. ಆದರೂ ಮಾಡಬೇಕಾಗಿರುವ ಕೆಲಸದಲ್ಲಿ ಇದು ಬಹು ಕಡಿಮೆಯೆಂದು ಹೇಳಬೇಕಾಗಿದೆ.

ಸಾಮಾನ್ಯವಾಗಿ ನೂತನ ರಾಜ್ಯಾಂಗ ವ್ಯವಸ್ಥೆಯ ಪ್ರಕಾರ ದೇಶದಲ್ಲಿ ಪ್ರತಿಯೊಬ್ಬ ಬಾಲಕನಿಗೂ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣ ಕೊಡಬೇಕು. ಇದು ಹದಿನೈದು ವರ್ಷದಲ್ಲಿ ಪೂರೈಸಬೇಕು ಎಂದು ವಿಧಿ ಇದೆ. ಹೀಗೆ ಪೂರೈಸುವ ಕಾಲದಲ್ಲಿ ಹಳೆಯ ಮನೆಯನ್ನು ರಿಪೇರಿ ಮಾಡುವುದಕ್ಕೆ ಬದಲು ಹೊಸದಾಗಿಯೇ ನಿರ್ಮಿಸುವುದು ಉತ್ತಮವಲ್ಲವೆ ? ಹಾಗೆಯೇ ಹೊಸ ಪದ್ಧತಿಯನ್ನೇ ಪೂರ್ಣವಾಗಿ ಜಾರಿಗೆ ತರುವುದು ಒಳ್ಳೆಯದು. ಒತ್ತಾಯದ ಪ್ರಾಥಮಿಕ ವಿದ್ಯಾಭ್ಯಾಸ ಇನ್ನೂ ನಮ್ಮಲ್ಲಿ ಜಾರಿಗೆ ಬರದೇಯಿರುವಾಗ ಈಗಲೇ ಶಿಕ್ಷಣ ಕ್ರಮವನ್ನು ಸರಿಪಡಿಸಿಕೊಂಡು ಸಿದ್ಧತೆ ಮಾಡಿಕೊಳ್ಳದೇ ಇದ್ದರೆ ಆ ಗುರಿಯನ್ನು ಸಾಧಿಸುವುದಕ್ಕಾಗುವುದಿಲ್ಲವೆಂದು ಘಂಟಾಘೋಷವಾಗಿ ಹೇಳುತ್ತೇನೆ.

ಶಿಕ್ಷಣದ ಮುಖ್ಯ ತತ್ವವನ್ನು ಎಲ್ಲರೂ ಮನಗಂಡಿದ್ದಾರೆ. ಈ ವಾರ್ಧಾ ಪದ್ಧತಿ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ಇದರ ತತ್ವವೂ ಗೊತ್ತಿದ್ದೆಯಾದರೂ ಮುಖ್ಯವಾಗಿ ಅವರ ಗಮನವನ್ನು ಒಂದೆರಡು ಅಂಶಗಳ ಕಡೆಗೆ ಸೆಳೆಯಬೇಕಾಗಿದೆ. ಈ ಪದ್ಧತಿಯಲ್ಲಿ ಬಾಲ್ಯದಿಂದಲೂ ಕೂಡ ಮಕ್ಕಳ ಮನಸ್ಸಿನಲ್ಲಿ ದುಡಿಮೆಯಲ್ಲಿರುವ ಗೌರವ (diginity of labour) ವನ್ನು ಮನದಟ್ಟು ಮಾಡುವುದು. ಎರಡನೆಯದಾಗಿ, ಸಣ್ಣ ಕೈಗಾರಿಕೆಯನ್ನು ಅಭ್ಯಾಸ ಮಾಡುವಾಗಲೇ ಅದರ ಮೂಲಕವೇ ಭೂಗೋಳ, ಗಣಿತ, ವಿಜ್ಞಾನಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳೂ ಸುಗಮವಾಗಿ ಅವರಿಗೆ ಅರಿವಾಗುವುದರಿಂದ, ಮಕ್ಕಳಿಗೆ ಕೇವಲ ಓದುಬರಹವಲ್ಲದೆ ಅನೇಕ ರೀತಿಯ ಶಿಕ್ಷಣ ದೊರೆಯುವುದರಿಂದ ಇದು ಸರ್ವಸಮ್ಮತವಾದುದು ಮತ್ತು ಅವಶ್ಯಕವಾದುದು ಎಂದು ಎಲ್ಲರ ಅಭಿಪ್ರಾಯವಾಗಿದೆ. ಇದುವರೆಗೆ ನಮ್ಮ ಮುಂದೆ ಅನೇಕ ಪ್ರಶ್ನೆಗಳು ಚರ್ಚೆಯಾಗಿರುವ ಸಂದರ್ಭಗಳಲ್ಲಿ ನಮ್ಮಲ್ಲಿ ಪ್ರತ್ಯೇಕ ಮನೋಭಾವ ಹೋಗಬೇಕು, ಸಮಾಜದಲ್ಲಿರುವ ದೋಷಗಳು ಹೋಗಬೇಕು, ಬಡತನ ಹೋಗಬೇಕು ಎಂಬ ಅಭಿಪ್ರಾಯಗಳು ಪದೇ ಪದೇ ವ್ಯಕ್ತಪಟ್ಟಿವೆ. ಇದೆಲ್ಲ ಹೋಗಬೇಕಾದರೆ ಚಿಕ್ಕಂದಿನಿಂದಲೂ ಒಳ್ಳೆಯ ಶಿಕ್ಷಣದಿಂದ ಮನಸ್ಸು ರೂಪುಗೊಳ್ಳಬೇಕು. 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ' ಎಂದು ಹೇಳುವಂತೆ, ಎಳೆಯ ವಯಸ್ಸಿನಲ್ಲಿಯೇ ಸರಿಯಾದ ಮಾರ್ಗಕ್ಕೆ ತರಬೇಕು. ಮಾನ್ಯ ಸದಸ್ಯರೆಲ್ಲರ ಅನುಭವಕ್ಕೆ ಬಂದಿರುವ ವಿಷಯವೊಂದನ್ನು ಹೇಳುವುದಾದರೆ, ಈ ಹೊತ್ತಿಗೂ ಹಳ್ಳಿಗಳಲ್ಲಿ ನೋಡಿದರೆ ಸಣ್ಣ ವಯಸ್ಸಿನಿಂದ ಒಟ್ಟಿಗೆ ಕೆಲಸ ಮಾಡುವುದರಿಂದ ತಾನು ಕುಳಿತುಕೊಂಡಿದ್ದು ಮತ್ತೊಬ್ಬರ ದುಡಿಮೆಯಿಂದ ಬೆಳೆಯೋಣ ಎಂಬ ಮನೋಭಾವ ಅವರಲ್ಲಿ ಬಂದಿಲ್ಲ. ಯಾರು ಯಾವ ಜಾತಿಯವರೇ ಆಗಿರಲಿ, ಒಬ್ಬರನ್ನೊಬ್ಬರು ಅಣ್ಣತಮ್ಮಂದಿರ ಹಾಗೆ ನೋಡುವ ಅಭ್ಯಾಸ ಅವರಲ್ಲಿ ಬಂದಿದೆ. ಎಲ್ಲಿ ದುಡಿಮೆಯ ಕಷ್ಟದ ಅರಿವೇ ಇಲ್ಲವೋ, ಎಲ್ಲಿ ತಾನು ನೆಳಲನಲ್ಲಿ ಕುಳಿತು ಮತ್ತೊಬ್ಬರು ದುಡಿದು ಸಂಪಾದಿಸಿದುದನ್ನು ತಿನ್ನುವ ಅಭ್ಯಾಸವಾಗಿರುತ್ತದೆಯೋ ಅಲ್ಲಿ, ಸಮಾಜ ದ್ರೋಹ, ಪ್ರತ್ಯೇಕ ಮನೋಭಾವ ಮುಂತಾದ ದುರ್ಗುಣಗಳು ಬೆಳೆಯಲು ಅವಕಾಶವಿರುತ್ತದೆ. ಆದರೆ ಈ ವಾರ್ಧಾ ಶಿಕ್ಷಣ ಪದ್ಧತಿಯಲ್ಲಿ ದೋಷಗಳನ್ನು ಕಂಡುಹಿಡಿದು ಅವುಗಳ ನಿವಾರಣೆ ಮಾಡಲು ಅವಕಾಶವಿದೆಯಲ್ಲದೆ, ದುಡಿಮೆಗೆ ಹೆಚ್ಚಿನ ಗೌರವವನ್ನು ಕೊಡಲಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದಿದೆ, ಎಲ್ಲರಿಗೂ ಸರಿಯಾದ ಅವಕಾಶ ಸಿಕ್ಕಬೇಕು, ಎಲ್ಲರಲ್ಲಿಯೂ ರಾಷ್ಟ್ರೀಯ ಮನೋಭಾವ ಬೆಳೆಯಬೇಕು, ಒಳ್ಳೆಯ ಜೀವನದ ಮಾರ್ಗಗಳನ್ನೂ ಕಲಿಸಬೇಕು, ಭೇದಭಾವನೆ ಹೋಗಬೇಕು, ಒಳ್ಳೆಯ ಗುಣಗಳು ಬರಬೇಕು ಎಂಬ ಅಭಿಪ್ರಾಯವಿರುವಾಗ ಈಗ ಇಂತಹ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರದೇ ಹೋದರೆ ಇನ್ಯಾವಾಗ ತರುವುದು ಎಂದು ಕೇಳುತ್ತೇನೆ. ಇದನ್ನು ಕೂಡಲೇ ಜಾರಿಗೆ ತರಬೇಕು, ಇದಕ್ಕೆ ನಮ್ಮ ಸರ್ಕಾರದವರು ಗಮನ ಕೊಡಬೇಕಾದುದು ಅವಶ್ಯಕ. ಸಾಕಷ್ಟು ಉಪಾಧ್ಯಾಯರನ್ನು ತರಪೇತು ಮಾಡಿಕೊಳ್ಳಬೇಕು.

ಒಂದುಕಡೆ ಶಿಕ್ಷಣ ಕೊಡುತ್ತಾ ಹೋದರೆ ಇನ್ನೊಂದು ಕಡೆ ಮರೆಯುತ್ತಾ ಹೋಗುವುದು—ಹಾಗಾಗಬಾರದು. ಬಹು ಸಂಖ್ಯೆಯಲ್ಲಿ ಉಪಾಧ್ಯಾಯರನ್ನು ಮೊದಲು ತರಪೇತು ಮಾಡಬೇಕು. ಈಗ ಉತ್ತನಹಳ್ಳಿಯಲ್ಲಿ ಒಂದು ಶಿಕ್ಷಣ ಶಾಲೆಯನ್ನು ಪ್ರಾರಂಭಮಾಡಿದ್ದಾರೆ. ಅಲ್ಲಿಯೂ ಕೂಡ ಪೂರ್ಣವಾಗಿ ವಾರ್ಧಾ ಪದ್ಧತಿಯಲ್ಲಿ ಶಿಕ್ಷಣ ನಡೆಯುತ್ತಿಲ್ಲವೆಂದು ತಿಳಿದುಬಂದಿದೆ. ಏನೇ ಆಗಲಿ, ವಿದ್ವಾಂಸರಿಂದ ಕೂಡಿದ ಒಂದು ಸಮಿತಿಯನ್ನು ಮಾಡಿ, ಅವರು ನಮ್ಮ ದೇಶದ ಪರಿಸ್ಥಿತಿಗೆ ಹೇಗೆ ಯಾವ ಯಾವ ರೀತಿಯಲ್ಲಿ ಮಾಡಬೇಕು, ಇದಕ್ಕನುಕೂಲವಾದ ಕೈಗಾರಿಕೆ ಎಲ್ಲಿದೆ, ಹೇಗೆ ಮಾಡಿದರೆ ಸುಲಭವಾಗಿ ಮಕ್ಕಳ ಬುದ್ಧಿಯನ್ನು ರೂಪಿಸಬಹುದು, ಎಂಬುದನ್ನೆಲ್ಲಾ ಆ ಪ್ರವೀಣರು ಕಂಡಹಿಡಿದ ಮೇಲೆ ಅವರ ಸಲಹೆಯನ್ನು ತೆಗೆದುಕೊಂಡು ಅದಕ್ಕನುಗುಣವಾಗಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸಮಾಡಿದರೆ ಇದು ಸಾಧ್ಯವಾಗುತ್ತದೆ.

ಈ ಅಮೂಲ್ಯವಾದ ಸಹಾಯ ಸಿಕ್ಕಿದರೆ ಒಳ್ಳೆಯ ಭಾವನೆ ಮೂಡುತ್ತದೆ. ರಾಷ್ಟ್ರಕ್ಕೂ ಉತ್ತಮ ಸೇವೆಯಾಗತಕ್ಕ ಕಾರ್ಯ ಜರುಗುತ್ತದೆ. ಸರ್ಕಾರದವರು ಪ್ರಾಥಮಿಕ ಶಿಕ್ಷಣ ಪದ್ಧತಿಯನ್ನು ಕಡ್ಡಾಯವಾಗಿ ಜಾರಿಗೆ ತರಲು, ಮೂರು ಕ್ರಮ ಇದೆ. ಒಂದನೆಯದು, ಹಣ ಖರ್ಚು ಮಾಡುವುದು ಅಷ್ಟೇ ಸಾಲದು, ಶಾಲೆಗಳನ್ನು ಸ್ಥಾಪನೆ ಮಾಡಬೇಕು, ಉಪಾಧ್ಯಾಯಂಗೆ ತರಬಿಯತ್ತು ಕೊಡಬೇಕು. ಈಗಿರುವ ಕಾರ್ಯಕ್ರಮವನ್ನೇ ಮುಂದುವರಿಸುತ್ತೇವೆ ಎನ್ನುವುದರಲ್ಲಿ ಅರ್ಥವಿಲ್ಲ ಎಂಬ ವಿಷಯದಲ್ಲಿ ವಾದವಿವಾದಗಳಾಗಿ ಒಂದು ತೀರ್ಮಾನವಾಗಿದೆ. ಆದ್ದರಿಂದ ನಾನು ಆ ವಿಷಯವಾಗಿ ಹೆಚ್ಚು ವಾದಮಾಡದೆ ಇಷ್ಟು ಮಾತ್ರ ಹೇಳುತ್ತೇನೆ. ಸರ್ಕಾರದವರು ಒಂದು ವ್ಯವಸ್ಥೆಯನ್ನು ಜಾರಿಗೆ ತರುವಾಗ ಕೋಟ್ಯಾಂತರ ರೂಪಾಯಿಗಳು ಖರ್ಚಾಗತಕ್ಕ ಪರಿಸ್ಥಿತಿ ಬಂದೇ ಬರುತ್ತದೆ. ಆದರೆ ಅಷ್ಟು ಹಣವನ್ನು ಸರ್ಕಾರದವರು ವಿದ್ಯಾಭ್ಯಾಸಕ್ಕೆ ಒದಗಿಸುವುದಕ್ಕಾಗುವುದಿಲ್ಲ. ಈ ಪದ್ಧತಿಯಿಂದ ಈ ಖರ್ಚಿನ ಬಹುಭಾಗ ಹುಟ್ಟುವಳಿಯಾಗುತ್ತದೆ. ಆದ್ದರಿಂದ ಇಷ್ಟುಮಾತ್ರ ಹೇಳಬಲ್ಲೆ. ವಿದ್ಯಾಭ್ಯಾಸದಲ್ಲಿ ಒಂದು ಹೊಸ ಪದ್ಧತಿಯನ್ನು ಜಾರಿಗೆ ತರುವುದರಿಂದ ಎರಡು ಪ್ರಯೋಜನವಾಗುತ್ತದೆ. ಇದರಿಂದ ಜಟಿಲವಾದ ಕೋಮುವಾರು ಪ್ರಶ್ನೆ ಬಹಳ ಸುಲಭವಾಗಿ ಬಿಡಿಸುವುದಕ್ಕೆ ಅವಕಾಶವಿರುವುದರಿಂದ ಇದಕ್ಕೆ ಪೂರ್ಣ ಉತ್ತೇಜನ ಕೊಟ್ಟು, ಹಣ ಒದಗಿಸಿ, ಪ್ರೋತ್ಸಾಹ ಕೊಡಬೇಕೆಂದು ಹೇಳಿ ಈ ಖೋತಾ ನಿರ್ಣಯವನ್ನು ಸಭೆಯ ಮುಂದಿಟ್ಟಿದ್ದೇನೆ.

Mr. SPEAKER.—Cut motion moved:
"That the demand under the head '26 Education' for Rs. 2,83,06,000 be reduced by Rs. 100."

ಶ್ರೀ ಎಸ್. ಕರಿಯಪ್ಪನವರು (ಬೆಂಗಳೂರು ಜಿಲ್ಲೆ).—ರಾಷ್ಟ್ರೀಯ ಮೂಲಶಿಕ್ಷಣ ಪದ್ಧತಿಯನ್ನು ಮಹಾತ್ಮಾ ಗಾಂಧಿಜಿಯವರು ನಮಗೆ ಒಂದು ಮಹಾ ವರಪ್ರಸಾದದಂತೆ ಕೊಟ್ಟಿದ್ದಾರೆ. ಮಹಾತ್ಮಾ ಗಾಂಧಿಯವರು ಕೊಟ್ಟಿರತಕ್ಕ ವರಗಳಲ್ಲಿ ಇದು ಅತ್ಯಂತ ಶ್ರೇಷ್ಠವಾದದ್ದು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ದೇಶಕ್ಕೆ ಒಳ್ಳೆಯ ಪ್ರಜೆಗಳೇ ಒಂದು ಮಹಾ ಆಸ್ತಿ, ಇದ್ದಹಾಗೆ. ಕೇವಲ ರಾಷ್ಟ್ರೀಯ ಭಾವನೆಗಳಿಂದ ಕೂಡಿರುವ ಜನಾಂಗವಾಗಿ ನಮ್ಮ ದೇಶ ಮುಂದುವರಿಯಬೇಕು, ನಮ್ಮ ಸಮಾಜ ಮುಂದಕ್ಕೆ ಬರಬೇಕು, ನಾವೆಲ್ಲರೂ ಇತರ ಯಾವ ದೇಶಕ್ಕೇ ಆಗಲೀ, ಯಾವ ವಿಧದಲ್ಲೇ ಆಗಲೀ ಕಡಿಮೆಯಾಗಿರಬಾರದು ಎಂಬ ಭಾವನೆಯನ್ನು ಮಕ್ಕಳ ಮನಸ್ಸಿನಲ್ಲಿ ಆದಿಯಲ್ಲೇ ಉತ್ಪನ್ನ ಮಾಡತಕ್ಕ ವ್ಯವಸ್ಥೆ ನಮ್ಮ ದೇಶದಲ್ಲಿ ಇರಬೇಕು. ಅಂಥ ವ್ಯವಸ್ಥೆ ಮೂಲಶಿಕ್ಷಣ ಪದ್ಧತಿಯಲ್ಲಿ ಅಳವಡಿಸಲ್ಪಟ್ಟಿದೆಯೆಂದು ಹೇಳಬೇಕಾಗಿದೆ. ಸ್ವಾಮಿ, ಮಹಾತ್ಮಾ ಗಾಂಧಿಜಿಯವರು ಈ ಮೂಲಶಿಕ್ಷಣ ಪದ್ಧತಿಯನ್ನು ಆಚರಣೆಗೆ ತರಬೇಕೆಂದು ಉದ್ದೇಶಪಟ್ಟಿದ್ದಕ್ಕೆ ಕಾರಣವಿದೆ. 30 ಕೋಟಿ ಜನರಿರತಕ್ಕ ಈ ರಾಷ್ಟ್ರಕ್ಕೆ ಅತ್ಯಧಿಕವಾಗಿ ಹಣವನ್ನು ವೆಚ್ಚಮಾಡಿ ಬಾಲಕರನ್ನು ವಿದ್ಯಾವಂತರನ್ನಾಗಿ ಮಾಡುತ್ತೇವೆ ಎಂದರೆ ಅದು ಕಷ್ಟತಮವಾದ ಕೆಲಸ. ಈಗ ಕೇವಲ ಶೇಕಡ 12 ಮಂದಿ ವಿದ್ಯಾವಂತರಿರುವುದನ್ನು ಇತರ ರಾಷ್ಟ್ರಗಳಲ್ಲಿರುವಂತೆ ಶೇಕಡ 90 ಅಥವಾ 100ಕ್ಕೆ ಹೆಚ್ಚಿಸಬೇಕಾದರೆ ಅತ್ಯಧಿಕ ಹಣ ಬೇಕಾಗುತ್ತದೆ. ಆದಕಾರಣ ಅಷ್ಟೊಂದು ಹಣವನ್ನು ನಮ್ಮ ದೇಶದವರು ಖರ್ಚು ಮಾಡಬಲ್ಲರೇ ಅಥವಾ ಖರ್ಚು ಇಲ್ಲದೇ ರಾಷ್ಟ್ರೋದ್ಧಾರಕ್ಕೆ ಅನುಕೂಲವಾಗುವ ವಿದ್ಯಾಭ್ಯಾಸವನ್ನು ನಮ್ಮ ಮಕ್ಕಳಿಗೆ ಕೊಡುವುದಕ್ಕೆ ಅನುಕೂಲವಿದೆಯೇ ಎಂಬುದನ್ನು ಆಲೋಚನೆ ಮಾಡಿ ಅವರು ಮೂಲಶಿಕ್ಷಣ ಪದ್ಧತಿಯನ್ನು ಆಚರಣೆಗೆ ತರಬೇಕೆಂದು ಇಷ್ಟಪಟ್ಟರು. ಎರಡನೆಯದಾಗಿ, ಈಗಿರತಕ್ಕ ಶಾಲೆಗಳಲ್ಲಿ ಮಕ್ಕಳನ್ನು ಸರಿಯಾದ ರೀತಿಯಲ್ಲಿ ತರಪೇತು ಮಾಡುತ್ತಿಲ್ಲ. ಕೇವಲ ಓದುವುದು, ಬರೆಯುವುದು, ಲೆಕ್ಕ ಮಾಡುವುದು—ಇಷ್ಟನ್ನು ಮಾತ್ರ ವಿದ್ಯೆ ಎನ್ನಲಾಗದು. ಇದಕ್ಕೆ ತಕ್ಕವರನ್ನಾಗಿ ಮಾಡುವುದೇ ಅಲ್ಲ, ವಿದ್ಯಾರ್ಥಿಗಳನ್ನು ರಾಷ್ಟ್ರಭಾವನೆಯುಳ್ಳವರನ್ನಾಗಿ ತಯಾರು ಮಾಡಬೇಕು. ಓಟ್ಟು ಕೊಡುವುದಷ್ಟೇ ಅಲ್ಲದೇ ಅವರು ಉತ್ತಮ ಪೌರರಾಗಬೇಕು. ಉತ್ತಮ ಪೌರರನ್ನಾಗಿ ಮಾಡಬೇಕಾದ ಅವಶ್ಯಕತೆ ಇದೆ. ಆದಕಾರಣ ಈ ವ್ಯವಸ್ಥೆಯ ಮೂಲಕ ಉತ್ತಮ ಪ್ರಜೆಗಳನ್ನಾಗಿ ತಯಾರು ಮಾಡಬೇಕೆಂದು ಉದ್ದೇಶಪಟ್ಟಿದ್ದಾರೆ.

ಈ ಮೂಲಶಿಕ್ಷಣ ವ್ಯವಸ್ಥೆಯ ಕ್ರಮ ನಮಗೆ ಹೊಸದಾಗಿ ಕಾಣಬಹುದು. ಆದರೆ ಇದನ್ನು ಬಹಳ ಆದಿಯಿಂದಲೂ ಆಚರಣೆಗೆ ತಂದಿದ್ದಾರೆ. ಮಕ್ಕಳ ಬೆಳವಣಿಗೆಗೆ ಸಾಧಕವಾದ ವ್ಯವಸ್ಥೆ ಇದು. ಈ ವ್ಯವಸ್ಥೆಯ ಮೂಲಕ ಕೈಗಾರಿಕಾ ಶಿಕ್ಷಣ ಕೊಟ್ಟರೆ ಆ ಶಿಕ್ಷಣ ಅತ್ಯುತ್ತಮವಾದ ಶಿಕ್ಷಣವಾಗುತ್ತದೆ. ಆದಕಾರಣ ವಿದ್ಯಾಭ್ಯಾಸದಲ್ಲಿ ಅರಿತುನುರಿತು, ಅನುಭವ ಪಡೆದ ದೊಡ್ಡ ದೊಡ್ಡ ಮಹನೀಯರು ಈ ಪದ್ಧತಿಯ ಮೂಲಕ ಶಿಕ್ಷಣ ಕೊಡಬೇಕೆಂದು ಹೇಳಿದ್ದಾರೆ. ಇದು ಅವರು ಹೇಳಿರತಕ್ಕದ್ದಾದರೂ ಇದರ ವೈಶಿಷ್ಟ್ಯವೇನೆಂದರೆ, ಮಕ್ಕಳು ಓದಬೇಕು, ಓದುವಾಗ ಅದರ ಜೊತೆಗೆ ಯಾವುದಾದರೂ ಒಂದು ಕೈಗಾರಿಕೆಯನ್ನೂ ಕೂಡ ಮಾಡಬೇಕು ಎಂದು ಇದೆ. ಕೈಗಾರಿಕೆಯ ಜೊತೆಗೆ, ಚರಿತ್ರೆ, ಭೂಗೋಳ ಇತ್ಯಾದಿ ವಿಚಾರಗಳಲ್ಲೂ ಜ್ಞಾನವನ್ನು ಕೊಡುವುದಕ್ಕೆ ಸಾಧಕವಾಗಬೇಕೆಂದು ಮಹಾತ್ಮಾ ಗಾಂಧೀಜಿಯವರು ಹೇಳಿದ್ದಾರೆ. ಹಿಂದಿನವರು ಹೇಳಿರುವುದಕ್ಕೂ ಮಹಾತ್ಮಾ ಗಾಂಧೀಜಿಯವರು ಹೇಳಿರುವುದಕ್ಕೂ ಇದೇ ವ್ಯತ್ಯಾಸ. ಹೀಗೆ ಮಹಾತ್ಮಾ ಗಾಂಧೀಜಿಯವರು ಹೇಳಿರತಕ್ಕ ವಿದ್ಯಾಭ್ಯಾಸ ಕ್ರಮವನ್ನು ಹಲವಾರು ಕಡೆ ಆಚರಣೆಗೆ ತಂದಿದ್ದಾರೆ. ಅದರಲ್ಲೂ ಕೂಡ ಕಾಶ್ಮೀರದಲ್ಲಿ ರೇಷ್ಮೆಯನ್ನು ಮುಖ್ಯ ಕೈಗಾರಿಕೆಯನ್ನಾಗಿ ಮಾಡಿಕೊಂಡು ಅಲ್ಲಿರತಕ್ಕ ಶಾಲೆಗಳಲ್ಲಿ ಎಲ್ಲಾ ಉಪಾಧ್ಯಾಯರಿಗೂ

ಸಂಬಳ ಕೊಡುವಷ್ಟು ಹಣವನ್ನು ಸಂಪಾದಿಸಲು ಶಕ್ತರಾಗಿದ್ದಾರೆಂದು ಗೊತ್ತಾಗುತ್ತದೆ. ಹಾಗೆಯೇ ಮಧ್ಯಪ್ರಾಂತ್ಯ ಮತ್ತು ಸಂಯುಕ್ತ ಪ್ರಾಂತ್ಯಗಳಲ್ಲೂ ಕೂಡ ಈ ರೀತಿಯ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತಂದು ಪ್ರಯೋಗ ನಡೆಸಿ ಯಶಸ್ವಿಯಾಗಿದ್ದಾರೆ. ಆದಕಾರಣ ಈ ಉತ್ತಮವಾದ ಪದ್ಧತಿಯನ್ನು ಆಚರಣೆಗೆ ತರುವುದಾದರೆ ನಮ್ಮ ದೇಶಕ್ಕೆ ಬಹಳ ಹೆಚ್ಚು ಸಹಕಾರಿಯಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಈ ವಿದ್ಯಾಭ್ಯಾಸದಲ್ಲಿ ಇರತಕ್ಕ ಮತ್ತೊಂದು ಗುಣವೇನೆಂದರೆ, ವ್ಯಕ್ತಿಯ ಬೆಳವಣಿಗೆಗೆ ಸಾಧಕವಾದ ಯಾವ ವಿದ್ಯಾಭ್ಯಾಸಬೇಕೋ ಅದನ್ನು ಕೊಡಬಹುದು. ವ್ಯಕ್ತಿ ಬೇರೆ ಅಲ್ಲ, ಸಮಾಜ ಬೇರೆ ಅಲ್ಲ. ವ್ಯಕ್ತಿ ಮುಂದೆ ಬಂದರೆ, ಸಮಾಜ ಮುಂದಕ್ಕೆ ಬರುತ್ತದೆ. ಸಮಾಜ ಮುಂದಕ್ಕೆ ಬಂದರೆ ದೇಶ ಮುಂದಕ್ಕೆ ಬರುತ್ತದೆ. ಆದ್ದರಿಂದ ಶಾಲೆಗಳಲ್ಲಿ ಮೂಲಶಿಕ್ಷಣ ವ್ಯವಸ್ಥೆಯ ಪ್ರಕಾರ, ಯಾವ ಶಿಕ್ಷಣ ವ್ಯವಸ್ಥೆಯ ಪ್ರಕಾರ ಯಾವ ವಿದ್ಯಾರ್ಥಿಯು ವಿದ್ಯಾಭ್ಯಾಸವನ್ನು ಹೊಂದುತ್ತಾನೋ ಅವನಿಗೆ ಆವನ ಅದೃಷ್ಟ, ಅವನ ಆಗುಹೋಗು ಅವನ ಮೇಲೆ ಮಾತ್ರ ನಿಂತಿಲ್ಲ, ಸಮಾಜದ ಮೇಲೂ ನಿಂತಿದೆ. ಆದಕಾರಣ ಸಮಾಜದ ಋಣ ನನ್ನ ಮೇಲೆ ಬಹಳವಾಗಿದೆ ಎಂಬ ಭಾವನೆ ಬಂದೇಬರುತ್ತದೆ. ಆ ರೀತಿಯ ಭಾವನೆ ಮೊದಲಿನಿಂದಲೂ ಬೆಳೆಯುವುದಕ್ಕೆ ಅವಕಾಶವಿದೆ. ದೇಶದ ಏಳಿಗೆಗೆ ಸಹಾಯಕವಾಗತಕ್ಕ ಭವ್ಯಜನಾಂಗವನ್ನು ನಿರ್ಮಾಣ ಮಾಡತಕ್ಕ ಒಂದು ವಿದ್ಯಾಭ್ಯಾಸದ ಕ್ರಮವನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು. ದೇಶದ ಆಗುಹೋಗುಗಳನ್ನು ಗಮನಿಸಿ, ರಾಷ್ಟ್ರೋದ್ಧಾರ ಕಾರ್ಯ ಮಾಡತಕ್ಕ ಒಂದು ವಿದ್ಯಾರ್ಥಿಗಳ ತಂಡವನ್ನು ನಿರ್ಮಾಣ ಮಾಡಬೇಕಾದರೆ, ಹೊಸ ಜನಾಂಗವನ್ನು ನಿರ್ಮಾಣ ಮಾಡಬೇಕಾದರೆ ಈ ಮೂಲಶಿಕ್ಷಣ ಪದ್ಧತಿ ಬಹಳ ಅಮೂಲ್ಯವಾದುದು.

ಈಗ ಅಮೇರಿಕಾದಲ್ಲಿ ಇದನ್ನು ಮತ್ತೊಂದು ರೀತಿಯಲ್ಲಿ ಕೊಡುತ್ತಿದ್ದಾರೆ. ಮೊದಲು ಅವರಲ್ಲಿ ಕೆಲಸ ಮಾಡತಕ್ಕ ಮನೋಭಾವ ಬರುವಂತೆ ಮಾಡಬೇಕೆಂಬುದೇ ಅವರ ಮುಖ್ಯೋದ್ದೇಶ.

ಈಗ ರಷ್ಯಾ ದೇಶವನ್ನು ತೆಗೆದುಕೊಳ್ಳಿ. ಅಲ್ಲಿ ಮೊದಲು ಲೆನಿನ್ನನು ಏನು ಹೇಳಿದ್ದಾನೆಂದರೆ, "ನಮ್ಮ ದೇಶದ ಮಕ್ಕಳಿಗೆ ವೃತ್ತಿಶಿಕ್ಷಣವೇ ಅಂದರೆ ವೃತ್ತಿಗಳ ಮೂಲಕವೇ ಶಿಕ್ಷಣ ಕೊಟ್ಟರೆ ನಾವು ಬದುಕುತ್ತೇವೆ, ನಮ್ಮ ದೇಶವೂ ಮುಂದೆ ಬರುತ್ತೆ, ಇಲ್ಲವಾದರೆ ನಾವು ಬದುಕುವುದಕ್ಕಾಗುವುದಿಲ್ಲ" ಎಂದು. ಅದರಂತೆಯೇ ಒಂದು ಹುಕುಮನ್ನೂ ಹೊರಡಿಸಿ ಎಲ್ಲಾ ಕಡೆಗಳಲ್ಲಿಯೂ ಪ್ರತಿಯೊಂದು ಶಾಲಾ ಬಾಲಕರುಗಳಿಗೂ ಹತ್ತಿರವಿರುವಂಥ ಯಾವುದಾದರೂ ಒಂದು ಫ್ಯಾಕ್ಟರಿಗೆ ಕರೆದುಕೊಂಡು ಹೋಗಿ ಕೆಲಸ ಮಾಡತಕ್ಕ ಮನೋಭಾವವನ್ನು ಮೊದಲು ಅವರಿಗೆ ಉಂಟುಮಾಡಿ ನಂತರ ಅದರ ಶಿಕ್ಷಣವನ್ನು ಅವರಿಗೆ ಕೊಡಬೇಕೆಂದು ತಿಳಿಸಿದ್ದಾನೆ. ಆದರೆ ಹಾಗೆ ಹುಕುಂ ಹೊರಡಿಸಿದ ನಂತರ ಒಂದು ಸಂದರ್ಭದಲ್ಲಿ ಅಲ್ಲಿ ಹತ್ತಿರವಾಗಿದ್ದಂಥ ಯಾವ ಒಂದು ಫ್ಯಾಕ್ಟರಿಯೂ ಇರಲಿಲ್ಲವಾದ್ದರಿಂದ ಅಲ್ಲಿಯ ಉಪಾಧ್ಯಾಯರು ಹತ್ತಿರದಲ್ಲೇ ಇದ್ದ ಒಂದು ಕ್ಷೌರದ ಷಾಪಿಗೆ ಎಲ್ಲಾ ಬಾಲಕರನ್ನೂ, ಕರೆದುಕೊಂಡು ಹೋಗಿ ಅಲ್ಲಿ ಕೆಲಸಕ್ಕೆ ನೇಮಕ ಮಾಡಿದರಂತೆ. ಹೀಗೆ ರಷ್ಯಾ ದೇಶದ ಮೇಲ್ಮೆಗೆ ಅವರ ವೃತ್ತಿಶಿಕ್ಷಣವೇ ಮುಖ್ಯ ಕಾರಣ. ಈಗಲೂ ಸಹ ರಷ್ಯಾ ದೇಶದಲ್ಲಿ ಪ್ರತಿಯೊಂದು ಶಾಲೆಗಳಲ್ಲಿಯೂ ಕೆಲವು ಘಂಟೆಗಳ ಕಾಲ ಯಾವುದಾದರೂ ಒಂದು ಫ್ಯಾಕ್ಟರಿಯಲ್ಲಿ ಕೆಲಸ ಮಾಡಬೇಕೆಂದು ನಿಯಾಮಕ ಮಾಡಿದ್ದಾರೆ. ಅಲ್ಲಿನವರಿಗೆ ಟೆಕ್ನಿಕಲ್ ಮತ್ತು ಪಾಲಿಟೆಕ್ನಿಕಲ್ ಶಿಕ್ಷಣವನ್ನು ಕೊಡಲಾಗುತ್ತೆ. ರಷ್ಯಾ ಮತ್ತು ಅಮೇರಿಕಾ ದೇಶಗಳಲ್ಲಿರುವಂತೆ ಇನ್ನೂ ಕೆಲವು ಕಡೆ ಈ ರೀತಿಯ ಪದ್ಧತಿಯಿದೆ. ಇಟಲಿ ಮತ್ತು ಜರ್ಮನಿ ದೇಶಗಳಲ್ಲಿ ಕೂಡ ಅದೇ ರೀತಿಯ ಶಿಕ್ಷಣವಿದೆ. ಜರ್ಮನ್ ದೇಶಕ್ಕೆ ಸೇರಿರುವ ಒಂದು ದ್ವೀಪದಲ್ಲಿ ಈ ರೀತಿಯ ಶಿಕ್ಷಣ ಕೊಡುತ್ತಿದ್ದರು. ಇದು ಅಲ್ಲಿ ಬಹಳ ಯಶಸ್ವಿಯಾಗಿ ನಡೆದುಕೊಂಡು ಹೋಗುತ್ತಿತ್ತು. ಅಲ್ಲಿನ 96 ಬಾಲಕರೂ ಮತ್ತು 7 ಮಂದಿ ಉಪಾಧ್ಯಾಯರೂ ತಮ್ಮ ಜೀವನಕ್ಕೆ ಬೇಕಾದಷ್ಟನ್ನು ಉತ್ಪನ್ನಮಾಡಿಕೊಳ್ಳುತ್ತಿದ್ದರು. ಹೀಗೆ ಆದಿಯಿಂದಲೂ ಅವರಿಗೆ ಸ್ವಯಂಬುದ್ಧಿಯಿಂದ ಮತ್ತು ಸ್ವಯಂಶಕ್ತಿಯಿಂದ ಜೀವನ ಮಾ[illegible]ಕ್ಕಂಥ ಮಾರ್ಗದರ್ಶಕ ಶಿಕ್ಷಣವನ್ನು ನಾವು ಒದಗಿಸಬೇಕು.

ಆದರೆ ನಾವು ಈಗ ನಮ್ಮ ದೇಶದಲ್ಲಿ ಮೂಲಶಿಕ್ಷಣ ಪದ್ಧತಿಯನ್ನು ಆಚರಣೆಗೇ ತಂದಿಲ್ಲ. ನಮ್ಮಲ್ಲಿ ಒಂದು ಸರಿಯಾದ ಪದ್ಧತಿ ಇರುವುದಿಲ್ಲ. ಈ ಮೂಲಶಿಕ್ಷಣ ವೃತ್ತಿಯ ಪ್ರಸಾದವನ್ನು ನಮಗೆ 13 ವರ್ಷಗಳ ಹಿಂದೆಯೆ, ಅಂದರೆ ಸುಮಾರು 1937ರಲ್ಲೇ ಮಹಾತ್ಮ ಗಾಂಧೀಜಿಯವರು ದಯಪಾಲಿಸಿದ್ದಾರೆ. ಆದರೆ ಅದನ್ನು ಸರಿಯಾಗಿ ಆಚರಣೆಗೆ ತರಲು ಯಾವ ಕಾರ್ಯಕ್ರಮಗಳನ್ನೂ ಕೈಗೊಳ್ಳದಿರುವುದು ಬಹಳ ವಿಷಾದಕರವಾದ ಸಂಗತಿ. ಆದರೆ 1941ನೆಯ ಇಸವಿಯಲ್ಲಿ ಸ್ವಲ್ಪಮಟ್ಟಿಗೆ ಈ ಕಾರ್ಯದಲ್ಲಿ ಪ್ರಯತ್ನಪಡಲಾಗಿದೆ. ಒಂದು ಸಮಿತಿಯನ್ನು ನೇಮಕಮಾಡಿ ಆ ಸಮಿತಿಯವರ ಅಭಿಪ್ರಾಯ ಬಂದನಂತರ ನೋಡೋಣವೆಂದು ಅಲ್ಲಿಗೇ ಅದನ್ನು ಕೈಬಿಡಲಾಗಿದೆ.

ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು ಶಾಲೆಯಂತೆ ಮೊದಲು ಪ್ರಯೋಗಾರ್ಥವಾಗಿ ತೆರೆಯೋಣವೆಂದು ಅಭಿಪ್ರಾಯಪಟ್ಟರು. ಆದರೆ ಅದನ್ನೂ ಕೂಡ ಸರಿಯಾಗಿ ನಡೆಸಲಿಲ್ಲ, ಈಗಿರುವ ಕ್ರಮದಲ್ಲೇ ನಮ್ಮ ಶಾಲೆಗಳು ಮುಂದುವರಿದರೆ ನಮಗೆ ಖಂಡಿತವಾಗಿಯೂ ಅವುಗಳಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಅಲ್ಲದೆ ಇಂಥಾ ಪ್ರಯೋಗ ಶಾಲೆಗಳನ್ನು ತಾವು ಅಲ್ಲೊಂದು ಇಲ್ಲೊಂದು ತೆರೆದರೆ ಅದರಿಂದ ಆಗುವ ಪ್ರಯೋಜನಕ್ಕಿಂತ ತೊಂದರೆಯೇ ಹೆಚ್ಚಾಗುತ್ತದೆ. ಇದರಿಂದ ಒಬ್ಬರಿಗೊಬ್ಬರಿಗೆ ಪೈಪೋಟಿಯುಂಟಾಗಿ ಉಪಾಧ್ಯಾಯರೂ, ಹುಡುಗರೂ ಹೊಂದಿಕೊಂಡು ಹೋಗಲು ಅವಕಾಶವಿರುವುದಿಲ್ಲ. ಆದ್ದರಿಂದ ಆ ಪ್ರಯತ್ನವು ವಿಫಲವಾಗುತ್ತದೆ.

ಇದನ್ನು ಸೆಂಟ್ರಲ್‌ಪ್ರಾವಿನ್ಸಿನಲ್ಲಿ ನಡೆಸಲು ಪ್ರಯತ್ನಪಟ್ಟರು, ಪೈಪೋಟಿಯಿಂದ ಕಷ್ಟವಾಯಿತು. ತಾವು ಇಂಥಾ ವೃತ್ತಿಮೂಲಕ ಶಿಕ್ಷಣ ಒದಗಿಸುವ ವ್ಯವಸ್ಥೆಯನ್ನು ಪೂರ್ತಾ ತಾಲ್ಲೂಕಿನಲ್ಲಿಯೊ ಅಥವಾ ಒಂದೊಂದು ಹೋಬಳಿಯಲ್ಲಿಯೋ ಒದಗಿಸಿದರೆ ಬಹಳ ಅನುಕೂಲವಾಗುತ್ತದೆ. ಮಹಾತ್ಮ ಗಾಂಧಿಯವರ ತತ್ವಗಳ ಆಧಾರದ ಮೇಲೆ ಆಡಳಿತ ನಡೆಸುತ್ತಿದ್ದೇವೆಂದು ಭಾಷಣಗಳಲ್ಲಿ ಹೊಗಳಿಕೊಂಡರೆ ಏನೂ ಸಾರ್ಥಕವಾಗುವುದಿಲ್ಲ. ಹಿಂದಿದ್ದ ಆಡಳಿತವೂ ಇದನ್ನು ಕೈಬಿಟ್ಟಿತು. ತಾವು ಈ ವಿಚಾರದಲ್ಲಿ ಇಲ್ಲಿಯತನಕ ಏನನ್ನೂ ಮಾಡಿರುವುದಿಲ್ಲ. ಈ ಕಾರಣಗಳಿಂದ ನಾನು ಈ ಖೋತಾ ನಿರ್ಣಯವನ್ನು ಸಮರ್ಥಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಸ್ವಾಮಿ, ಈಗಿರತಕ್ಕ ವಿದ್ಯಾಭ್ಯಾಸದ ಕ್ರಮದಲ್ಲಿ ದೇಶಕ್ಕೆ ಯಾವ ಪ್ರಯೋಜನವೂ ದೊರೆಯುತ್ತಿಲ್ಲ. ಅತ್ತ ವಿದ್ಯಾವಂತರೆನಿಸಿಕೊಂಡವರಿಗೂ ಸಹಾಯವಾ

ಗುತ್ತಿಲ್ಲ. ಈ ವಿದ್ಯಾಭ್ಯಾಸ ಕ್ರಮವನ್ನು ಒಂದು ಸುವ್ಯವಸ್ಥೆಗೆ ತರಬೇಕಾದ್ದು ಅತ್ಯಗತ್ಯ. ಜನಗಳ ಆರ್ಥಿಕ ದೃಷ್ಟಿಯಿಂದಲೂ ಮತ್ತು ಅವರ ಜೀವನೋಪಾಯ ದೃಷ್ಟಿಯಿಂದಲೂ, ದೇಶದ ಸಂಪತ್ತನ್ನು ಹೆಚ್ಚಿಸಿಕೊಂಡು ಹೋಗುವ ದೃಷ್ಟಿಯಿಂದಲೂ ಇದನ್ನು ನಾವು ಗಮನಿಸಿ ನೋಡಿದರೆ ಈಗಿನ ವಿದ್ಯಾಭ್ಯಾಸ ಕ್ರಮವನ್ನು ಕೂಡಲೇ ಬದಲಾವಣೆ ಮಾಡುವುದು ಅತ್ಯಾವಶ್ಯಕ. ನಮ್ಮ ದೇಶದ 11 ಕೋಟಿ ಚಿಲ್ಲರೆ ಉತ್ಪತ್ತಿಯಲ್ಲಿ, 2½ ಅಥವಾ 3 ಕೋಟಿಗಳಷ್ಟು ರೂಪಾಯಿಗಳನ್ನು ತಾವು ಈಗ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುತ್ತಿದ್ದೀರಿ. ತಾವು ಹೀಗೆ ಇಷ್ಟು ಅಪಾರವಾದ ಹಣವನ್ನು ಖರ್ಚುಮಾಡುತ್ತಿರುವಾಗ ನಿಜವಾಗಿಯೂ ನಮ್ಮ ದೇಶದ ಪ್ರತಿಯೊಬ್ಬ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಎಷ್ಟು ಪ್ರಯೋಜನವಾಗಿರುತ್ತೆಂಬ ಅಂಶವನ್ನು ನಾವು ಬಹಳ ಕೂಲಂಕಷವಾಗಿ ಪರಿಶೀಲನೆ ಮಾಡಬೇಕಾಗಿದೆ.

ನಮ್ಮ ದೇಶದಲ್ಲಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವವರ ಸಂಖ್ಯೆ ಸುಮಾರು 10 ಸಾವಿರ, ಹೈಸ್ಕೂಲುಗಳಲ್ಲಿ ವ್ಯಾಸಂಗ ಮಾಡುತ್ತಿರುವವರ ಸಂಖ್ಯೆ 30 ಸಾವಿರ. ಮಾಧ್ಯಮಿಕ ಶಾಲೆಗಳಲ್ಲಿ ಒಂದು ಲಕ್ಷ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ವರ್ಷ ವರ್ಷವೂ ಹೀಗೆ ವ್ಯಾಸಂಗ ಮಾಡತಕ್ಕವರ ಪೈಕಿ 10–12 ಸಾವಿರ ಜನರು ವ್ಯಾಸಂಗ ಬಿಟ್ಟು ಪ್ರಾಪಂಚಿಕ ವ್ಯವಹಾರಕ್ಕೆ ಬರುತ್ತಿದ್ದಾರೆ. ಅವರಿಗೆ ಮುಂದೇನುಗತಿ, ಅವರು ಯಾವರೀತಿ ತಮ್ಮ ಜೀವನೋಪಾಯ ನಡೆಸಬೇಕು, ಅವರಿಗೆ ಜ್ಞಾನೋದಯ ಉಂಟಾಗಿದೆಯೇ, ಅವರಿಗೆ ಯಾವ ವಿದ್ಯೆಯಲ್ಲಿ ಟ್ರೈನಿಂಗ್‌ಕೊಡಲಾಗಿದೆ, ಎಂಬ ಇತ್ಯಾದಿ ಅನೇಕ ವಿಷಯಗಳನ್ನು ನಾವು ಆಲೋಚನೆ ಮಾಡಬೇಕಾಗಿದೆ. ಹಳ್ಳಿಗಳನ್ನು ಬಿಟ್ಟು ಪಟ್ಟಣಕ್ಕೆ ಬಂದು ನಿಂತಮೇಲೆ ಪುನಃ ಅವರು ಹಳ್ಳಿಗೆ ಬರಲು ಇಷ್ಟಪಡುವುದಿಲ್ಲ. ಪಟ್ಟಣದಲ್ಲಿ ಜೀವನಕ್ಕೆ ಮಾರ್ಗವಿರುವುದಿಲ್ಲ. ಆಗ ಅವರು ಸರ್ಕಾರಿ ನೌಕರಿಗಳಿಗೆ ಅಲೆದಾಡಲು ಪ್ರಾರಂಭಮಾಡುತ್ತಾರೆ. ಗ್ರಾಜ್ಯುಯೇಟ್‌ಗಳಾಗಿ ಕೇವಲ 30–40 ರೂಪಾಯಿಗಳಿಗೆ, ಗುಮಾಸ್ತೆಗಳಾಗಿ ಹೋಗುವುದು ತೀರಾ ಹೇಯವಾದುದು. ಆದುದರಿಂದ ಇಂಥಾ ಗ್ರಾಜ್ಯುಯೇಟುಗಳಿಗೆ ಕೆಲಸಕ್ಕೇ ಸೇರಿಸಿಕೊಳ್ಳಬಾರದೆಂದು ನಾನು ಹೇಳುತ್ತೇನೆ. ಅವರಿಗಿರತಕ್ಕ ವಿದ್ಯೆ ಮತ್ತು ಸಂಸ್ಕೃತಿಗಳಿಗೆ ಅವರು 30–40 ರೂಪಾಯಿಗಳನ್ನು ತೆಗೆದುಕೊಂಡು ತೃಪ್ತಿಕರವಾಗಿ ಕೆಲಸ ಮಾಡಲು ಹೇಗೆ ಸಾಧ್ಯವಿದೆ ? ಆದುದರಿಂದ ಇನ್ನು ಮುಂದಕ್ಕೆ ಗ್ರಾಜ್ಯುಯೇಟುಗಳಿಗೆ ಸ್ವತಂತ್ರವಾಗಿ ಜೀವನ ಕಲ್ಪಿಸಿಕೊಳ್ಳುವಂತೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ ಇತ್ತೀಚೆಗಾಗಲೆ ಇಂಥಾ ವಿದ್ಯಾವಂತರಿಗೆ ಸರ್ಕಾರಿ ನೌಕರಿಗಳೂ ಸಹ ದೊರೆಯದೆ ಅವರು ಅಂಗಡಿಗಳಲ್ಲಿ ಮತ್ತು ಬಸ್ ಆಫೀಸುಗಳಲ್ಲಿ ಗುಮಾಸ್ತೆ ಕೆಲಸಗಳಿಗೆ ಸೇರಿರುವಂಥ ನಿದರ್ಶನಗಳು ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿರುತ್ತವೆ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಒಬ್ಬ ಪದವೀಧರನು ಕೇವಲ 17 ರೂಪಾಯಿಗಳ ಸಂಬಳಕ್ಕೆ ಗುಮಾಸ್ತೆಯಾಗಿರುತ್ತಾನೆ. ಆದ್ದರಿಂದ ಇನ್ನು ಮುಂದಕ್ಕೆ ಈ ಪದವೀಧರರುಗಳಿಗೆ ತಿಂಗಳಿಗೆ 50–60 ಅಥವಾ 75 ರೂಪಾಯಿಗಳ ಸಂಪಾದನೆ ಕೂಡ ಸಿಕ್ಕುವುದು ಕಷ್ಟವಾಗುತ್ತದೆ. ಆದರೆ ಅವರು ಹೀಗೆ ಮೇಜಿನ ಹತ್ತಿರ ಕುಳಿತು ಕೆಲಸಮಾಡುವುದು ಒಂದು ಗೌರವವೆಂದು ಭಾವಿಸಿರುವಂತೆ ಕಾಣುತ್ತದೆ. ಇದು ಮೊದಲು ಹೋಗಬೇಕು. ಪ್ರತಿಯೊಬ್ಬ ವಿದ್ಯಾವಂತನಿಗೂ ಸರಿಯಾದ ತಿಳಿವಳಿಕೆ, ಜ್ಞಾನ ಬರುವಂಥ ವಿದ್ಯೆಯನ್ನು ನಾವು ಕೊಡಬೇಕಾಗಿದೆ. ಇಂಥಾ ನಿಜವಾದ ವಿದ್ಯೆ ಇವರಲ್ಲಿಲ್ಲದಿರುವುದರಿಂದ ಅವರು ಸರಿಯಾಗಿ ತಮ್ಮ ಜೀವನೋಪಾಯವನ್ನು ಕಲ್ಪಿಸಿಕೊಳ್ಳಲು ಅನೇಕವೇಳೆ ಸಾಧ್ಯವಾಗದೆ ಹೋಗಿ, ಸಮಾಜ, ದೇಶ, ದೇವರು ಎಲ್ಲವನ್ನೂ ಹಿಯ್ಯಾಳಿಸುವುದಕ್ಕೆ ಪ್ರಾರಂಭಿಸಿ ಕಡೆಗೆ ಸರ್ಕಾರವನ್ನೂ ದೂಷಿಸಲಿಕ್ಕೆ ಪ್ರಾರಂಭಮಾಡಿಬಿಡುತ್ತಾರೆ. ಇದರಿಂದ ಮುಖ್ಯವಾಗಿ ದೇಶಕ್ಕೆ ಹಾನಿ ಮತ್ತು ಸಮಾಜಕ್ಕೆ ಹಾನಿ. ದೇಶದ ಜನರಲ್ಲಿ ಒಂದು ಒಡಕನ್ನುಂಟುಮಾಡುವುದಕ್ಕೆ ಅವಕಾಶ ಕಲ್ಪಿಸತಕ್ಕದ್ದಕ್ಕೆ ಈ ನಿರುದ್ಯೋಗಿಗಳಾದ ವಿದ್ಯಾವಂತರೇ ಕಾರಣವೆಂದರೆ ಅದು ತಪ್ಪಾಗಲಾರದು.

ಹಿಟ್ಲರಿನ ಕಾಲದಲ್ಲಿ ವಿದ್ಯಾಭ್ಯಾಸಮಾಡುವ ಪ್ರತಿಯೊಬ್ಬನೂ 2 ವರ್ಷಕಾಲ manual labour ಮಾಡಲೇಬೇಕೆಂಬ ಕಡ್ಡಾಯವಾದ ಒಂದು ವಿಧಿಯನ್ನು ಜಾರಿಮಾಡಿದ್ದನಂತೆ. ಹಾಗೆ ವಿದ್ಯಾಭ್ಯಾಸ ಮಾಡುವ ಕಾಲದಲ್ಲಿ 2 ವರ್ಷ manual labour, 2 ವರ್ಷ ಮಿಲಿಟರಿ ಟ್ರೈನಿಂಗ್, ನಂತರ ಟೆಕ್ನಿಕಲ್ ಟ್ರೈನಿಂಗ್—ಹೀಗೆ ವಿಧಾಯಕ ಮಾಡಲಾಗಿತ್ತಂತೆ. I am not advocating facism. But we must evolve some system suitable to our country and to our culture. ಆದ್ದರಿಂದ ನಾನು ಹೇಳುವುದು ವಾರ್ಧಾ ವಿದ್ಯಾಭ್ಯಾಸ ಪದ್ಧತಿ ನಮ್ಮ ದೇಶದ ಪರಿಸ್ಥಿತಿಗೆ ಅನುಗುಣವಾಗಿದೆ. ಅದರಿಂದ ಹೆಚ್ಚಿನ ಪ್ರಯೋಜನ ನಮ್ಮ ದೇಶದ ವಿದ್ಯಾರ್ಥಿಗಳಿಗೆ ದೊರೆಯುತ್ತದೆಂಬುದರಲ್ಲಿ ಸಂದೇಹವಿಲ್ಲ. ವಿದ್ಯಾಭ್ಯಾಸದಲ್ಲಿ ಬಾಲ್ಯಾವಸ್ಥೆಯಲ್ಲೇ ಕೈಗಾರಿಕೆ ಮತ್ತು ವ್ಯವಸಾಯದ ವಿಚಾರದಲ್ಲಿ ಆಸಕ್ತಿ ಬರುವಂತೆ ಮಾಡಬೇಕು. ಈಗಿರತಕ್ಕ ಪರಿಸ್ಥಿತಿಯಲ್ಲಿ ನಮ್ಮ ದೇಶಕ್ಕೆ ಇದು ಅತ್ಯಾವಶ್ಯಕವೆಂದು ಹೇಳುತ್ತೇನೆ.

ಶ್ರೀ ಬಿ. ಎನ್. ಬೋರಣ್ಣಗೌಡರು (ಹಾಸನ ಜಿಲ್ಲೆ).—ಸ್ವಾಮಿ, ಸಾಧಾರಣವಾಗಿ 200–300 ವರ್ಷಗಳಿಂದ ಸಾಂಪ್ರದಾಯಕವಾಗಿ ಬೇರೆ ದೇಶದವರ, ಪರಕೀಯರ ಕೈವಶದಲ್ಲಿ ಇಂಡಿಯಾದೇಶ ಇತ್ತು. ಈಗ ಸ್ವಾತಂತ್ರ್ಯವನ್ನು ಹೊಂದಿದ್ದೇವೆ. ನಮ್ಮ ಜನಾಂಗ, ನಮ್ಮ ಪೀಳಿಗೆ, ಮುಂದೆ ಯಾವರೀತಿ ಇರಬೇಕು, ಅವರಿಗೆ ಜೀವನ ಹೇಗೆ ಕಲ್ಪಿಸಬೇಕೆಂಬುದು ನಮ್ಮ ಮುಂದಿರುವ ಪ್ರಶ್ನೆ. ಹಿಂದಿದ್ದಂಥ ಸರ್ಕಾರದವರು ನಮ್ಮನ್ನು ತೃಣೀಕರಿಸಿ ಅವರ ಸೇವೆಗಾಗಿ ನಮ್ಮನ್ನು ನೇಮಿಸಿಕೊಂಡಿದ್ದರೇ, ವಿನಾ, ನಮಗೆ ಸ್ವತಂತ್ರವಾಗಿರುವುದಕ್ಕೆ ಅವಕಾಶವೇ ಕೊಡಲಿಲ್ಲ. ಈಗಲಾದರೂ ನಾವು ಸ್ವಾತಂತ್ರ್ಯ ಹೊಂದಿರುವಾಗ ನಮ್ಮ ಮುಂದಿನ ಪೀಳಿಗೆಯನ್ನು ಯಾವರೀತಿ ತರಪೇತು ಮಾಡಬೇಕೆಂಬುದು ನಮಗಿರುವ ಮುಖ್ಯ ಪ್ರಶ್ನೆ. ಈಗ ಶಾಲೆಗಳಲ್ಲಿ ಕೊಡತಕ್ಕ ವಿದ್ಯಾಭ್ಯಾಸದಿಂದ ಏನೊಂದೂ ಪ್ರಯೋಜನವಾಗುತ್ತಿಲ್ಲ. ನಮ್ಮ ಬಾಲಕರಿಗೆ ವೃತ್ತಿಶಿಕ್ಷಣ ಕೊಟ್ಟ ಹೊರತು ಬೇರೆ ಮಾರ್ಗವಿಲ್ಲ. ಈಗಿನ ವಿದ್ಯಾಭ್ಯಾಸವೇನಿದ್ದರೂ ಕೇವಲ ಗುಮಾಸ್ತರನ್ನು, ಲೆಕ್ಕ ಪತ್ರಗಳನ್ನಿಡುವುದಕ್ಕೆ ಲಾಯಕ್ಕಾದವರನ್ನು ತರಪೇತು ಮಾಡುತ್ತಿದೆಯೇ ಹೊರತು ಸ್ವತಂತ್ರ ಜೀವನ ಮಾರ್ಗವಾದ ಯಾವುದನ್ನೂ ತೋರಿಸಿ ಕೊಡುತ್ತಿಲ್ಲ. ಎಲ್ಲಿ ಹೋಗಲಿ, ಅವರ ವಿದ್ಯಾಭ್ಯಾಸ ಕ್ರಮವನ್ನು ನೋಡಿದರೆ ಬೇಜಾರೂ ಅಸಹ್ಯವೂ ಆಗುತ್ತದೆ. ಯಾರನ್ನು ವಿಚಾರಿಸಿದರೂ ನಮಗೆ ಕೆಲಸಬೇಕು. ಜೀವನಕ್ಕೆ ಗತಿಯಿಲ್ಲ, ವೆಂದು ಹೇಳುವಂಥ ಪದವೀಧರರಿದ್ದಾರೆ. ಹಾಗಿಲ್ಲದೆ, ಇವರುಗಳಿಗೆ ವೃತ್ತಿಶಿಕ್ಷಣವಾಗಿದ್ದರೆ ಯಾವುದಾದರೂ

ಕೈಗಾರಿಕೆಯನ್ನು ಪ್ರಾರಂಭಿಸಿ ಅಲ್ಪಸ್ವಲ್ಪ ಸರ್ಕಾರದ ಸಹಾಯದಿಂದ ಜೀವನ ಜರುಗಿಸಿಕೊಂಡು ಹೋಗಲು ಅವಕಾಶವಿರುತ್ತಿತ್ತು. ಆದ್ದರಿಂದ ಸರ್ಕಾರದವರು ಒಂದೊಂದು ಕಡೆಯೂ ಒಂದೊಂದು ತೆರದ ವೃತ್ತಿಶಿಕ್ಷಣ ಶಾಲೆಯನ್ನು ತೆರೆದರೆ ಇಂಥ ಕಷ್ಟ ತಪ್ಪುತ್ತದೆ. ಅದರಲ್ಲೂ ವ್ಯವಸಾಯದ ವೃತ್ತಿಶಿಕ್ಷಣ ಶಾಲೆಯನ್ನೂ, ಕೈಗಾರಿಕಾ ಕಾರ್ಖಾನೆಗಳು ಹೆಚ್ಚಾಗಿರುವ ಜಿಲ್ಲೆಯಲ್ಲಿ ಕೈಗಾರಿಕಾ ಶಿಕ್ಷಣ ಶಾಲೆಗಳನ್ನೂ ತೆಗೆಯುವುದಕ್ಕೆ ಏರ್ಪಾಡುಮಾಡಬೇಕು. ನಮ್ಮ ದೇಶ ಮುಂದುವರಿಯುವುದಕ್ಕೆ ಅಡ್ಡಿ ಆತಂಕಗಳು ಅನೇಕವಿವೆ. ಈಗ ಇಂಥಾ ಶಾಲೆಗಳನ್ನು ತೆಗೆಯುವುದಕ್ಕೆ ದುಡ್ಡಿಲ್ಲದಿರುವುದು ನಿಜ. ಅಂದಮಾತ್ರಕ್ಕೇ ಮುಂದೆ ಮಾಡತಕ್ಕ ಕೆಲಸವೇನೆಂಬದನ್ನು ಯೋಚನೆಮಾಡಿ ಇಂದಿನಿಂದ ನಾವು ಮುಂದೆ ಮಾಡುವ ಕೆಲಸಕ್ಕೆ ಅಣಿಮಾಡುವುದು ಅವಶ್ಯಕ. ಈಗಾಗಲೇ ನಮ್ಮ ದೇಶದಲ್ಲಿ ವಿದ್ಯಾಪೀಠ, ಗಾಂಧೀ ವಿದ್ಯಾಲಯ—ಈರೀತಿಯಾಗಿ ಅನೇಕ ವೃತ್ತಿಶಿಕ್ಷಣ ಶಾಲೆಗಳು ನಡೆಯುತ್ತಿವೆ. ಅಂಥವುಗಳಿಗೆ ಗ್ರ್ಯಾಂಟ್ ಬೇಕಾದಷ್ಟು ಕೊಟ್ಟರೆ ಅವೇ ಮುಂದೆ ದೊಡ್ಡ ಕಾಲೇಜಾಗಿ ಪರಿಣಮಿಸಿ ದೇಶಾಭ್ಯುದಯಕ್ಕೆ ಸಹಾಯಕವಾಗುತ್ತವೆ. ಅನೇಕ ಜನರಿಗೆ ವೃತ್ತಿಶಿಕ್ಷಣ ದೊರೆಯುವುದಕ್ಕೂ ಅವಕಾಶವಾಗುತ್ತದೆ. ಆದ್ದರಿಂದ ಈಗಲಾದರೂ ದೇಶದ ಸಮಸ್ತ ಮಕ್ಕಳಿಗೂ ಜೀವನೋಪಾಯ ಮಾರ್ಗಗಳು ದೊರಕುವಂತೆ ತಕ್ಕ ಕಾರ್ಯಕ್ರಮ ಕೈಕೊಳ್ಳುವುದು ಅಗತ್ಯವೆಂದು ಹೇಳಿ ಸಭಾಸದಸ್ಯರೆಲ್ಲರೂ ಈ ಖೋತಾ ಸೂಚನೆಗೆ ಬೆಂಬಲ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Janab MOHAMED HANIEF.—The need of the hour is that our educational system must change. It must be capable of catering to the needs of the nation. This basic education scheme is to-day accepted universally. If you happen to go to any village, for instance I know in Mettupalyam, in Tinnavally District and in Madras, there are places where students sit together weaving lungees and at the same time commit into memory. They learn ; at the same time, they learn a craft. Similar is our experience in the case of those people who follow a profession in this country. If I happen to be a carpenter, I teach my son carpentry. If I am a hakim, my children will sit with me and begin to learn the names of drugs, the utility and the usefulness of drugs. The children sit with me for 14 or 15 years and become hakims. So also the children of the farmer in the field. They learn the seasons, they know what is the time to sow seeds, they know what kind of plough is to be used, and when their fields have got to be watered. They learn all these from their fathers. Now that system of education calls for a little change, namely, that the teaching of the 3 R's. must be added. They must know the 3 R's. With the help of craft it can easily be taught. It would be in consonance with our old traditions. The present system of training brings about changes in the educated boys. He must have tie, pants, and permitted to go to cinema and so on. To these their parents are not accustomed. When he tries to introduce all these changes, the father, the mother and the grandmother, they all say : "This is not our way of life, our way of thinking. Let us go back to our old system, the indigenous system and teach our boys craft and give them education". It is said on the authority of Dr. Zakir Hussein that the scheme will not be a drain upon the Exchequer of the country. Therefore it is very necessary that our Government should at least make bold and take this subject and effect this radical change in the elementary system of education. With these few words I support the cut motion.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಸ್ವಾಮಿ, ಈ ಮೂಲ ಶಿಕ್ಷಣ ವ್ಯವಸ್ಥೆ, ವಯಸ್ಕರ ಶಿಕ್ಷಣ ವ್ಯವಸ್ಥೆ ಇತ್ಯಾದಿ ವ್ಯವಸ್ಥೆಗಳನ್ನು ಸರ್ಕಾರದವರು ಆದಷ್ಟು ಬೇಗನೆ ಜಾರಿಗೆ ತಂದರೆ ನಮ್ಮ ಜನಾಂಗ ಅಭಿವೃದ್ಧಿಸ್ಥಿತಿಗೆ ಬರುತ್ತದೆಂದು ಮಹಾತ್ಮ ಗಾಂಧಿಯವರು ತಮ್ಮ ರಚನಾತ್ಮಕ ಕಾರ್ಯಕ್ರಮದಲ್ಲಿ ಹಾಕಿ ದಾರಿ ತೋರಿಸಿ ಕೊಟ್ಟಿದ್ದಾರೆ. ಅವರ ಈ ಶಿಕ್ಷಣ ಪದ್ಧತಿಯನ್ನು ವಾರ್ಧಾದಲ್ಲಿ ಅವರ ಪಟ್ಟ ಶಿಷ್ಯರು ಪರಿಶೋಧನೆ ನಡೆಸಿ ಅನೇಕ ಪ್ರಯೋಗಗಳನ್ನು ಅದರಂತೆ ಕೈಕೊಂಡರು. ಜನಾಂಗದಲ್ಲಿ ಅಭಿವೃದ್ಧಿ ಸಾಧನೆಯಿಲ್ಲದೆ ಇದ್ದರೆ ನಾವು ಏನಿದ್ದರೂ ಕಚೇರಿಗಳಲ್ಲಿ ಕೆಲಸ ಮಾಡತಕ್ಕ ಗುಮಾಸ್ತರನ್ನು ತರಪೇತು ಮಾಡಬಹುದೇ ಹೊರತು ನ್ಯಾಯವಾಗಿ ಉಪಯುಕ್ತವಾದ ಪೌರರನ್ನು ತಯಾರು ಮಾಡಲು ಸಾಧ್ಯವಿಲ್ಲವೆಂದು ಕಟ್ಟುನಿಟ್ಟಾಗಿ ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಆದಷ್ಟು ಜಾಗ್ರತೆ ಈ ಮೂಲ ಶಿಕ್ಷಣವನ್ನು ಜಾರಿಗೆ ತರುವುದು ಅತ್ಯಗತ್ಯ.

ಅದರಲ್ಲೂ ನಾವಾದರೂ, ಮೈಸೂರು ದೇಶದವರು, ಈ ಮೂಲ ಶಿಕ್ಷಣ ಪದ್ಧತಿಯನ್ನು ಒಂದು ನಿಮಿಷವಾದರೂ ಜಾರಿಗೆ ತರದೆ ನಿಧಾನ ಮಾಡುವುದು ಸಾಧುವಲ್ಲವೆಂದು ಹೇಳುತ್ತೇನೆ. ಆದ್ದರಿಂದ ಇದನ್ನು ಕೂಡಲೇ ಒಪ್ಪಿಕೊಂಡು ಅದಕ್ಕೆ ತಕ್ಕ ಏರ್ಪಾಡುಗಳನ್ನು ಕೈಕೊಳ್ಳಬೇಕೆಂದು ಹೇಳುತ್ತೇನೆ. ಈಗಾಗಲೇ ವಿದ್ಯಾಭ್ಯಾಸದ ಇಲಾಖೆಯವರಲ್ಲಿ ಕೆಲವರನ್ನು ವಾರ್ಧಾ ಮುಂತಾದ ಕಡೆ ಕಳುಹಿಸಿ ತರಪೇತು ಮಾಡುತ್ತಿದ್ದಾರೆ. ಅಲ್ಲದೆ ಈಚೀಚೆಗೆ ಮೂಲ ಶಿಕ್ಷಣ ಪದ್ಧತಿಯಲ್ಲಿ ಶಿಕ್ಷಣ ಕೊಡುವುದಕ್ಕೆ ಒಂದು ಕೇಂದ್ರವನ್ನು ಏರ್ಪಾಡು ಮಾಡಿ ಕೆಲವು ಜನ ಉಪಾಧ್ಯಾಯರಿಗೆ ಶಿಕ್ಷಣವನ್ನು ಕೂಡ ಕೊಡುತ್ತಿದ್ದಾರೆ.

ಈಗ ವಾರ್ಧಾ ಶಿಕ್ಷಣ ಪಡೆದು ಬಂದಿರುವ ಯಾವ ಉಪಾಧ್ಯಾಯರಿದ್ದಾರೋ ಅವರು ಆ ಕೆಲಸದಲ್ಲಿ ನಿರತ

ರಾಗಿರದೆ ಬೇರೆ ಕಡೆ ಎಲ್ಲೋ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಅವರಿಗೆ ಶಿಕ್ಷಣ ಕೊಟ್ಟರೂ ಏನೂ ಪ್ರಯೋಜನವಾಗಿಲ್ಲವೆಂದು ಕಾಣುತ್ತದೆ.

ಎರಡನೆಯದಾಗಿ, ಈಗ ಏನೋ ಒಂದು ಶಿಕ್ಷಣ ಕೊಡುವುದಕ್ಕೆ ಏರ್ಪಾಡು ಮಾಡಿದ್ದೀರಿ. ಆದರೆ ನಡೆಯುವ ಕೆಲಸವು ಬಹಳ ನಿಧಾನವಾಗಿದೆ. ತರಪೇತಾದ ಅಧಿಕಾರಿಗಳನ್ನು ಎಲ್ಲಿಯವರೆಗೆ ನೇಮಕ ಮಾಡುವುದಿಲ್ಲವೋ ಅಲ್ಲಿಯವರೆಗೆ ಇದರ ತತ್ವವೇನಿದೆಯೋ ಅದು ಸಂಪೂರ್ಣವಾಗಿ ಉಪಯೋಗವಾಗಲಾರದು. ಆ ದೃಷ್ಟಿಯಿಂದ ಕೇವಲ ನಮ್ಮ ಮೈಸೂರು ದೇಶದಲ್ಲಿ ಮೂಲ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರುತ್ತೇವೆಂದು ಹೇಳಿದರೆ ಸಾಲದು. ಅದು ಕೆಲವು ವರ್ಷಗಳಲ್ಲಿ ದೇಶಾದ್ಯಂತವೂ ಜಾರಿಗೆ ಬರಬೇಕು. ಇದಕ್ಕೆ ಸರಿಯಾದ ಯೋಚನೆ ತಯಾರುಮಾಡಿ ಕೊಡಬೇಕು ಎಂದು ಯೋಚನೆ ಮಾಡಿ ಈಗಿರುವ ಪದ್ಧತಿಯನ್ನು ತೆಗೆದು ಮೂಲ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರುವುದಕ್ಕೆ ಒಂದು ಕಟ್ಟುನಿಟ್ಟಾದ ಯೋಜನೆಯನ್ನು ಮಾಡಬೇಕೆಂದು ಸಲಹೆ ಮಾಡುವವನಾಗಿದ್ದೇನೆ.

ಈಗ ಮೂಲ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರುವುದಾದರೆ ಅದರಿಂದ ಮೊದಮೊದಲು ಸರ್ಕಾರಕ್ಕೆ ವಿಶೇಷ ಖರ್ಚಾಗುತ್ತದೆ. ಈಗೇನು ಖರ್ಚು ಮಾಡುತ್ತಿದ್ದೇವೋ ಬಹುಶಃ ಅದಕ್ಕೆ ಹತ್ತರಷ್ಟು ಒಟ್ಟಿನಲ್ಲಿ ಖರ್ಚು ಬೀಳುತ್ತದೆ. ಕ್ರಮೇಣ ಮಹಾತ್ಮ ಗಾಂಧಿಯವರು ಹೇಳಿರುವ ದೃಷ್ಟಿಯಿಂದ ಹಲವಾರು ವರ್ಷಗಳ ಮೇಲೆ ಅದಕ್ಕೆ ಏನೂ ಖರ್ಚಾಗುವುದಿಲ್ಲ. ಹಿಂದೆ ಏನು ಖರ್ಚು ಮಾಡಿತ್ತೋ ಅದೆಲ್ಲಾ ಸರ್ವೇ ಸಾಧಾರಣವಾಗಿ ಜನರ ಮೇಲೆ ಬೀಳುತ್ತದೆಯೇ ಹೊರತು, ಸರ್ಕಾರದ ಮೇಲೆ ಬೀಳುವುದಿಲ್ಲ. ಮೊದಮೊದಲು ಖರ್ಚು ಜಾಸ್ತಿಯಾದರೂ, ಒಂದು ವೃತ್ತಿಯನ್ನು ಮಾಡುವುದಕ್ಕೆ ಪ್ರಾರಂಭಿಸಬೇಕು. ಈಗಿನ ಸ್ಕೂಲು ಭಾಷೆ, ಸಲಕರಣೆ ಬಹುಶಃ ಮೂಲ ಶಿಕ್ಷಣ ಪದ್ಧತಿಗೆ ಹೊಂದುವುದಿಲ್ಲ, ಈಗ ನಮ್ಮ ದೇಶ ವ್ಯವಸಾಯದ ದೇಶ, ವ್ಯವಸಾಯದ ಮೂಲಕ ಮೂಲ ಶಿಕ್ಷಣ ಕೊಡಬೇಕಾಗುತ್ತದೆ. ಅಂದ ಮೇಲೆ ವ್ಯವಸಾಯಕ್ಕಾಗಿ ಬೇಕಾದರೆ 10 ಎಕರೆ ಜಮೀನು, ಸಾಗಿಗೆ ಬೇಕಾದ ಸಲಕರಣೆ, ಎತ್ತು, ಗಾಡಿ ಇತ್ಯಾದಿಗಳನ್ನೆಲ್ಲಾ ಕೊಡಬೇಕಾಗುವುದರಿಂದ ಮೊಟ್ಟ ಮೊದಲು ವಿಶೇಷ ಖರ್ಚು, ಕ್ರಮೇಣ ಅಲ್ಲಿ ಉತ್ಪತ್ತಿಯಾಗುವುದರಿಂದ ಸರ್ಕಾರಕ್ಕೆ ಏನೂ ಖರ್ಚು ಬೀಳುವುದಿಲ್ಲ. ಈ ದೃಷ್ಟಿಯಿಂದ ಖರ್ಚಿಗಾಗಿ ಹೆದರಿಕೊಂಡು ಮೂಲ ಶಿಕ್ಷಣ ಪದ್ಧತಿಯನ್ನು ಹಿಂದಕ್ಕೆ ಹಾಕಬಾರದು, ದೇಶದ ಹಿತದೃಷ್ಟಿಯಿಂದ ಅವಶ್ಯಕವಾಗಿ ಖರ್ಚು ಮಾಡುವುದಕ್ಕೆ ಹಿಂಜರಿಯಬಾರದು. ಹಣವಿಲ್ಲದಿದ್ದರೆ ಸಾಲವನ್ನಾದರೂ ಮಾಡಿ ಇಂಥ ದೊಡ್ಡ ಯೋಜನೆಯನ್ನು ಜಾರಿಗೆ ತರಬೇಕೆಂದು ಧೈರ್ಯ ಮಾಡಿದರೆ ಸರ್ಕಾರಕ್ಕೂ ಸಹಾಯವಾಗುತ್ತದೆ, ಅಭಿನಂದನೀಯವಾಗಿಯೂ ಇರುತ್ತದೆ. ಆದ್ದರಿಂದ ಬಹಳ ತ್ವರಿತವಾಗಿ ಮತ್ತು ಅಗತ್ಯವಾಗಿ ಕೆಲಸ ಮಾಡಬೇಕು. ಈ ದೃಷ್ಟಿಯಿಂದ ಯಾವ ಮೂಲ ಶಿಕ್ಷಣ ಪದ್ಧತಿಯನ್ನು ಸರ್ಕಾರದವರು ಒಪ್ಪಿದ್ದಾರೆಯೋ, ಈಗ ಏನು ಕಾರ್ಯಕ್ರಮವಿದೆಯೋ ಅದರಿಂದ ತೃಪ್ತಿಕರವಾಗಿರುವುದಕ್ಕಾಗುವುದಿಲ್ಲ. ಆದಷ್ಟು ಜಾಗ್ರತೆ ಕೆಲವು ವರ್ಷದಲ್ಲೇ ಸಂಸ್ಥಾನಾದ್ಯಂತ ಒಂದೇ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರುವ ದೃಷ್ಟಿಯಿಂದ ಏನು ಏರ್ಪಾಡನ್ನು ಮಾಡಬೇಕೋ ಅದನ್ನು ಮಾಡಿ, ಯಾವ ರೀತಿ ಉಪಾಧ್ಯಾಯರನ್ನು ತರಪೇತು ಮಾಡಬೇಕೋ ಆ ರೀತಿ ಮಾಡಿ, ಈಗಿರುವ ಸ್ಕೂಲುಗಳನ್ನು ಯಾವ ರೀತಿ ಬೇಕೋ ಆ ರೀತಿ ಮಾರ್ಪಡಿಸಿ, ವೃತ್ತಿ ಶಿಕ್ಷಣ ಕೊಡಲು ಏನು ಬದಲಾವಣೆ ಬೇಕೋ ಅದನ್ನು ಯೋಚನೆ ಮಾಡಿ ಸಾಮರ್ಥ್ಯದಿಂದ, ಧೈರ್ಯದಿಂದ ವರ್ತಿಸಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಮಾನ್ಯ ಅಧ್ಯಕ್ಷರೇ ಈ ಖೋತಾಸೂಚನೆಯು ಬಹಳ ಮುಖ್ಯವಾದುದು ನಿಜ. ಆದರೆ ನಮ್ಮಲ್ಲಿ ಎಷ್ಟು ಜನ ಮೂಲ ಶಿಕ್ಷಣ ಪದ್ಧತಿಯ ಅನುಕೂಲಗಳನ್ನು ತಿಳಿದುಕೊಂಡು ಧೈರ್ಯದಿಂದ ಮಾಡುವುದಕ್ಕೆ ಲಾಯಕ್ಕಾಗಿದ್ದಾರೆ ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕು. ನಮ್ಮ ದೇಶಕ್ಕೆ ಯಾವುದಾದರೂ ಒಂದು ಹೊಸ ಪದ್ಧತಿ ಬರಬೇಕಾದರೆ ಹೆಚ್ಚು ಖರ್ಚಿದೆ. ಈಗ ಪ್ರೈಮರಿ ವಿದ್ಯಾಭ್ಯಾಸ, ಮಿಡ್ಲ್ ಸ್ಕೂಲು ವಿದ್ಯಾಭ್ಯಾಸ, ಹೈಸ್ಕೂಲು ವಿದ್ಯಾಭ್ಯಾಸ, ಲಾಗಾಯ್ತಿನಿಂದಲೂ ಒಂದು ತರಹ ಇದೆ. ಕೆಲವು ಕಡೆ ಬೇಸಾಯದ ಶಿಕ್ಷಣವೂ ಇದೆ. ಬೇಸಿಕ್ ಎಜುಕೇಷನ್ ಕೆಲವು ವರ್ಷಗಳಿಂದ ಮೈಸೂರು ದೇಶದಲ್ಲಿ ಸೂಚಿತವಾಗುತ್ತದೆ. ಕೆಲವು ಉಪಾಧ್ಯಾಯರಿಗೆ ಶಿಕ್ಷಣ ಕೊಟ್ಟಿದ್ದಾರೆ. ಆದರೆ ಹಳೇ ಪದ್ಧತಿಗೂ ಹೊಸ ಪದ್ಧತಿಗೂ ಹೊಂದಿಕೊಂಡು ಹೋಗುವುದು ಕಷ್ಟವಾಗಿದೆ. ಮೂಲ ಶಿಕ್ಷಣದಿಂದ ಸಾರ್ವಜನಿಕರಿಗೆ ತೃಪ್ತಿಯಾಗುವ ಸಂಭವವಿದೆ, ಈ ವಿಚಾರದಲ್ಲಿ ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಸಲಹೆ ಮಾಡುತ್ತೇನೆ. ಈಗ ನಮ್ಮಲ್ಲಿ ಪ್ರೈಮರಿ ವಿದ್ಯಾಭ್ಯಾಸವನ್ನು ತೆಗೆದುಕೊಂಡರೆ ಅದು ಒಂದು ತರಹ ಆರ್ಟಿಫಿಷಿಯಲ್ ಆಗಿ ಬೆಳೆದಿದೆ. ಸಾಧಾರಣವಾಗಿ ಪ್ರೈಮರಿ ಸ್ಕೂಲುಗಳು ಹಳ್ಳಿಗಾಡಿನಲ್ಲೆಲ್ಲಾ ಇವೆ. ಅಲ್ಲಿ ಬೆಳಿಗ್ಯೆ ಮತ್ತು ಮಧ್ಯಾಹ್ನ ಈ ಎರಡು ವೇಳೆಯಲ್ಲೂ ಕ್ಲಾಸು ಮಾಡುತ್ತಿದ್ದಾರೆ. ಆದ್ದರಿಂದ ರೈತರ ಮಕ್ಕಳು ತಂದೆ ತಾಯಿಗಳಿಗೆ ಅವರ ಕೆಲಸದಲ್ಲಿ ಸಹಾಯಕರಾಗಲು ಅವಕಾಶವಿಲ್ಲ. They get out of touch with their parents' profession. ನಮ್ಮ ಹುಡುಗರಿಗೆ ಕನ್ನಡ ನಾಲ್ಕನೆಯ ತರಗತಿಯನ್ನು ಪ್ರವೇಶ ಮಾಡಿದ ಮೇಲೆ ಜಮೀನೆಂದರೆ ಒಂದು ರೀತಿಯ ಭಾವನೆ ಬಂದು ಬಿಡುತ್ತದೆ. ಅವರು ಸಗಣಿ ಕೊಪ್ಪೆಯನ್ನು ಕೈಲಿ ಮುಟ್ಟಬಾರದೆಂಬ ಭಾವನೆ ಹೊಂದುತ್ತಾರೆ. ದನಕರುಗಳನ್ನು ನೋಡಿಕೊಳ್ಳಬೇಕೆಂಬ ಭಾವನೆ ಇನ್ನೂ ದೂರವಾಗುತ್ತದೆ. ನಾವು ಈಗ ಅನುಸರಿಸಿರುವ ಪದ್ಧತಿ ಪ್ರಕಾರ ಜನಸಾಮಾನ್ಯರಲ್ಲಿ ವಿದ್ಯಾಭ್ಯಾಸ ಮಾಡಿದವರು ತಂದೆ ತಾಯಿಗಳಿಗೆ ವ್ಯವಸಾಯ ಮುಂತಾದ ಕಸಬಿನಲ್ಲಿ ಸಹಾಯಕರಾಗಿರುವುದು ಬಹು ಕಡಮೆ. ಈಗೇನೋ ಕೆಲವು ಸ್ಕೂಲುಗಳಲ್ಲಿ ವ್ಯವಸಾಯ ಶಿಕ್ಷಣ ಕೊಡುತ್ತಿದ್ದಾರೆ. ಆದರೆ ಅದು ಬಹಳ ಹಾಸ್ಯಾಸ್ಪದವಾಗಿದೆ. ಅಗ್ರಿಕಲ್ಚರಲ್ ಇನ್ಸ್‌ಪೆಕ್ಟರಿಗೇ ವ್ಯವಸಾಯದ ಕ್ರಮ ಸರಿಯಾಗಿ ಗೊತ್ತಿರುವುದಿಲ್ಲ. ಹಳ್ಳಿಗಳ ಕಡೆ ಮಿಡ್ಲ್ ಸ್ಕೂಲುಗಳಲ್ಲೂ ವ್ಯವಸಾಯದ ಶಿಕ್ಷಣ ಕೊಡುವ ಏರ್ಪಾಡಿದೆ. ಒಂದು ಕಡೆಯಿಂದ ಜಮೀನಿನ ಸಂಪರ್ಕವನ್ನು ತಪ್ಪಿಸಿ, ಇನ್ನೊಂದು ಕಡೆ ಬೇಸಾಯ ಕಲ್ಪಿಸುವುದು ಬಹಳವಾಗಿ ಆರ್ಟಿಫಿಷಿಯಲ್ ಆಗಿದೆ. ಇದರಿಂದ ರೈತರ ಮಕ್ಕಳು ಆ ತಂದೆ ತಾಯಿಗಳಿಗೆ ದನ ಸಾಕುವುದು ಅವರ ಕುರಿ ಸಾಕುವುದು, ಜಮೀನು ಸಾಗುಮಾಡುವುದು, ಕಳೆ ಕೀಳುವುದು, ನಾಟಿಹಾಕುವುದು ಮುಂತಾದ ವ್ಯವಸಾಯದ ಕಸಬುಗಳಲ್ಲಿ ಸಹಾಯಕರಾಗಲು ಸಹಾಯಕವಾಗಿಲ್ಲ. ವಿದ್ಯಾಭ್ಯಾಸ ಮಾಡಿ ವ್ಯವಸಾಯದ ಶಿಕ್ಷಣ ಪಡೆಯುವುದಾದರೂ ಏನೂ ಪ್ರಯೋಜನವಾಗಿಲ್ಲ. ಓದುತ್ತೇವೆಂದು ಮೂರು ನಾಲ್ಕು ವರ್ಷ ಅಕ್ಷರ ಕಲಿಯಲು ಅವಕಾಶವಿದೆಯೇ ಹೊರತು

ವ್ಯವಸಾಯಕ್ಕೆ ಅನುಕೂಲವಾಗಿಲ್ಲ. ಇದು ಹಾಸ್ಯಾಸ್ಪದವಾಗಿದೆ. ಮೂಲ ಶಿಕ್ಷಣದ ಪ್ರಕಾರ ವ್ಯವಸಾಯಗಾರನ ಕಸಬನ್ನೆಲ್ಲಾ ಕಲಿಯುವ ವಿದ್ಯೆ ದೊರೆಯಬೇಕು. ಇದು ಸುಲಭ ರೀತಿಯಲ್ಲಿರಬೇಕು. ಪ್ರೈಮರಿ ಸ್ಕೂಲುಗಳಲ್ಲಿ ಎರಡು ವೇಳೆ ತರಗತಿಗಳನ್ನು ಏಕೆ ನಡೆಸಬೇಕೋ ಕಾಣಲಿಲ್ಲ. ಇದನ್ನು ತಪ್ಪಿಸಿ ಬೆಳಗಿನ ವೇಳೆ ಮಾತ್ರ ಸ್ಕೂಲನ್ನು ಮಾಡಿ ಮಧ್ಯಾಹ್ನ ತಂದೆ ತಾಯಿಗಳ ಕೆಲಸದಲ್ಲಿ ಭಾಗ ವಹಿಸುವಂತೆ ಮಾಡಬೇಕು.

ಅಧ್ಯಕ್ಷರು.—ತಾವು ಮೂಲಶಿಕ್ಷಣ ಪದ್ಧತಿಯನ್ನು ಬಿಟ್ಟು ಬೇರೆ ಯೋಜನೆ ಹೇಳುವಹಾಗೆ ಕಾಣುತ್ತಿದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಈ ಖೋತಾ ಸೂಚನೆಗೆ ನನ್ನ ಬೆಂಬಲವಿದೆಯೆಂದು ತಾವು ತಿಳಿದುಕೊಳ್ಳಬೇಕಾಗಿಲ್ಲ. ಮೂಲ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದರೂ ನಮ್ಮ ದೇಶದ ಪರಿಸ್ಥಿತಿಗೆ ಅನುಗುಣವಾಗಿರಬೇಕು. ಪ್ರೈಮರಿ ಸ್ಕೂಲುಗಳನ್ನು ಪ್ರಾತಃಕಾಲ 7½ ಯಿಂದ 10½ಯವರೆಗೆ ಮಾಡಿದರೆ ಸಾಕು. ಬಾಕಿಯ ಕಾಲದಲ್ಲಿ ತಂದೆ ತಾಯ್ಗಳಿಗೆ ನೆರವಾಗಿ ಕೆಲಸ ಮಾಡಬೇಕು. ಉಪಾಧ್ಯಾಯರು ಬೇಕಾದರೆ ಜಮೀನಿಗೆ ಕರೆದುಕೊಂಡು ಹೋಗಿ ಅಲ್ಲಿ ಕೆಲಸ ಮಾಡಿಸಲಿ. ಅದು ಬಿಟ್ಟು ಮೂಲಶಿಕ್ಷಣ ತತ್ವವನ್ನು ಅನುಸರಿಸುತ್ತೇವೆಂದು ಮಾಡುವುದು ಸರಿಯಲ್ಲ. ಮುಖ್ಯವಾದ್ದನ್ನು ನಾವು ಮಾಡಿಲ್ಲ. ಬೆಳಗ್ಗೆ ಸ್ಕೂಲಿಗೆ ಹೋಗಿ ಬಂದು, ಮಧ್ಯಾಹ್ನ ದನಕರುಗಳನ್ನು ಮೇಯಿಸಿದರೆ ಅದರಲ್ಲಿ ತಪ್ಪಿಲ್ಲ. ಸರ್ಕಾರದವರು ಬೇಕಾದಹಾಗೆ ಮೂಲಶಿಕ್ಷಣ ಯೋಜನೆ ಹಾಕಬಹುದು. ಆದರೆ ಅದು ಜಾರಿಗೆ ಬರಬೇಕಾದರೆ ಅನೇಕ ವರ್ಷಗಳಾಗಬೇಕು. ಇದು ಹೊಸ ಯೋಜನೆಯಾದ್ದರಿಂದ ಇದರಲ್ಲಿ ನನಗೆ ಹೆಚ್ಚು ಪರಿಶ್ರಮವಿಲ್ಲ. ಸ್ಪಿನಿಂಗ್ ಮತ್ತು ವ್ಯವಸಾಯ ಈ ಎರಡು ವಿಚಾರಗಳನ್ನೂ ಯೋಚಿಸಿರಬಹುದು. ವಿದ್ಯಾಮಂತ್ರಿಗಳು ಯೋಚನೆ ಮಾಡಿ ಸ್ಕೂಲುಗಳಲ್ಲಿ ಈಗಿನಂತೆ ಹೆಚ್ಚುಕಾಲ ಕಳೆಯುವುದು ಸರಿಯೆ ಎಂದು ಪರಿಶೀಲಿಸಿ, ತಂದೆತಾಯಿಗಳಿಗೆ ವಿದ್ಯಾರ್ಥಿಗಳು ಸಹಾಯವನ್ನೇಕೆ ಮಾಡಕೂಡದೆಂಬ ಅಂಶವನ್ನು ವಿಮರ್ಶೆ ಮಾಡಬೇಕು. ಮೂಲಶಿಕ್ಷಣ ಪದ್ಧತಿಗೆ ಸರಿಯಾದ ಅನುಕೂಲವಿದ್ದ ಹೊರತು ಹೆಚ್ಚು ಹಣ ಖರ್ಚು ಮಾಡುವುದು ಸರಿಯಲ್ಲ. ಅದು ಒಳ್ಳೆಯದಲ್ಲವೆಂದು ಹೇಳುವುದಿಲ್ಲ. ಆದರೆ ಇದು ಹೊಸ ಪ್ರಯೋಗ. ನಿಧಾನವಾಗಿ ನಡೆಯಬೇಕು. ಏಕ್‌ದಂ ಮಾಡುವುದು ಸರಿಯಲ್ಲ ಎಂದು ಕಾಣುತ್ತದೆ.

Sri M. GOVINDA REDDY.—Sir, I want to submit one or two points for consideration. Basic education has been conceived on the principle of teaching through craft and teaching according to basic education is a a highly technical affair. Basic education does not mean merely giving a vocational bias to education. It means teaching every subject through some craft. Take for instance spinning. It is in the act of spinning we have to teach all about cotton—how it is grown, its history and the mathematics of it. Everthing must be taught through craft and it is a very highly technical affair. I was myself in Wardha studying this system for a while and even there except two teachers there was no other competent teacher. So, it is a very technical affair and I want to submit to Government that they should proceed with caution in this matter. The Madras Government have taken up this basic education scheme on a very wide scale without going into the matter very deeply; without weighing the pros and cons they have taken up the scheme. After introducing basic education schools on a very large scale now they are feeling the difficulty. I know it very well. They cannot get enough teachers. They have got teachers for 22 schools only and they have just started this year 16 training institutions and even for training, teachers do not come in because the prospects are not very good for teachers taking this training. Teachers in general schools get higher salaries and even if some teachers take this training they are not certain of their future prospects. Uttanahalli camp where our Government have tried an experiment, is not quite a success in the sense that the teachers who come out of the institution are not capable of handling classes according to the Wardha system of basic education. There is another difficulty. There are no text-books. Even in Wardha where it was originated, they have no text-books for all the subjects. There was only one text-book for spinning. They were trying to have a text-book on agriculture. They are trying to frame text-books for three more subjects. This year they must have completed that work and they may be having these text books. Even they were feeling the want of text-books to introduce basic education on a nation-wide scale or a country-wide scale. It is not possible to get text-books. It is not possible to get enough teachers competent to undertake the work. These are all difficulties which I want the Hon'ble Minister to consider.

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸ್ವಾಮಿ, ಈ ವಿಚಾರದಲ್ಲಿ ಸರ್ಕಾರದವರು ಮೊದಲಿನಿಂದಲೂ ಬಹಳ ಉತ್ಸಾಹವನ್ನೇ ತೋರಿಸುತ್ತಿದ್ದಾರೆ. ಒಂದು ಯೋಜನೆಯನ್ನು ಮಾಡಿ, ಉತ್ತನಹಳ್ಳಿಯಲ್ಲಿ ವರ್ಷವರ್ಷವೂ 100 ಜನರನ್ನು ಶಿಕ್ಷಣ ಮಾಡಬೇಕೆಂದು ಏರ್ಪಾಡಾಗಿದೆ. ಹಿಂದೆ ಶಿಕ್ಷಣ ಪಡೆದು

ತಯಾರಾಗಿರುವ 72 ಜನ ಉಪಾಧ್ಯಾಯರು ನಮ್ಮ ಸಂಸ್ಥಾನದ ನಾನಾ ಕಡೆಗಳಲ್ಲಿ ಮೂಲಶಿಕ್ಷಣ ಪದ್ಧತಿಯ ಪ್ರಕಾರ ಶಿಕ್ಷಣ ಹೇಳಿಕೊಡುತ್ತಿದ್ದಾರೆ. ಆದರೆ ಸರ್ಕಾರದವರು ಇಷ್ಟಕ್ಕೇ ತೃಪ್ತಿಪಟ್ಟಿದ್ದಾರೆಂದು ತಿಳಿದುಕೊಳ್ಳಬಾರದು. ಮೂಲ ಶಿಕ್ಷಣವನ್ನು ಹೇಳಿಕೊಡಲು ಶಿಕ್ಷಣ ಪಡೆಯುತ್ತಿದ್ದಾರೆ. ಈ ಶಿಕ್ಷಣವೆಂದರೆ ಬರಿಯ mechanical ಎಂದು ಅಭಿಪ್ರಾಯಪಡಬಾರದು. ಮಹಾತ್ಮಾ ಗಾಂಧಿಯವರು ಈ ಮೂಲ ಶಿಕ್ಷಣವನ್ನು ಯಾವ ಉದ್ದೇಶದಿಂದ ಮಾಡಿದರೋ ಆ spirit ಈ ಶಿಕ್ಷಣದಿಂದ ಬರುತ್ತದೆಯೇ ಎಂಬ ಸಂದೇಹವಿತ್ತು. ಇದನ್ನೂ ಗಮನದಲ್ಲಿಟ್ಟುಕೊಂಡು ಇದನ್ನು ಸ್ವಲ್ಪ ಮಟ್ಟಿಗೆ ಪುನರ್ವ್ಯವಸ್ಥೆ ಮಾಡಬೇಕೆಂದು ಯೋಚಿಸಿ ಈ ಕಾರ್ಯಕ್ಕೆ ಡಾ॥ ರೆಡ್ಡಿಯವರನ್ನು ಗೊತ್ತುಮಾಡಲಾಯಿತು. ಅವರು ಪರಿಶೀಲನೆ ಮಾಡಿ ಒಂದು ವರದಿಯನ್ನು ತಯಾರುಮಾಡಿದ್ದಾರೆ. ಒಂದೊಂದು ಘಟ್ಟದ ವಿದ್ಯಾಭ್ಯಾಸ ಮುಗಿದರೆ ಹುಡುಗರು ಯಾವುದಾದರೂ ಕೈಗಾರಿಕೆಯ ಮೂಲಕ ತಮ್ಮ ಜೀವನ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ಒಂದು ಕಸಬಿನಲ್ಲಿ ಅವರು ತಯಾರಾಗಬೇಕೆಂಬ ಉದ್ದೇಶದಿಂದ ಶಿಕ್ಷಣ ಕೊಡಬೇಕೆಂದು ಅವರು ತಮ್ಮ ಕೆಲಸಕ್ಕೆ ತೊಡಗಿದರು. ಈ ದೃಷ್ಟಿಯಿಂದ ಮಾನ್ಯ ಸ್ನೇಹಿತರು ಕೊಟ್ಟಿರತಕ್ಕ ಕೆಲವು ಅಮೋಘವಾದ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದುವರಿಯುತ್ತೇವೆ. ಶ್ರೀಮಾನ್ ಗುಂಡಪ್ಪಗೌಡರು ಹೇಳಿದುದು ಆಗಬೇಕಾದರೆ ಬಹಳ ಕಾಲ ಹಿಡಿಯಬಹುದು. ಮೊದಲಿನಿಂದಲೇ ಹುಡುಗರಿಗೆ ತಮ್ಮ ಕಸಬನ್ನು ಮಾಡಬೇಕೆಂಬ ಬುದ್ಧಿ ಬರುವ ಹಾಗೆ ಮಾಡಬಹುದೆಂದು ಹೇಳಿದ್ದಾರೆ. ಇದಕ್ಕೆ ಬೆಳಿಗ್ಗೆ ಸ್ಕೂಲುಗಳನ್ನು ಮಾಡಿ, ತಮ್ಮ ತಂದೆತಾಯಿಗಳ ಜೊತೆಯಲ್ಲಿ ಹುಡುಗರು ಕೆಲಸ ಮಾಡುವುದಕ್ಕೆ ಅವಕಾಶವಾಗುವ ಹಾಗೆ ಮಾಡುವುದು ಒಳ್ಳೆಯದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದನ್ನು ಸರ್ಕಾರದವರು ಯೋಚನೆ ಮಾಡುತ್ತಾರೆ. ಇಷ್ಟು ಹೇಳಿದಮೇಲೆ ಸೂಚಕರು ತಮ್ಮ ಈ ಖೋತಾ ಸೂಚನೆಯನ್ನು ವಾಪಸ್ಸು ತೆಗೆದುಕೊಳ್ಳುವರೆಂದು ನಂಬಿದ್ದೇನೆ.

ಶ್ರೀ ಕೆ. ಸುಬ್ಬರಾಯರು.—ಸ್ವಾಮಿ, ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಸಮಜಾಯಿಷಿಯ ಮೇಲೆ ಸೂಚನೆಯನ್ನು ವಾಪಸ್ಸು ತೆಗೆದುಕೊಳ್ಳಲು ಸಭೆಯ ಅನುಮತಿ ಬೇಡುತ್ತೇನೆ.

The cut motion was, by leave of the Assembly, withdrawn.

Introduction of Compulsory Primary Education in the State.

Sri B. HUTCHE GOWDA (Tumkur District—General).—Sir I beg to move:—

"That the demand under the head '26. Education' for Rs, 2,83,06,000 be reduced by Re. 1 (to raise a debate on the failure of Government to extend the scheme of compulsory primary education throughout the State).

ಸ್ವಾಮಿ, ಈ ಖೋತಾ ಸೂಚನೆಯನ್ನು ಸೂಚಿಸಬೇಕಾದರೆ ಬಹಳ ವಿಷಾದವಾಗುತ್ತದೆ. ನಮ್ಮಲ್ಲಿ ಇಂತಹ ಪರಿಸ್ಥಿತಿ ಬರುತ್ತದೆಂದು ನಾನು ನಂಬಿರಲಿಲ್ಲ. ಈಗ ಮಂತ್ರಿಮಂಡಲದಲ್ಲಿರತಕ್ಕ ಮಂತ್ರಿಗಳು ತಮ್ಮ ಪೂರ್ವಾಶ್ರಮದಲ್ಲಿ ಎಂದರೆ, ಮಂತ್ರಿಗಳಾಗುವುದಕ್ಕಿಂತ ಮುಂಚೆ, ಹಾಸನದಲ್ಲಿ ಒಂದು ಸಮ್ಮೇಳನ ನಡೆದಾಗ್ಯೂ ಅಲ್ಲಿ ವಿದ್ಯಾಭ್ಯಾಸದ ವಿಷಯ ಚರ್ಚೆಗೆ ಬಂದಾಗ, ಪ್ರಾಥಮಿಕ ವಿದ್ಯಾಭ್ಯಾಸವನ್ನು ಸಾರ್ವತ್ರಿಕವಾಗಿ ಪ್ರತಿಯೊಬ್ಬ ಪ್ರಜೆಗೂ ಕೊಡುವುದು ಸರ್ಕಾರದ ಕರ್ತವ್ಯ, ಇದಕ್ಕಾಗುವ ಖರ್ಚು ಸರ್ಕಾರದ ಖಜಾನೆಯ ಮೇಲಿರುವ ಪ್ರಥಮ ಡಿಮ್ಯಾಂಡು ಎಂದು ಹೇಳಿ ಒತ್ತಾಯವಾಗಿ ಮಾತನಾಡಿದರು. ಶ್ರೀಮಾನ್ ಭಾಷ್ಯಂರವರು ವಿನಾ ಮಿಕ್ಕವರೆಲ್ಲರೂ ಹೀಗೆ ಮಾತನಾಡಿದರು.

ಆಮೇಲೆ ತಮಗೇ ಗೊತ್ತಿರುವಂತೆ ಈಚೆಗೆ ಕಾಂಗ್ರೆಸ್ ಸಂಸ್ಥೆ ಪ್ರಬಲಗೊಂಡ ಮೇಲೆ ಪ್ರತಿವರ್ಷವೂ ಪ್ರಜಾಪ್ರತಿನಿಧಿಸಭೆಯಲ್ಲೂ ನ್ಯಾಯವಿಧಾಯಕ ಸಭೆಯಲ್ಲಿಯೂ ಇದರ ಸಂಬಂಧವಾಗಿ ಒಂದೊಂದು ನಿರ್ಣಯ ಬರುತ್ತಲೇ ಇತ್ತು. ಹೀಗೆ ಎಷ್ಟೋ ಒತ್ತಾಯ ಮಾಡಿದ ಮೇಲೆ ಹಿಂದಿನ ಸರ್ಕಾರದವರು ಎಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಹುಡುಗರಿದ್ದಾರೆಯೋ ಅಲ್ಲಿ ಅವರು ನಾಲ್ಕು ವರ್ಷಗಳವರೆಗಾದರೂ ವ್ಯಾಸಂಗ ಮಾಡಲೇಬೇಕೆಂದು ಒಂದು ಪದ್ಧತಿಯನ್ನು ಜಾರಿಗೆ ತಂದರು. ಹೀಗೆ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪ್ರತಿವರ್ಷವೂ ಒಂದೊಂದು ತಾಲ್ಲೂಕಿನಲ್ಲಿ ತರಬೇಕೆಂದು ಕಾನೂನು ಮಾಡಿದರು. ಇದು 1946ರಲ್ಲಿ ಒಂದೊಂದು ಜಿಲ್ಲಾ ಹೆಡ್‌ಕ್ವಾರ್ಟರು ತಾಲ್ಲೂಕಿನಲ್ಲಿ ಜಾರಿಗೆ ಬಂತು. ಮತ್ತು ಕೆಲವು ತಾಲ್ಲೂಕುಗಳಲ್ಲಿ ಪಾರ್ಷಿಯಲ್ ಒತ್ತಾಯ ಶಿಕ್ಷಣ ಜಾರಿಗೆ ಬಂತು. ಈಚೆಗೆ ಇದೆಲ್ಲವೂ ಹಿಂದೆಬಿದ್ದು ಹೋಯಿತು.

ಮತ್ತೊಂದು ವಿಷಯ, ಈ ಸಾರಿಯ ಬಡ್ಜೆಟ್ಟು ಸುಲಭವಾಗಿ ತಿಳಿಯುವ ಹಾಗಿಲ್ಲ. ಎರಡು ಪುಸ್ತಕಗಳನ್ನು ಮಾಡಿಕೊಟ್ಟಿದ್ದರೂ ಯಾವ ಪುಸ್ತಕವನ್ನು ನೋಡಿದರೂ ಗೊತ್ತಾಗುವಂತಿಲ್ಲ. ಒಟ್ಟಿನಲ್ಲಿ ನೋಡಿದರೆ 9 ಜಿಲ್ಲೆಗಳಲ್ಲಿ ಒಂದು ಒಂದು ಸ್ಕೂಲು ಕೂಡ ಹೆಚ್ಚಾಗಿಲ್ಲವೆಂಬುದು ವ್ಯಕ್ತವಾಗುತ್ತದೆ. ಹಿಂದಿನವರ್ಷ ಕೊಟ್ಟಿರುವುದನ್ನು ಹೊಸ ಸ್ಕೂಲೆಂದು ಸೇರಿಸಿದ್ದಾರೆ. ಖಂಡಿತವಾಗಿಯೂ ಹೊಸದಾಗಿ ಯಾವ ಸ್ಕೂಲನ್ನೂ ಕೊಟ್ಟಿಲ್ಲ. ಇದಕ್ಕಿಂತಲೂ ಹೆಚ್ಚು ಖಂಡನೀಯವಾದ ವಿಚಾರ ಮತ್ತಾವುದೂ ಇಲ್ಲವೆಂದು ವ್ಯಸನದಿಂದ ಹೇಳಬೇಕಾಗಿದೆ. ಇನ್ನೊಂದು ವಿಷಯವೇನೆಂದರೆ, ಪ್ರೈಮರಿ ಸ್ಕೂಲುಗಳು ಮುಂದುವರಿದ ಪಟ್ಟಣವಾಸಗಳಲ್ಲಿ ಹೆಚ್ಚಾಗಿರುತ್ತವೆ, ದೊಡ್ಡದೊಡ್ಡ ಕಸಬೆಗಳಲ್ಲಿರುತ್ತವೆ, ಹಳ್ಳಿಯವರಿಗೆ ಸರಿಯಾಗಿ ಸಿಕ್ಕುತ್ತಿಲ್ಲ. ನಮ್ಮ ಸರ್ಕಾರದವರು ಇಂಥ ಯೋಜನೆಗಳನ್ನು ಮಾಡಿದರೆ, ಪಟ್ಟಣಗಳಲ್ಲಿರುವವರಿಗೆ ಇದರ ಫಲ ಸಿಕ್ಕುವವರೆಗೆ ಮುಂದುವರಿಸಿ ಅಲ್ಲಿಗೆ ನಿಲ್ಲಿಸಿ ಬಿಟ್ಟುಬಿಡುತ್ತಾರೆ. ಹಳ್ಳಿಯಲ್ಲಿರುವವರಿಗೆ ಇದರ ಸಹಾಯ ಸಿಕ್ಕುವ ಹೊತ್ತಿಗೆ ನಿಲ್ಲಿಸುತ್ತಾರೆ. ಇದರಿಂದ ಅವರಿಗೆ ಪ್ರಯೋಜನ ಸಿಕ್ಕುತ್ತಿಲ್ಲ.

ಹಳ್ಳಿಗಳಲ್ಲಿ ವಿದ್ಯಾಭ್ಯಾಸದ ತೆರಿಗೆ ಹಾಕಿದ್ದೀರಿ. ಆದರೆ ವಿದ್ಯಾಭ್ಯಾಸವನ್ನು ಅವರ ಮಕ್ಕಳಿಗೆ ಕೊಡದೇ ಇದ್ದಮೇಲೆ ಆರೀತಿ ಹಾಕುವುದು ಯಾವ ಧರ್ಮ, ಇದು ಯಾವ ಸರ್ಕಾರದ ನೀತಿ, ಎಂದು ಕೇಳಬೇಕಾಗಿದೆ. ಇನ್ನೊಂದು ವಿಷಯವೇನೆಂದರೆ ಈಗ ಹಣದ ಮುಗ್ಗಟ್ಟು ಇದೆ. Qualitative not quantitative ಎಂಬ ನೀತಿ ಸರಿಯೇ? ಅದಕ್ಕೇನು, ಅಜೀರ್ಣ ಆಗಿದೆ, ಉಪವಾಸ ಮಾಡೋಣ ಎಂದಹಾಗೆ ಆಗುವುದಿಲ್ಲವೇ? ಅಂಥ ಕೆಲಸ ಮಾಡುವುದಕ್ಕಿಂತಲೂ ಪೂರ್ತಿಯಾಗಿ ನಿಲ್ಲಿಸಿದರೆ ಒಳ್ಳೆಯದು. ಒಂದುವೇಳೆ ಹಣದ ಅಭಾವವಾಗಿದ್ದರೆ, ಈಗ ತಾವು ಕೊಡತಕ್ಕ ಹಣವನ್ನು

ವಿಶ್ವವಿದ್ಯಾನಿಲಯಕ್ಕೆ ಕಡಿಮೆ ಮಾಡಿದ್ದೀರಾ ಎಂದು ಕೇಳುತ್ತೇನೆ. 1948-49ಕ್ಕೆ ಪ್ರೈಮರಿ ವಿದ್ಯಾಭ್ಯಾಸಕ್ಕಾಗಿ 128 ಲಕ್ಷ ರೂಪಾಯಿ ಖರ್ಚಾಗಿದೆ. 1950-51ಕ್ಕೆ 126 ಚಿಲ್ಲರೆ ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಎಂದರೆ 1½ ಲಕ್ಷ ರೂಪಾಯಿ ಕಡಿಮೆ ಆಗಿದೆ. ಅದೇ ವಿಶ್ವವಿದ್ಯಾನಿಲಯಕ್ಕೆ ಎಷ್ಟು ಕೊಟ್ಟಿದ್ದೀರಿ ಎಂಬುದನ್ನು ನೋಡೋಣ. 1948-49ಕ್ಕೆ 39 ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಈಗ 53 ಲಕ್ಷ ರೂಪಾಯಿ ಆಗಿದೆ. 14 ಲಕ್ಷ ರೂಪಾಯಿ ಜಾಸ್ತಿ ಆಗಿದೆ. ವಿಶ್ವವಿದ್ಯಾನಿಲಯಕ್ಕೂ ಕೊಡಿ, ಕೊಡುವುದಕ್ಕೆ ಏನೂ ಅಭ್ಯಂತರವಿಲ್ಲ. ಆದರೆ ಯಾವುದಕ್ಕೆ ಹೆಚ್ಚಿನ ಅವಶ್ಯಕತೆ ಇದೆ ಎಂಬುದನ್ನು ಈ ಸಭೆಯ ಸದಸ್ಯರಿಗೆ ಮನದಟ್ಟು ಮಾಡಬೇಕಾಗಿದೆ. ಅದನ್ನು ಪ್ರತಿಯೊಬ್ಬರೂ ಬಲ್ಲವರಾಗಿದ್ದಾರೆ. ವಿಶ್ವವಿದ್ಯಾನಿಲಯಕ್ಕೆ 14 ಲಕ್ಷ ರೂಪಾಯಿ ಜಾಸ್ತಿ ಕೊಟ್ಟಿರುವಾಗ, ಪ್ರೈಮರಿ ವಿದ್ಯಾಭ್ಯಾಸಕ್ಕೆ 1½ ಲಕ್ಷ ರೂಪಾಯಿ ಕಡಿಮೆಯಾಗಿದೆ ಎಂದರೆ ನಾನು ಹೆಚ್ಚಾಗಿ ಏನು ಹೇಳಲಿ ? ಈ ಖೋತಾ ನಿರ್ಣಯದ ಉದ್ದೇಶವನ್ನು ಸರ್ಕಾರದವರು ಒಪ್ಪಿಕೊಂಡು ಪ್ರತಿವರ್ಷವೂ ಕೊನೇಪಕ್ಷ 400 ಸ್ಕೂಲುಗಳನ್ನಾದರೂ ಪ್ರಾರಂಭಿಸಬೇಕು. 1942 ರಿಂದ ಆರಂಭವಾಗಿರತಕ್ಕ ಈ ಕಾರ್ಯಕ್ರಮವನ್ನು ಮುಂದುವರಿಸಿದರೆ ಹೆಚ್ಚು ಅನುಕೂಲವಾಗುತ್ತದೆಂದು ಹೇಳಿ ಈ ನಿರ್ಣಯವನ್ನು ಸಭೆಯವರ ಅವಗಾಹನೆಗೆ ಇಡುತ್ತೇನೆ.

Mr. SPEAKER.—Cut motion moved:

"That the demand under the head '26 Education' for Rs. 2,83,06,000 be reduced by Re. 1."

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಈ ಖೋತಾ ನಿರ್ಣಯವನ್ನು ನಾನು ಬಹಳ ವಿಷಾದದಿಂದ ವಿರೋಧಿಸಬೇಕಾಗಿದೆ. ಶ್ರೀಮಾನ್ ಹುಚ್ಚೇಗೌಡರು ಸಂಸ್ಥಾನದಲ್ಲಿ ಕಡ್ಡಾಯ ಶಿಕ್ಷಣವನ್ನು ಏಕೆ ಜಾರಿಗೆ ತರಬಾರದು ಎಂದು ಕೇಳಿದ್ದಾರೆ. ಆದರೆ ಅವರು ಒಂದು ವಿಷಯವನ್ನು ತಿಳಿದುಕೊಳ್ಳಬೇಕಾಗಿದೆ. ಇದರ ಉದ್ದೇಶ ವಾಸ್ತವವಾಗಿ ಒಳ್ಳೆಯದಾದರೂ ಪ್ರಕೃತಸ್ಥಿತಿ ಹೇಗಿದೆ ಎಂಬುದನ್ನು ಯೋಚನೆ ಮಾಡಬೇಕು. ಈ ಕಡ್ಡಾಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರುವುದರಿಂದ ಅದರ ಕಷ್ಟ ಎಷ್ಟರಮಟ್ಟಿಗೆ ಇದೆ ಎಂಬುದು ನನಗೆ ಮನವರಿಕೆಯಾಗಿದೆ. ನಾನು ಕಡಕೊಳ ಗ್ರಾಮಕ್ಕೆ ಹೋಗಿದ್ದಾಗ ಹಿಂದಿನದಿನ ಅಮಲ್ದಾರರು ಬಂದು ಹುಡುಗರನ್ನು ಸ್ಕೂಲಿಗೆ ಕಳುಹಿಸಲಿಲ್ಲವೆಂದು 5-6 ಜನಗಳಿಗೆ ಜುಲ್ಮಾನೆ ಹಾಕಿದ್ದರು. ಸುಮಾರು 8 ದಿನಗಳ ಮೇಲೆ ಪುನಃ ನಾನು ಅದೇ ಊರಿಗೆ ಹೋಗಿ, ಆ ಸ್ಕೂಲಿಗೆ ಹೋಗಿದ್ದಾಗ, ಅಲ್ಲಿ 10–15 ಜನ ಹುಡುಗರು ಮಾತ್ರ ಇದ್ದರು. ಏಕೆ ಇಷ್ಟು ಕಮ್ಮಿ ಹುಡುಗರಿದ್ದಾರಲ್ಲಾ ಎಂದು ಆ ಉಪಾಧ್ಯಾಯರನ್ನು ಕೇಳಿದಾಗ ಅವರ ಕಷ್ಟ ಹೇಳಿಕೊಂಡರು. ಕಡ್ಡಾಯ ಶಿಕ್ಷಣ ಕ್ರಮ ಇದೆ. ಹುಡುಗರನ್ನು ಕಳುಹಿಸದೆ ಇದ್ದರೆ ಮೇಲಿನ ಅಧಿಕಾರಿಗಳಿಗೆ ವರದಿ ಮಾಡಬೇಕು. ಆ ರೀತಿ ಮಾಡಿದ್ದಕ್ಕೆ ಕೆಲವರಿಗೆ ಜುಲ್ಮಾನೆ ಹಾಕಿದರು. ಈಗ ಊರಿನವರು ನನ್ನ ಮೇಲೆ ಬಹುಮಟ್ಟಿಗೆ ಕೋಪಗೊಂಡಿದ್ದಾರೆ. ಹುಡುಗರನ್ನು ಸ್ಕೂಲಿಗೆ ಕಳುಹಿಸುವುದಿಲ್ಲ, ವಾಸಕ್ಕೆ ಇದ್ದ ಮನೆಯನ್ನೂ ಕಿತ್ತುಕೊಂಡಿದ್ದಾರೆ, ಈರೀತಿ ಬಹಳ ಕಷ್ಟವಾಗಿದೆ, ನಮಗೆ ರಕ್ಷಣೆ ಕೊಡಬೇಕು ಎಂದು ಉಪಾಧ್ಯಾಯರು ಹೇಳಿದರು. ಈ ವಿಚಾರವನ್ನು ಸ್ವಲ್ಪ ಎಲ್ಲರೂ ಗಮನಿಸಬೇಕು. ಹಳ್ಳಿಗಳಲ್ಲಿ ಜನಗಳ ಸಹಕಾರವಿಲ್ಲದೆ ಈ ಕಾರ್ಯಕ್ರಮ ಜಾರಿಗೆ ಬರುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ಸಾರ್ವಜನಿಕರೂ ಸಹ ಮಕ್ಕಳ ವಿದ್ಯಾಭ್ಯಾಸವಾಗಬೇಕೆಂಬ ದೃಷ್ಟಿಯಿಂದ ಮನಃಪೂರ್ವಕವಾಗಿ ಸಹಕರಿಸಬೇಕು.

ಅಧ್ಯಕ್ಷರು.—ಕಡ್ಡಾಯ ಎಂದ ಮೇಲೆ ಅವರ ಸಹಕಾರ ಬೇಕು ಎಂದರೆ ಏನು ? ಅವರು ಸಹಕರಿಸಲೇಬೇಕು. ಸಹಕರಿಸದೇ ಇರುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಆದ್ದರಿಂದ ಸಂಸ್ಥಾನಾಮಳೆ ಕಡ್ಡಾಯವಾಗಿ ಮಾಡುವುದರ ಬದಲು ಈಗ ಶಾಲೆಗಳಲ್ಲಿ ಉಪಾಧ್ಯಾಯರುಗಳ ಅಭಾವವಿರುವುದರಿಂದ ಈಗ ಸರ್ಕಾರದವರು ಸೂಚಿಸಿರುವಂತೆ ಇರುವ ಹಾಗೆಯೇ ನಿಧಾನವಾಗಿ ನಡೆಯುವುದು ನ್ಯಾಯವಾದದ್ದೆಂದು ಹೇಳುತ್ತೇನೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಮಾನ್ಯ ಅಧ್ಯಕ್ಷರೇ, ಕಾಲ ಕಡಿಮೆ ಆಗಿದೆ. ....

Janab J. MAHOMED IMAM.—I just want to bring to your kind notice that on the last day of the days allotted for voting on Demands for grants at five of the Clock, all the Demands should be put.

Mr. SPEAKER.—That means the last hour when the session closes. That does not mean at five of the Clock. We have agreed to have the session from 8-30 to 1. This is the last hour.

ಜನಾಬ್ ಜೆ. ಮಹಮದ್ ಇಮಾಂರವರು.—ರೂಲ್ಸ್ ಪ್ರಕಾರ ಸಾಯಂಕಾಲದವರೆಗೂ ಅವಕಾಶ ಕೊಡಬೇಕಾಗುತ್ತದೆ.

Sri H. C. DASAPPA.—Do you want to go back on your own plighted word?

Janab J. MAHOMED IMAM.—Rule.

Sri L. SIDDAPPA.—If this rule is to be respected, I think some members will have to go by batches outside, finish their lunch and come back and sit here. (Laughter)

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಈ ಕಡ್ಡಾಯ ವಿದ್ಯಾಭ್ಯಾಸದ ಪದ್ಧತಿಯನ್ನು ಜಾರಿಗೆ ತರಬೇಕೆಂಬುದು ಬಹಳ ದಿನಗಳ ಮಾತು. ಈ ವಿಷಯದಲ್ಲಿ ನಮ್ಮ ಮಾನ್ಯ ಸ್ನೇಹಿತರು—ಈಗ ಹಣ ಕಾಸಿನ ಸಚಿವರಾಗಿದ್ದಾರೆ—ಹಿಂದೆ ಅಸೆಂಬ್ಲಿಯಲ್ಲಿ ಎಷ್ಟು ಜಬರ್‌ದಸ್ತಾಗಿ ಮಾತನಾಡಿದ್ದಾರೆ ಎಂದರೆ:

"Education is the first charge on the revenue of the State. If it is not given effect to, we have a right to file a suit against Government".

ಶ್ರೀ ಎಲ್. ಸಿದ್ದಪ್ಪನವರು.—ಆರೀತಿ ಅವರು ಹೇಳಿದಾಗ ನಾವೆಲ್ಲಾ ಚಪ್ಪಾಳೆ ಹೊಡೆದಿದ್ದೇವೆ. (ಸಭೆಯಲ್ಲಿ ನಗು !)

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಹಿಂದಿನ ಸರ್ಕಾರದವರು ಯಾವ ಒಂದು ಕಾರ್ಯಕ್ರಮವನ್ನು ಪ್ರಾರಂಭಮಾಡಿದರೋ ಅದನ್ನು ಅವರಿಗಿಂತಲೂ ಯಶಸ್ವಿಯಾಗಿ ಮಾಡುವುದಕ್ಕೆ ಬದಲು ಈಗ ಜವಾಬ್ದಾರಿ ಸರ್ಕಾರ ಬಂದಿರುವಾಗಲೂ ಏಕೆ ಮುಗ್ಗರಿಸುತ್ತಾ ಇದ್ದಾರೋ ತಿಳಿಯದಾಗಿದೆ. ಜವಾಬ್ದಾರಿ ಬಹಳ ಜಾಸ್ತಿ ಆಯಿತು ಎಂದುಕಾಣುತ್ತದೆ. ಈ ಕಡ್ಡಾಯ

ವ್ಯಾಭ್ಯಾಸದ ಕ್ರಮದಲ್ಲಿ ನಾನು ಈ ಸಂದರ್ಭದಲ್ಲಿ ಂದು ಮಾತು ಹೇಳಬೇಕಾಗಿದೆ. 1945 ರಲ್ಲಿ ಜ್ಯುಕೇಷನ್ ಆಕ್ಟ್ ತಿದ್ದುಪಡಿ ಮಾಡಿ 10 ವರ್ಷದಲ್ಲಿ ಬಲಾತ್ಕಾರದ ಹಾಜರಾತಿ ಸ್ಕೀಂನ್ನು ಜಾರಿಗೆ ತರ ೇಕೆಂದು ಒಂದು ಆಕ್ಟ್ ತಂದರು. ನಮ್ಮ ಸ್ನೇಹಿತರ ತ್ತಾಯದಿಂದ ಆಗ ಪ್ರಾರಂಭ ಮಾಡಿದೆವು.

ಶ್ರೀ ಎಸ್. ರಂಗರಾಮಯ್ಯನವರು.—ನಿಮಗೆ ಇಷ್ಟ ರಲಿಲ್ಲ ಅನ್ನಿ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ನಮಗೂ ಇಷ್ಟ ತ್ತು. ಶ್ರೀಮಾನ್ ರಂಗರಾಮಯ್ಯನವರು ಈಗ ೊಸದಾಗಿ ಪಾರ್ಲಿಮೆಂಟರಿ ಚಟುವಟಿಕೆಗಳಲ್ಲಿ ಪ್ರವೇಶಿ ದ್ದಾರೆಂದು ಕಾಣುತ್ತದೆ. ಅವರಿಗೆ ಗೊತ್ತಿಲ್ಲದೇ ರಬಹುದು. ಹಿಂದೆ ನಾವು ಕೊಟ್ಟ ಹೇಳಿಕೆಗಳು, ಾವು ಅನುಸರಿಸುತ್ತಿದ್ದ ನೀತಿ, ಇವುಗಳನ್ನು ನೋಡಿ ರೆ ನೀವೇ ಒಪ್ಪುತ್ತೀರಿ, ಇಲ್ಲವೆಂದು ಹೇಳುವುದಿಲ್ಲ. ಮಗೆ ಸ್ವಲ್ಪ ಲಿಮಿಟೇಷನ್ ಇತ್ತು. ಈಗಿನ ಹಾಗೆ ದ್ದಿದ್ದರೆ ಸರ್ಕಾರದ ಆಡಳಿತವನ್ನು ಬುಗುರಿ ಆಡಿಸಿದ ಾಗೆ ಆಡಿಸಬಹುದಾಗಿತ್ತು. ಆಗ ಹಿಡಿತ ಬಹಳ ಾಸ್ತಿಯಾಗಿತ್ತು. ಆದರೂ ಕೂಡ ಎಷ್ಟೇ ಹಣ ಖರ್ಚಾ ದರೂ ಸರಿಯೇ 10 ವರ್ಷದೊಳಗೆ ಕಡ್ಡಾಯ ವಿದ್ಯಾ ್ಯಾಸ ಕ್ರಮವನ್ನು ಜಾರಿಗೆ ತರುತ್ತೇವೆ ಎಂದು ಹೇಳಿ ಪ್ರತಿಯೊಂದು ತಾಲ್ಲೂಕಿನಲ್ಲೂ ಪ್ರಾರಂಭ ಮಾಡ ೇಕೆಂದು ಆಜ್ಞೆ ಮಾಡಿದ್ದೆವು. ಇಲ್ಲಿಯವರೆಗೆ 36 ಾಲ್ಲೂಕುಗಳಲ್ಲಿ ಜಾರಿಗೆ ತರಲಾಗಿದೆ ಎಂದು ನಮ್ಮ ಮಾಜಿ ವಿದ್ಯಾಸಚಿವರು ಹೇಳುತ್ತಾರೆ.

ಹಿಂದೆಲ್ಲ ನೀವು ಹೇಗೆ ಮಾಡುತ್ತಿದ್ದಿರೆಂಬುದನ್ನು ಮರೆಯಬಾರದು. ಆಗಲಿ, ಶ್ರೀ ಕೆ. ಟಿ. ಭಾಷ್ಯಂರವರು ಏಕೋ ಬಹಳ protest ಮಾಡುವ ಹಾಗೆ ಕಾಣುತ್ತೆ. ದ್ದರಿಂದ ನಾನು ಇಲ್ಲಿಗೇ ಈ ವಿಚಾರವನ್ನು ಮುಕ್ತಾಯ ಮಾಡುತ್ತೇನೆ.

Sri K. T. BHASHYAM (Minister for Law and Labour).—It is not a question of protest. I consider that the Speaker was perfectly right, if I may say so with the greatest respect, in putting the guillotine at one o'clock. It will be a very good convention to establish.

Sri H. B. GUNDAPPA GOWDA.—I am prepared to accept the convention. This is the first time that we are coming under that rule. Previously at 5 p.m. the guillotine was being applied. That is apart.

ಇದರ ಬಗ್ಗೆ ನಾನು ಹೇಳಬೇಕಾಗಿರುವುದು ಇಷ್ಟೆ: ಹಿಂದೆಲ್ಲಾ ನೀವು ಹೇಳುತ್ತಿದ್ದುದು, ಆಗಿದ್ದ ಸರ್ಕಾರ ಮಾದರೀ ಸರ್ಕಾರವಲ್ಲ, ನಾವು ಅಧಿಕಾರಕ್ಕೆ ಬಂದರೆ ಹತ್ತು ವರ್ಷಗಳೊಳಗಾಗಿಯೇ ಈ ಒತ್ತಾಯ ಶಿಕ್ಷಣ ಕ್ರಮವನ್ನು ಜಾರಿಗೆ ತರುತ್ತೇವೆ ಎಂಬುದಾಗಿ. ಆದರೆ ನೀವೀಗ ಮಾಡುತ್ತಿರುವುದೇನು ! ನೀವು ಹೇಳಿದ್ದಂತೆ ಆ ಮಾದರೀ ಕ್ರಮವನ್ನು ಏಕೆ ಅನುಸರಿಸಬಾರದು ! ನಾವಿದ್ದಾಗ ವರ್ಷಕ್ಕೆ 300–400 ಹೊಸ ಹೊಸ ಪ್ರೈಮರಿ ಸ್ಕೂಲುಗಳನ್ನು ತೆರೆಯಲಾಗುತ್ತಿತ್ತು. ಅದನ್ನೂ ಈಗ ನೀವು ನಿಲ್ಲಿಸಿಬಿಟ್ಟಿರುತ್ತೀರಿ. ಹಿಂದೆ ಬಡ್ಜೆಟ್ ಮೇಲೆ ಭಾಷಣ ಮಾಡುತ್ತಿರುವಾಗ ವಿಶ್ವ ವಿದ್ಯಾನಿಲಯಗಳಿಗೆ ಹೆಚ್ಚುಹೆಚ್ಚು ಮೊಬಲಗನ್ನು ಒದಗಿಸುವ ಸಲುವಾಗಿ ಪ್ರೈಮರಿ ವಿದ್ಯಾಭ್ಯಾಸಕ್ಕೆ ಹಣವನ್ನು ಕಮ್ಮಿ ಮಾಡಲಾಗಿರುತ್ತೆಂದು ತಿಳಿಸಿದಿರಿ. ಆದರೆ ಈಗ ಪ್ರೈಮರಿ ವಿದ್ಯಾಭ್ಯಾಸಕ್ಕೆ ಕಡಿಮೆ ಮಾಡುವುದು ಯಾವ ನ್ಯಾಯ ಅಥವಾ ಧರ್ಮ? ನೀವು ಹೀಗೆ ಆ ಆಕ್ಟಿಗೇ ವಿರೋಧವಾಗಿ, ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದೀರಿ. ಹತ್ತು ವರ್ಷಗಳಲ್ಲಿ ಅದನ್ನು ಸಂಪೂರ್ಣವಾಗಿ ಜಾರಿಗೆ ತರುತ್ತೇವೆಂದು ಹೇಳಿ, ಆಗಲೇ 2 ವರ್ಷಗಳು ಕಳೆದುಹೋದವು. ನೀವು ಹೀಗೆ ನಿಧಾನಮಾಡುತ್ತಹೋದರೆ ಈ ಒತ್ತಾಯ ಶಿಕ್ಷಣ ಕ್ರಮ ಜಾರಿಗೆ ಬರುವುದೆಂದಿಗೆ ? ಜನರು ವಿದ್ಯಾವಂತರಾಗುವುದೆಂದಿಗೆ ! ಇಂಥಾ ತಿಳಿವಳಿಕೆ ಇಲ್ಲದೆ ಇರುವ ಜನರಿಗೆ, ನೀವು ಸರಿಯಾದವರಿಗೆ ಯೋಚಿಸಿ ಚುನಾವಣೆಗಳಲ್ಲಿ ಓಟು ಮಾಡಿ ಎಂದು ಹೇಳಿದರೆ ಏನು ಸಾಧ್ಯವಾಗುತ್ತದೆ! ಇದನ್ನೆಲ್ಲಾ ಸ್ವಲ್ಪ ಆಲೋಚಿಸಿ ನೋಡಿ. ಆದರೆ ಏನೋ ಟೀಕೆ ಮಾಡಬೇಕೆಂಬ ಉದ್ದೇಶದಿಂದ ಹೀಗೆ ಮಾತನಾಡುತ್ತಾರೆಂದು ಯಾರೂ ಭಾವಿಸಬಾರದು. ಇರತಕ್ಕ ವಾಸ್ತವಾಂಶಗಳನ್ನು ಮನಗಾಣಬೇಕು. ನಿಮ್ಮ ಮಾತಿಗೂ, ನಿಮ್ಮ ನಡತೆಗೂ ಎಷ್ಟು ವ್ಯತ್ಯಾಸವಿದೆ ಯೆಂಬುದನ್ನು ನೀವು ನೋಡಿಕೊಳ್ಳಬೇಕು. ಈಗ ಎಲ್ಲವೂ ನಿಮಗೇ ಗೊತ್ತಾಗುತ್ತದೆ. ಎಜುಕೇಷನ್ ಆಕ್ಟ್ ಜಾರಿಯಲ್ಲಿದ್ದರೂ ಅದಕ್ಕೆ ವಿರೋಧವಾಗಿ ನಡೆಯುತ್ತಿರುತ್ತೀರಿ. ಇದು ಯಾವ ನ್ಯಾಯ ? ಕಾನೂನನ್ನು ಉಪೇಕ್ಷಿಸುವುದು ಸರಿಯಲ್ಲ.

ಶ್ರೀ ಎಲ್. ಸಿದ್ದಪ್ಪನವರು —ಹಿಂದೆ ಶ್ರೀ ಮನ್ಮಮಹಾರಾಜರವರು ಅಪ್ಪಣೆ ಕೊಡಿಸಿದ ಭಾಷಣದ ಮೇಲೆ ತಾವು ಒಂದು ನಿರ್ಣಯವನ್ನು ಮಂಡಿಸಿ, ಅದು ಚರ್ಚೆಯಾಗುತ್ತಿದ್ದ ಕಾಲದಲ್ಲಿ, ಸರ್ಕಾರ ದಿನದಿನಕ್ಕೂ ಹಿಂದೆ ಹೋಗುತ್ತಿದೆ, ಇದು ಮುಂದೆ ಬರುವುದು ಎಂದಿಗೆ ಎಂದು ಭಾಷಣ ಮಾಡುತ್ತಿದ್ದ ಕಾಲದಲ್ಲಿ, "ನೀವು ಈಗೇನು ನೋಡುತ್ತೀರಿ, ಬಡ್ಜೆಟ್ ಮಂಡಿಸುವತನಕ ತಾಳ್ಮೆಯಿಂದಿದ್ದು ನಂತರ ನೋಡಿ" ಎಂದು ಹೇಳಿದ್ದಿರಲ್ಲಾ, ಇದೇ ಬಡ್ಜೆಟ್ ತಾನೆ ತಾವು ಹೇಳಿದ್ದು ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು (ಮುಖ್ಯ ಸಚಿವರು).—ಅದು ಹಾಗಲ್ಲ. ನಾವೂ ಮುಂದುವರಿಯುತ್ತೇವೆ, ಆ ಬಗ್ಗೆ ತಾವೂ ಸ್ವಲ್ಪ ತಾಳ್ಮೆಯಿಂದಿರಬೇಕೆಂದು ಆಗ ತಿಳಿಸಿತ್ತು, ಅಷ್ಟೆ.

ಶ್ರೀ ಎಲ್. ಸಿದ್ದಪ್ಪನವರು.—ಈ ಬಡ್ಜೆಟ್ಟಿನಲ್ಲಿ ಏನೂ ಕಾಣುತ್ತಿಲ್ಲ.

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ತಮಗೆ ಒಂದುವೇಳೆ ಹಾಗೂ ಕಾಣಬಹುದು.

Application of the Guillotine.

Mr. SPEAKER.—It is now One of the clock. The Demands will be put to the vote of the House

The question is :

"That a sum not exceeding Rs. 2,83,06,000 be granted to the Government to defray the charges which will come in course of payment during the year ending 31st day of March 1951, in respect of 'Education'."

The motion was adopted.

Demand No. 21—27. Agriculture—27A. Veterinary.

Mr. SPEAKER.—The question is :

"That a sum not exceeding Rs. 1,09,67,000 be granted to the Government to defray the charges which will come in course of payment during the year ending 31st day of March 1951, in respect of 'Agriculture and Veterinary'."

The motion was adopted.

Demand No. 22—27-B. Horticulture.

Mr. SPEAKER.—The question is :

"That a sum not exceeding Rs. 6,54,000 be granted to the Government to defray the charges which will come in course of payment during the year ending 31st day of March 1951, in respect of 'Horticulture'."

The motion was adopted.

Demand No. 23—27-C. Sericulture—28. Industries and Commerce.

Mr. SPEAKER.—The question is :

"That a sum not exceeding Rs. 16,16,000 be granted to the Government to defray the charges which will come in course of payment during the year ending 31st day of March 1951, in respect of 'Sericulture and Industries and Commerce'."

The motion was adopted.

Demand No. 23-A.—28-A. Department of Labour and Labour Welfare.

Mr. SPEAKER.—The question is :

"That a sum not exceeding Rs. 2,77,000 be granted to the Government to defray the charges which will come in course of payment during the year ending 31st day of March 1951, in respect of 'Department of Labour and Labour Welfare'."

The motion was adopted.

Demand No. 23-B.—28-B. Rural Development Department.

Mr. SPEAKER.—The question is :

"That a sum not exceeding Rs. 52,15,000 be granted to the Government to defray the charges which will come in course of payment during the year ending 31st day of March 1951, in respect of 'Rural Development Department'."

The motion was adopted.

Demand No. 24—29. Co-operative Societies.

Mr. SPEAKER.—The question is :

"That a sum not exceeding Rs. 5,23,000 be granted to the Government to defray the charges which will come in course of payment during the year ending 31st day of March 1951, in respect of 'Co-operative Societies'."

The motion was adopted.

Demand No. 25—30. Grants for Public Improvements.

Mr. SPEAKER.—The question is :

"That a sum not exceeding Rs. 60,30,000 be granted to the Government to defray the charges which will come in course of payment during the year ending 31st day of March 1951, in respect of 'Grants for Public Improvements'."

The motion was adopted.

Demand No. 25-A—31. Army [Non I. S. F. Units]

Mr. SPEAKER.—The question is :

"That a sum not exceeding Rs. 8,38,000 be granted to the Government to defray the charges which will come in course of payment during the year ending 31st day of March 1951, in respect of 'Army [Non I. S. F. Units]'."

The motion was adopted.

Demand No. 25-B—32-B. Expenditure connected with the Food and other Control Measures.

ಅಧ್ಯಕ್ಷರು.—ಮೊದಲು ಡಿಪ್ಪೋಗಳ ಮೇಲೆ ತೆರಿಗೆ ಹಾಕಿದ್ದನ್ನು ಈಗ ಸರ್ಕಾರದವರು ವಾಪಸ್ಸು ತೆಗೆದು ಕೊಂಡಿರುವುದರಿಂದ, ಡಿಮ್ಯಾಂಡ್ ನಂಬರ್ 25 (B) ನಲ್ಲಿ 62,56,000 ರೂಪಾಯಿಗಳೆಂದು ಸೂಚಿಸಿರುವುದಕ್ಕೆ 20 ಲಕ್ಷ ರೂಪಾಯಿಗಳನ್ನು ಈಗ ಹೆಚ್ಚಾಗಿ ಹೊಸದಾಗಿ ಸೇರಿಸಬೇಕಾಗಿ ಹಣಕಾಸಿನ ಸಚಿವರು ಸೂಚಿಸಿರುವುದರಿಂದ ಇದನ್ನು 82,56,000 ರೂಪಾಯಿಗಳೆಂದು, ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳಬೇಕೆಂದು ಸೂಚಿಸುತ್ತೇನೆ.

The question is :

"That a sum not exceeding Rs. 82,56,000 be granted to the Government to defray the charges which will come in course of payment during the year ending 31st day of March 1951, in respect of 'Expenditure connected with the Food and other Control Measures'."

The motion was adopted.

Demand No. 26—Contribution to Funds.

Mr. SPEAKER.—The question is :

" That a sum not exceeding Rs. 24,00,000 be granted to the Government to defray the charges which will come in course of payment during the year ending 31st day of March 1951, in respect of 'Contributions to Funds'."

The motion was adopted.

Demand No. 27-A—XXIV-A. Road Transport Department—2. Working Expenses.

Mr. SPEAKER.—The question is :

"That a sum not exceeding Rs. 35,03,000 be granted to the Government to defray the charges which will come in course of payment during the year ending 31st day of March 1951, in respect of 'Road Transport Department Working Expenses'."

The motion was adopted.

Demand No. 28—XXV. Krishnaraja Sagar Irrigation Works—Working Expenses.

Mr. SPEAKER.—The question is :

"That a sum not exceeding Rs. 6,17,000 be granted to the Government to defray the charges which will come in course of payment during the year ending 31st day of March 1951, in respect of 'Krishnaraja Sagar Irrigation Works—Working Expenses'."

The motion was adopted.

Demand No. 29—XXV-A. Hydro-Electric Works—Working Expenses. 36. Miscellaneous Electrical Expenditure.

Mr. SPEAKER.—The question is :

" That a sum not exceeding Rs. 75,71,000 be granted to the Government to defray the charges which will come in course of payment during the year ending 31st day of March 1951, in respect of 'Hydro-Electric Works—Working Expenses, Miscellaneous Electrical Expenditure'."

The motion was adopted.

Demand No. 30—XXVII. Iron and Steel Works and Cement Plant—Working Expenses including amount transferred to Depreciation Fund.

Mr. SPEAKER.—The question is :

" That a sum not exceeding Rs. 2,06,76,700 be granted to the Government to defray the charges which will come in course of payment during the year ending 31st day of March 1951, in respect of 'Iron and Steel Works and Cement Plant—Working Expenses and Depreciation'."

The motion was adopted.

Demand No. 31—XXVIII. K.G.F. Water Works—Working Expenses and Depreciation.

Mr. SPEAKER.—The question is :

"That a sum not exceeding Rs. 1,60,000 be granted to the Government to defray the charges which will come in course of payment during the year ending 31st day of March 1951, in respect of 'K.G.F. Water Works—Working Expenses and Depreciation'."

The motion was adopted.

Demand No. 32—II. Forest—1. Sandal Oil—Operation Expenses. XXIX. Industrial Works—Working Expenses including Depreciation.

Mr. SPEAKER.—The question is :

" That a sum not exceeding Rs. 1,37,19,300 be granted to the Government to defray the charges which will come in course of payment during the year ending 31st day of March 1951, in respect of 'Industrial Works—Working Expenses including Depreciation'."

The motion was adopted.

Demand No. 33—XXX. Chamaraj Sagar and Water Works—Working Expenses and Depreciation.

Mr. SPEAKER.—The question is :

" That a sum not exceeding Rs. 12,97,000 be granted to the Government to defray the charges which will come in course of payment during the year ending 31st day of March 1951, in respect of 'Chamaraj Sagar and Water Works—Working Expenses and Depreciation'."

The motion was adopted.

Demand No. 35—38. Krishnaraja Sagar Irrigation Works.

Mr. SPEAKER.—The question is :

"That a sum not exceeding Rs. 10,59,000 be granted to the Government to defray the charges which will come in course of payment during the year ending 31st day of March 1951, in respect of "Krishnaraja Sagar Irrigation Works (Capital)."

The motion was adopted.

Demand No. 36—38-A. Hydro-Electric Works.

Mr. SPEAKER.—The question is :

"That a sum not exceeding Rs. 2,54,75,000 be granted to the Government to defray the charges which will come in course of payment during the year ending 31st day of March 1951, in respect of 'Hydro-Electric Works (Capital)'."

The motion was adopted.

Demand No. 37—38-B.—Other Irrigation Works not met from Revenue.

Mr. SPEAKER.—The question is :

"That a sum not exceeding Rs. 33,00,000 be granted to the Government to defray the charges which will come in course of payment during the year ending 31st day of March 1951, in respect of 'Irrigation Works not met from Revenue (Capital)'."

The motion was adopted.

Demand No. 38—39. Industrial and Other Works.

Mr. SPEAKER.—The question is :

"That a sum not exceeding Rs. 22,75,000 be granted to the Government to defray the charges which will come in course of payment during the year ending 31st day of March 1951, in respect of 'Industrial and Other Works (Capital)'."

The motion was adopted.

Demand No. 39—40. Iron and Steel Works and Cement Plant.

Mr. SPEAKER.—The question is :

"That a sum not exceeding Rs. 1,24,00,000 be granted to the Government to defray the charges which will come in course of payment during the year ending 31st day of March 1951, in respect of 'Iron and Steel Works and Cement Plant (Capital)'."

The motion was adopted.

Demand No. 39-A—41. Food Supply Department Transactions not met from Revenue.

Mr. SPEAKER.—The question is :

"That a sum not exceeding Rs. 1,00,00,000 be granted to the Government to defray the charges which will come in course of payment during the year ending 31st day of March 1951, in respect of 'Food Supply Transactions not met from Revenue'."

The motion was adopted.

Demand No. 40.—Road Fund.

Mr. SPEAKER.—The question is :

"That a sum not exceeding Rs. 5,41,200 be granted to the Government to defray the charges which will come in course of payment during the year ending 31st day of March 1951, in respect of 'Road Fund'."

The motion was adopted.

Demand No. 42.—Industrial Development Fund.

Mr. SPEAKER.—The question is :

"That a sum not exceeding Rs. 50,000 be granted to the Government to defray the charges which will come in course of payment during the year ending 31st day of March 1951, in respect of 'Industrial Development Fund'."

The motion was adopted.

Demand No. 43.—Depreciation Funds.

Mr. SPEAKER.—The question is :

"That a sum not exceeding Rs. 20,99,000 be granted to the Government to defray the charges which will come in course of payment during the year ending 31st day of March 1951, in respect of 'Depreciation Funds'."

The motion was adopted.

Demand No. 44.—Advances and Loans.

Mr. SPEAKER.—The question is :

"That a sum not exceeding Rs. 1,59,29,500 be granted to the Government to defray the charges which will come in course of payment during the year ending 31st day of March 1951, in respect of 'Advances and Loans'."

The motion was adopted.

Delay in the presentation of the Public Accounts Committee Report.

Sri L. SIDDAPPA (Shimoga District—General).—From a perusal of the Programme of Business for this House, I find there is no provision made for the presentation of the report of the Committee on Public Accounts. Rule 76 of the Mysore Legislative Rules says:

"The report of the Committee on Public Accounts on the accounts of the Government and the report of the audit officer thereon shall be presented to the Assembly by the Chairman of the said Committee."

ಹೀಗೆ ತಿಳಿಸಿರುವುದರಿಂದ ಆ ಆಡಿಟ್ ಅಂಡ್ ಅಪ್ರೋಪ್ರಿಯೇಷನ್ ಸಮಿತಿಯವರ ವರದಿ ಈ ಸಭೆಯ ಮುಂದೆ ಯಾವಾಗ ಚರ್ಚೆಗೆ ಬರುತ್ತೆ?

ಅಧ್ಯಕ್ಷರು.—ಆ ವರದಿ ಇನ್ನೂ ತಯಾರಾಗಿ ಬಂದಿಲ್ಲ.

Sri H. C. DASAPPA (Minister for Finance and Industries).—With reference to the question of placing the report of the Public Accounts Committee or of Audit and Appropriation, I have to make this statement. We have placed the Accounts of 1948-49 in the Budget. In view of the fact that we have not had sufficient time to get the explanations in regard to the points arising in the accounts to enable the preparation of the Audit and Appropriation Report and placing the same before the Public Accounts Committee, I am sorry it has not been possible for us to place the report of the Public Accounts Committee before this Session. Usually, we used to have time till the end of June of a year. This time as the House is fully aware, we have the financial year up to end of March 1950. That means we have lost about three months. I however hope to present the report of the Public Accounts Committee at the next session of the Assembly. I will try my very best. As to when we are going to have the next Session, it is for the Hon'ble Leader of the House to decide in consultation with the Hon'ble Speaker of the House. If I should venture on a guess, it may probably be during the latter half of the month of May.

Sri L. SIDDAPPA.—It should be before the end of the financial year.

Sri H. C. DASAPPA.—As regards the report of the Public Accounts Committee, it is generally made available to the Members at the time of the presentation of the budget. But I do not think there is anything sacrosanct about the affair. There have been instances when for more than a year or even two years,—not in this place; we have been observing the rule fairly well—there have been instances in other places.........

Sri H. B. GUNDAPPA GOWDA.—Let us not copy them.

Sri H. C. DASAPPA.—There have been cases where on account of special circumstances they have not been able to meet at all. In that respect we have maintained a very good tradition. I certainly assure the Hon'ble Members that we do not wish to depart from that. It is an exceptional year where the accounts could not be got ready in time. After all it does take some time to make up all the figures, have the accounts made out, call for explanations, etc., and that period cannot be advanced merely because we had to advance the year of the budget. I think that is a matter which our friends will appreciate.

ಶ್ರೀ ಎಲ್. ಸಿದ್ದಪ್ಪನವರು.—ಹಾಗಾದರೆ ಬಜೆಟ್ಟಿನಲ್ಲಿ 1948–49ಕ್ಕೆ ಕೊಡಲಾಗಿರುವ ಅಂಕಿ ಅಂಶಗಳೆಲ್ಲ 'incorrect figures' ತಾನೆ?

Sri H. C. DASAPPA.—The various items in the Audit and Appropriation Report have got to be presented to the Public Accounts Committee with the explanations. All these things have got to be collated and that takes time.

Sri H. B. GUNDAPPA GOWDA.—Do you have Excess Demands passed pertaining to this period? They ought to go before the Public Accounts Committee and before you pass Excess Demands and get an appropriation for it, should not the report of the Public Accounts Committee be ready?

Sri H. C. DASAPPA.—That is a matter which will be taken up when I present the Demands.

Sri L. SIDDAPPA.—In view of the difficulties explained by the Minister for Finance, we will excuse him.

ಅಧ್ಯಕ್ಷರು.—ಸಭೆಯು ಮತ್ತೆ ನಾಳೆ ಬೆಳಗ್ಗೆ 8-30 ಗಂಟೆಗೆ ಸೇರುತ್ತದೆ. ಕ್ರಿಯಾಲೋಪದ ವಿಚಾರದಲ್ಲಿ ಅಧ್ಯಕ್ಷರು ರೂಲಿಂಗ್ ಕೊಡುವ ಮುನ್ನ ಚರ್ಚೆಗೆ ಅವಕಾಶ ಕೊಡಲು 3ನೆಯ ತಾರೀಖು ಸಾಯಂಕಾಲ 4 ಗಂಟೆಗೆ ಅವಕಾಶ ಕೊಡಲಾಗಿತ್ತು. ಅದನ್ನು 4ನೆಯ ತಾರೀಖು ಸಾಯಂಕಾಲ 4 ಗಂಟೆಗೆ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಸಭಾನಾಯಕರ ಮತ್ತು ಪಾರ್ಟಿನಾಯಕರ ಒಪ್ಪಿಗೆಯನ್ನು ತೆಗೆದುಕೊಂಡು, ಆ ದಿವಸ ಅದನ್ನು ಚರ್ಚಿಸುವಂತೆ ಗೊತ್ತುಮಾಡಲಾಗಿದೆ.

The Assembly adjourned at Ten Minutes past One of the Clock to meet again at Thirty Minutes past Eight of the Clock on Friday, 31st March 1950.